# ಕರ್ನಾಟಕ ವಿಧಾನ ಪರಿಷತ್ತು

**ಗುರುವಾರ 28ನೇ ಜೂನ್ 2012 ರಂದು**

**ಸದನವು ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆ 04 ನಿಮಿಷಕ್ಕೆ ಸಮಾವೇಶಗೊಂಡಿತು**

**ಹಂಗಾಮಿ ಸಭಾಪತಿಯರಾದ (ಶ್ರೀ ಎಂ.ವಿ.ರಾಜಶೇಖರನ್) ರವರು**

**ಸಭಾಪತಿಯವರಾದ. (ಶ್ರೀ ಎಂ.ವಿ.ರಾಜಶೇಖರನ್) ರವರು ಸಭಾಪೀಠದಲ್ಲಿ ಉಪಸ್ಥಿತರಿದ್ದರು**

(ಸಭೆಯು "ವಂದೇ ಮಾತರಂ" ದೇಶಭಕ್ತಿ ಗೀತೆಯೊಡನೆ ಪ್ರಾರಂಭವಾಯಿತು)

## 1. ನೂತನ ಸದಸ್ಯರ ಪ್ರಮಾಣ ವಚನ

ಹಂಗಾಮಿ ಸಭಾಪತಿಯವರ:- ಈಗ ನೂತನ ಸದಸ್ಯರಾದ ಶ್ರೀ ಅಮರನಾಥ ಪಾಟೀಲರವರು ಪ್ರಮಾಣ ವಚನ ಸ್ವೀಕರಿಸುವುದು.

(ನೂತನ ಸದಸ್ಯರಾದ ಶ್ರೀ ಅಮರನಾಥ ಪಾಟೀಲ್ (ಪದವೀಧರ ಕ್ಷೇತ್ರ) ರವರು ಪ್ರಮಾಣ ವಚನವನ್ನು ಸ್ವೀಕರಿಸಿ, ವಿಧಾನ ಪರಿಷತ್ತಿನ ದಾಖಲು ಪುಸ್ತಕದಲ್ಲಿ ಸಹಿ ಮಾಡಿದರು)

ಹಂಗಾಮಿ ಸಭಾಪತಿಯವರು:- ಸಭಾಪತಿಗಳ ಚುನಾವಣೆಗೆ ಸಂಬಂಧಪಟ್ಟಂತೆ ನಾಲ್ಕು ಪ್ರಸ್ತಾವಗಳು ಇವೆ. ಈ ಎಲ್ಲ ಪ್ರಸ್ತಾವಗಳು ಮಾನ್ಯ ಡಿ. ಹೆಚ್. ಶಂಕರಮೂರ್ತಿಯವರ ಹೆಸರಿಗೆ ಬಂದಿವೆ. ಮೊದಲನೆಯ ಪ್ರಸ್ತಾವದಲ್ಲಿ ಮಾನ್ಯ ಶಂಕರಮೂರ್ತಿಯವರ ಹೆಸರನ್ನು ಮಾನ್ಯ ಮುಖ್ಯಮಂತ್ರಿಗಳಾಗಿರುವಂತಹ ಶ್ರೀ ಡಿ. ವಿ. ಸದಾನಂದಗೌಡರು ಸೂಚಿಸಿದ್ದಾರೆ ಡಾ|| ಎ.ಹೆಚ್. ಶಿವಯೋಗಿಸ್ವಾಮಿಯವರು ಪ್ರಸ್ತಾವವನ್ನು ಅನುಮೋದಿಸಿದ್ದಾರೆ. ಎರಡನೆಯ ಪ್ರಸ್ತಾವದಲ್ಲಿ ಶ್ರೀ ಗೋ. ಮಧುಸೂದನ್ ಅವರು ಶ್ರೀ. ಡಿ.ಹೆಚ್. ಶಂಕರಮೂರ್ತಿಯವರ ಹೆಸರನ್ನು ಸೂಚಿಸಿದ್ದಾರೆ, ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ಆ ಪ್ರಸ್ತಾವವನ್ನು ಅನುಮೋದಿಸಿದ್ದಾರೆ. ಮೂರನೆ ಪ್ರಸ್ತಾವದಲ್ಲಿ ಶ್ರೀ ಅರುಣ್ ಶಹಾಪುರ್ ಅವರು ಶ್ರೀ.ಡಿ.ಹೆಚ್. ಶಂಕರಮೂರ್ತಿಯವರ ಹೆಸರನ್ನು ಸೂಚಿಸಿದ್ದಾರೆ. ಶ್ರೀ.ಆರ್.ಕೆ. ಸಿದ್ದರಾಮಣ್ಣನವರು ಆ ಪ್ರಸ್ತಾವವನ್ನು ಅನುಮೋದಿಸಿದ್ದಾರೆ. ಕೊನೆಯದಾಗಿ ಶ್ರೀ ರಘುನಾಥರಾವ್ ಮಲ್ಕಾಪುರೆ ಅವರು ಸಹ ಶ್ರೀ ಡಿ.ಹೆಚ್. ಶಂಕರಮೂರ್ತಿ ಅವರ ಹೆಸರನ್ನು ಸೂಚಿಸಿದ್ದಾರೆ. ಶ್ರೀ ನಾರಾಯಣ ಸಾ ಬಾಂಡಗೆ ಅವರು ಆ ಪ್ರಸ್ತಾಪವನ್ನು ಅನುಮೋದಿಸುತ್ತಾರೆ. ಈಗ ಮೊದಲನೆಯ ಪ್ರಸ್ತಾವವನ್ನು ತೆಗೆದುಕೊಳ್ಳಲಾಗುತ್ತದೆ. ಮೊದಲನೆಯ ಪ್ರಸ್ತಾವವನ್ನು ನೀಡಿರುವಂತಹ ಮಾನ್ಯ ಡಿ.ವಿ. ಸದಾನಂದಗೌಡರು ಪ್ರಸ್ತಾವವನ್ನು ಮಂಡಿಸಬೇಕು.

**02. ಸಭಾಪತಿ ಸ್ಥಾನಕ್ಕೆ ಚುನಾವಣೆ**

**ಶ್ರೀ ಡಿ. ವಿ. ಸದಾನಂದಗೌಡ (ಮುಖ್ಯಮಂತ್ರಿಗಳು):–** ಸನ್ಮಾನ್ಯ ಸಭಾಪತಿಯವರೇ ಶ್ರೀ.ಡಿ.ಹೆಚ್.ಶಂಕರಮೂರ್ತಿ ಅವರನ್ನು ವಿಧಾನ ಪರಿಷತ್ತಿನ ಸಭಾಪತಿಯವರನ್ನಾಗಿ ಚುನಾಯಿಸಬೇಕೆಂದು ಸೂಚಿಸುತ್ತಿದೇನೆ.

**ಡಾ॥ ಎ.ಹೆಚ್.ಶಿವಯೋಗಿಸ್ವಾಮಿ (ಸರ್ಕಾರದ ಮುಖ್ಯಸಚೇತಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಾನಂದಗೌಡರು ಸೂಚಿಸಿರುವ ಪ್ರಸ್ತಾವವನ್ನು ನಾನು ಅನುಮೋದಿಸುತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಹಂಗಾಮಿ ಸಭಾಪತಿಯವರು:–** ಶ್ರೀ ಸದಾನಂದಗೌಡರು ಸೂಚಿಸಿರುವ ಹಾಗೂ ಡಾ॥ ಎ. ಹೆಚ್. ಶಿವಯೋಗಿಸ್ವಾಮಿಯವರು ಅನುಮೋದಿಸಿರುವ ಪ್ರಸ್ತಾವ ಈ ರೀತಿ ಇದೆ.

"ಶ್ರೀ ಡಿ.ಹೆಚ್.ಶಂಕರಮೂರ್ತಿ ಅವರನ್ನು ವಿಧಾನ ಪರಿಷತ್ತಿನ ಸಭಾಪತಿಯವರವನ್ನಾಗಿ ಚುನಾಯಿಸುವುದು"

**ಪ್ರಸ್ತಾವ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು ಮತ್ತು ಶ್ರೀ ಡಿ.ಹೆಚ್. ಶಂಕರಮೂರ್ತಿ ಅವರನ್ನು ಸಭಾಪತಿಯವರನ್ನಾಗಿ ಚುನಾಯಿಸಲಾಯಿತು.**

**ಹಂಗಾಮಿ ಸಭಾಪತಿಯವರು:–** ಮೊದಲನೆಯ ಪ್ರಸ್ತಾವ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿರುವುದರಿಂದ ಉಳಿದ ಪ್ರಸ್ತಾವಗಳನ್ನು ಮತಕ್ಕೆ ಹಾಕುವ ಅವಶ್ಯಕತೆ ಇಲ್ಲದಿರುವುದರಿಂದ ಮಾನ್ಯ ಶಂಕರಮೂರ್ತಿಯವರು ವಿಧಾನ ಪರಿಷತ್ತಿನ ಸಭಾಪತಿಗಳಾಗಿ ಸರ್ವಾನುಮತದಿಂದ ಚುನಾಯಿಸಲ್ಪಟ್ಟಿದ್ದಾರೆಂದು ಘೋಷಿಸುತೇನೆ. ಈಗ ಪ್ರಸ್ತಾವದ ಸೂಚಕರಾಗಿರುವಂತಹ ಮಾನ್ಯ ಮುಖ್ಯಮಂತ್ರಿಗಳು, ಅನುಮೋದಕರಾದ ಡಾ॥ ಎ. ಹೆಚ್. ಶಿವಯೋಗಿ ಸ್ವಾಮಿಯವರು, ವಿರೋಧಪಕ್ಷದ ಉಪ ನಾಯಕರಾಗಿರುವಂತಹ ಮಾನ್ಯ ಎಸ್. ಆರ್. ಪಾಟೀಲ್ ರವರು ಮತ್ತು ಮಾನ್ಯ ಎಂ.ಸಿ. ನಾಣಯ್ಯನವರು

ಮಾನ್ಯ ಡಿ. ಹೆಚ್. ಶಂಕರಮೂರ್ತಿಯವರನ್ನು ಸಭಾಪತಿಗಳ ಪೀಠಕ್ಕೆ ಕರೆತರಬೇಕೆಂದು ಕೋರುತೇನೆ.

**(ಈ ಹಂತದಲ್ಲಿ ಮಾನ್ಯ ಮುಖ್ಯಮಂತ್ರಿಗಳು, ವಿರೋಧಪಕ್ಷದ ಉಪ ನಾಯಕರಾಗಿರುವಂತಹ ಮಾನ್ಯ ಎಸ್.ಆರ್. ಪಾಟೀಲ್‌ರವರು ಮತ್ತು ಸದಸ್ಯರಾದ ಮಾನ್ಯ ಎಂ. ಸಿ. ನಾಣಯ್ಯನವರು ಮತ್ತು ಸರ್ಕಾರದ ಮುಖ್ಯ ಸಚೇತರಾದ ಡಾ॥ ಎ. ಹೆಚ್. ಶಿವಯೋಗಿಸ್ವಾಮಿಯವರು ಮಾನ್ಯ ಡಿ.ಹೆಚ್. ಶಂಕರಮೂರ್ತಿಯವರನ್ನು ಸಭಾಪತಿಗಳ ಪೀಠಕ್ಕೆ ಕರೆ ತಂದರು)**

**(ಈ ಹಂತದಲ್ಲಿ ಹಂಗಾಮಿ ಸಭಾಪತಿಗಳು ಸಭಾಪತಿಗಳ ಪೀಠದಿಂದ ನಿರ್ಗಮಿಸಿದರು. ಮಾನ್ಯ ಡಿ.ಹೆಚ್. ಶಂಕರಮೂರ್ತಿಯವರು ಸಭಾಪತಿಗಳ ಪೀಠವನ್ನು ಅಲಂಕರಿಸಿದರು.)**

**03 ಅಭಿನಂದನೆ**

ವಿಷಯ:- ಶ್ರೀ ಡಿ. ಹೆಚ್. ಶಂಕರಮೂರ್ತಿಯವರು ನೂತನ ಸಭಾಪತಿಗಳಾಗಿ ಆಯ್ಕೆಯಾಗಿರುವ ಬಗ್ಗೆ

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು):-** ಸನ್ಮಾನ್ಯ ಸಭಾಪತಿಯವರೇ, ನೂತನ ಸಭಾಪತಿಗಳ ಆಯ್ಕೆ ಪ್ರಕ್ರಿಯೆಗಾಗಿ ಈ ದಿನದ ಅಧಿವೇಶನವನ್ನು ಕರೆಯಲಾಗಿದೆ. ಮೊನ್ನೆ ದಿನ ಹಂಗಾಮಿ ಸಭಾಪತಿಗಳಾಗಿ ಆಯ್ಕೆ ಆದಂತಹ ಮಾನ್ಯ ಎಂ.ವಿ. ರಾಜಶೇಖರನ್‌ರವರು ಇವತ್ತು ಆ ಸ್ಥಾನದಲ್ಲಿ ಕುಳಿತುಕೊಂಡು ಮುಂದಿನ ದಿನಗಳಲ್ಲಿ ಎಲ್ಲವೂ ಚೆನ್ನಾಗಿ ನಡೆಯಬೇಕು ಎನ್ನುವಂತಹ ಭಾವನೆಗಳನ್ನು ಆ ಸ್ಥಾನದಲ್ಲಿ ಬಿಟ್ಟು ಹೋಗಿದ್ದಾರೆ ಎಂದು ನಾನು ಭಾವಿಸುತ್ತಿದ್ದೇನೆ. ಮೊನ್ನೆಯಿಂದ ಇವತ್ತಿನವರೆಗೆ ಹಂಗಾಮಿ ಸಭಾಪತಿಗಳಾಗಿ ಕಾರ್ಯವನ್ನು ನಿರ್ವಹಿಸಿ ಇವತ್ತು ಸಭಾಪತಿಗಳ ಆಯ್ಕೆಯನ್ನು ನಡೆಸಿಕೊಟ್ಟಂಥ ಮಾನ್ಯ ರಾಜಶೇಖರನ್ ಅವರಿಗೆ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ. ಮಾನ್ಯ ಶಂಕರಮೂರ್ತಿಯವರಿಗೆ ಶುಭಾಶಯಗಳನ್ನು ಸಲ್ಲಿಸುವುದು ಜವಾಬ್ದಾರಿ

ಮಾತ್ರ ಎಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ನಿರಂತರವಾಗಿ ಈ ಸದನದ ಸಭಾಪತಿಗಳಾಗಿ ಕಳೆದ ಹಲವಾರು ದಿನಗಳಿಂದ ಬಹಳ ಅದ್ಭುತವಾಗಿ ಕಾರ್ಯನಿರ್ವಹಣೆ ಮಾಡಿದ್ದಾರೆ. ಅವರ ಕಾರ್ಯವೈಖರಿಯನ್ನು ಇಡೀ ರಾಜ್ಯ ಮತ್ತು ದೇಶ ಮೆಚ್ಚಿಕೊಂಡಿರುವುದನ್ನು ನಾವು ಕಂಡಿದ್ದೇವೆ. ಎಲ್ಲ ಸದಸ್ಯರಿಗೂ ಚರ್ಚೆಯಲ್ಲಿ ಭಾಗವಹಿಸಲು ಅವಕಾಶ ನೀಡುವುದು ಮತ್ತು ವ್ಯವಸ್ಥಿತವಾಗಿರುವಂತಹ ಸಭಾ ನಡವಳಿಕೆಗಳನ್ನು ಅನುಷ್ಠಾನಗೊಳಿಸಿರುವುದು. ನಮ್ಮ ವಿಧಾನ ಪರಿಷತ್ತಿನ ಎಲ್ಲ ವಿಧಿವಿಧಾನಗಳನ್ನು ಅತ್ಯಂತ ಯಶಸ್ವಿಯಾಗಿ ಚಾಚೂ ತಪ್ಪದೇ ಸದಸ್ಯರ ಮೂಲಕ ಅನುಷ್ಠಾನಗೊಳಿಸಿರುವಂತಹದು ಮತ್ತು ಯಾವುದೇ ಕ್ಲಿಷ್ಟ ಸಮಸ್ಯೆಗಳು ಬಂದಂತಹ ಸಂದರ್ಭದಲ್ಲಿ ಎಲ್ಲರಿಗೂ ಒಪ್ಪಿಗೆ ಆಗುವಂತಹ ರೀತಿಯಲ್ಲಿ ತೀರ್ಮಾನಗಳನ್ನು ತೆಗೆದುಕೊಂಡಿರುವುದು, ಇದೆಲ್ಲವೂ ಕೂಡ ಅದ್ಭುತ ಎಂದು ನಾನು ತಿಳಿದುಕೊಳ್ಳುತ್ತಿದ್ದೇನೆ. ವಿರೋಧ ಪಕ್ಷದವರಿಗೂ ಕೂಡ ನಾನು ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ ನಮ್ಮ ಪಕ್ಷದ ವತಿಯಿಂದ ಶ್ರೀ ಡಿ.ಹೆಚ್. ಶಂಕರಮೂರ್ತಿಯವರನ್ನು ಸಭಾಪತಿಗಳ ಸ್ಥಾನಕ್ಕೆ ನಮ್ಮ ಪಕ್ಷದ ಅಧ್ಯಕ್ಷರು ಘೋಷಣೆ ಮಾಡಿದ ಕೂಡಲೇ ನಾನು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿರುವಂತಹ ಡಾ|| ಜಿ. ಪರಮೇಶ್ವರ್ ಅವರಿಗೆ ಮತ್ತು ಜೆ.ಡಿ.(ಎಸ್)ಪಕ್ಷದ ಅಧ್ಯಕ್ಷರಾಗಿರುವಂತ ಶ್ರೀ ಹೆಚ್.ಡಿ. ಕುಮಾರಸ್ವಾಮಿ ಯವರೊಡನೆ ಫೋನ್ ಮೂಲಕ ಮಾತನಾಡಿ ಅವರ ಸಹಕಾರವನ್ನು ಕೇಳಿದರೆ, ಅವರುಗಳು ಈ ನಿಟ್ಟಿನಲ್ಲಿ ಪೂರ್ಣ ಪ್ರಮಾಣದ ಸಹಕಾರ ಇದೆ ಎನ್ನುವಂತಹ ಮಾತನ್ನು ಹೇಳಿದರು. ಅವರಿಗೂ ಕೂಡ ನಾನು ಹೃತ್ಪೂರ್ವಕವಾದ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ಎಲ್ಲವೂ ಸುಸೂತ್ರವಾಗಿ ನಡೆದಿದೆ, ಈ ಸದನ ಮುಂದೆಯೂ ಸಹ ಸುಸೂತ್ರವಾಗಿ ನಡೆಯುತ್ತದೆ ಎನ್ನುವುದಕ್ಕೆ ಇದೊಂದು ಮುನ್ಸೂಚನೆ ಎಂದು ನಾನು ಭಾವಿಸುತ್ತೇನೆ.

ಸಭಾಪತಿಗಳಾಗಿರುವಂತಹ ತಾವು ಇನ್ನೂ ಹೆಚ್ಚಿನ ಯಶಸನ್ನು ಗಳಿಸಿ, ಈ ಸದನದಲ್ಲಿ ನಡೆಯುವಂತಹ ಕಲಾಪಗಳು ಮತ್ತು ಚರ್ಚೆಗಳು ದೇಶದ

ಬೇರೆ ಸದನಗಳಿಗೆ ಮಾರ್ಗದರ್ಶಿ ಸೂಚನೆಗಳನ್ನು ನೀಡುವಂತಾಗಲಿ ಎಂದು ಶುಭ ಹಾರೈಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀಎಸ್.ಆರ್. ಪಾಟೀಲ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತ ರಾದವರು):–** ಸನ್ಮಾನ್ಯ ಸಭಾಪತಿಯವರೇ ತಮ್ಮ ಆಯ್ಕೆ ನ್ಯಾಯಸಮ್ಮತವಾದ ಆಯ್ಕೆ ಎಂದು ಹೇಳುವುದಕ್ಕೆ ನನಗೆ ಬಹಳ ಸಂತೋಷವಾಗುತ್ತಿದೆ. ತಮ್ಮ ಸ್ಥಾನ ಉನ್ನತವಾಗಿರುವಂತಹ ಮತ್ತು ಬಹಳ ಪವಿತ್ರವಾಗಿರುವಂತಹ ಸ್ಥಾನವಾಗಿದೆ. ನನ್ನ ದೃಷ್ಟಿಯಲ್ಲಿ ಅದು ನ್ಯಾಯಮೂರ್ತಿಗಳ ಸ್ಥಾನವಿದೆ. ತಾವು ಎರಡನೇ ಇನ್ನಿಂಗ್ಸ್ ಪ್ರಾರಂಭ ಮಾಡಿದ್ದೀರಿ. ಮೊದಲನೆಯ ಇನ್ನಿಂಗ್ಸ್‌ನ್ನು ಅತ್ಯಂತ ಯಶಸ್ವಿಯಾಗಿ ಪೂರೈಸಿದ್ದೀರಿ. ನಮ್ಮೆಲ್ಲರಿಗೂ ತೃಪ್ತಿ ತರುವಂತಹ ಕೆಲಸ ಕಾರ್ಯಗಳು ತಮ್ಮಿಂದ ಆಗಿವೆ. ಸದನದ ವಿಧಿವಿಧಾನಗಳನ್ನು ಎತ್ತಿ ಹಿಡಿಯುವುದರ ಜೊತೆಗೆ ಶತಮಾನಗಳ ಇತಿಹಾಸವುಳ್ಳಂಥ ಈ ವಿಧಾನ ಪರಿಷತ್ತಿನ ಘನತೆ ಗೌರವಗಳನ್ನು ಹೆಚ್ಚಿಸುವುದಕ್ಕೆ ತಮ್ಮದೇ ಆಗಿರುವಂತಹ ಕೊಡುಗೆಗಳನ್ನು ನೆನಪಿಸಿಕೊಳ್ಳುವುದಕ್ಕೆ ನನಗೆ ಬಹಳ ಸಂತೋಷವಾಗುತ್ತಿದೆ. ತಾವು ಬಹಳ ದಕ್ಷತೆ, ನಿಷ್ಠೆ, ಸೇವಾ ಮನೋಭಾವ, ಪ್ರಾಮಾಣಿಕತೆಯಿಂದ ಮತ್ತು ಕರ್ತವ್ಯವೇ ದೇವರು ಎನ್ನುವ ಭಾವನೆಯಿಂದ ಆ ಸ್ಥಾನದಲ್ಲಿ ಕುಳಿತುಕೊಂಡು ನಮ್ಮೆಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅತ್ಯುತ್ತಮವಾಗಿರುವಂತಹ ಕಾರ್ಯ ಮಾಡಿದ್ದೀರಿ. ತಮ್ಮ ಮುಂದಿನ ಎರಡನೇ ಇನ್ನಿಂಗ್ಸ್‌ನಲ್ಲಿಯೂ ಕೂಡ ಅಷ್ಟೆ ದಕ್ಷತೆ, ಪ್ರಾಮಾಣಿಕತೆ ಮತ್ತು ನಿಷ್ಠೆಯಿಂದ ನಮ್ಮೆಲ್ಲರನ್ನು ವಿಶ್ವಾಸಕ್ಕೆ ತೆಗೆದುಕೂಂಡು ತಾವು ಕೆಲಸವನ್ನು ಮಾಡುತ್ತೀರಿ ಎನ್ನುವಂತಹ ಅದಮ್ಯವಾಗಿರುವಂತಹ ವಿಶ್ವಾಸ ನಮ್ಮೆಲ್ಲರಿಗೂ ಇದೆ. ನಮ್ಮ ಪಕ್ಷ ಮತ್ತು ಜಾತ್ಯಾತೀತ ಜನತಾ ಪಕ್ಷದವರೆಲ್ಲರೂ ತಾವು ಅವಿರೋಧವಾಗಿ ಆಯ್ಕೆಯಾಗುವುದಕ್ಕೆ ಸಹಕಾರವನ್ನು ಕೊಟ್ಟಿದ್ದೇವೆ, ತಾವು ಆ ಸ್ಥಾನಕ್ಕೆ ಯೋಗ್ಯರು ಎನ್ನುವುದು ಅದರ ಅರ್ಥವಾಗಿದೆ. "ಸರಿಯಾದ ವ್ಯಕ್ತಿ ಸರಿಯಾದ ಸ್ಥಾನದಲ್ಲಿ" ಎನ್ನುವ ಮಾತಿನಂತೆ ತಾವು ಮುಂದಿನ ದಿನಗಳಲ್ಲಿ ಸಭಾಪತಿಗಳಾಗಿ ನಮ್ಮ ರಾಜ್ಯಕ್ಕೆ ಅಷ್ಟೇ ಅಲ್ಲ, ಇಡೀ ರಾಷ್ಟ್ರಕ್ಕೆ ಆದರ್ಶ

ಸಭಾಪತಿಗಳು ಎನ್ನುವಂತಹ ಹೆಸರನ್ನು ಪಡೆಯಬೇಕೆನ್ನುವುದು ನಮ್ಮ ಅಭಿಲಾಷೆಯಾಗಿದೆ.

ಈಗಾಗಲೇ ಮಾನ್ಯ ಸಭಾನಾಯಕರು ಹಾಗೂ ಮುಖ್ಯಮಂತ್ರಿಗಳು ಹೇಳಿದ ಹಾಗೆ ಕೇವಲ ನಾಡಿನ ಮೆಚ್ಚುಗೆಯನ್ನು ಮಾತ್ರ ಗಳಿಸಿದ್ದಂಥವರಲ್ಲ. ತಾವು ಇಡೀ ದೇಶವೇ ಮೆಚ್ಚುಗೆಯನ್ನು ಗಳಿಸಿದಂಥ ವ್ಯಕ್ತಿ ಎಂದು ಅವರೇನು ಉದಾಹರಣೆಯನ್ನು ಕೊಟ್ಟಿದ್ದಾರೆ, ಅದಕ್ಕೆ ನಾನೂ ಸಹ ನನ್ನ ಧ್ವನಿಗೂಡಿಸಿ ತಮ್ಮ ಮುಂದಿನ ಅವಧಿ ಅತ್ಯಂತ ಯಶಸ್ವಿ ಅವಧಿಯಾಗಿ ಆಳುವ ಪಕ್ಷ ಹಾಗೂ ಪ್ರತಿಪಕ್ಷ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ನ್ಯಾಯಸಮ್ಮತವಾದಂಥ ನಿರ್ಣಯಗಳಿಂದ ಎಲ್ಲಾ ವಿಧಿ-ವಿಧಾನಗಳನ್ನು, ಶತಮಾನಗಳ ಇತಿಹಾಸವುಳ್ಳಂಥ ಈ ವಿಧಾನ ಪರಿಷತ್ತಿನ ಘನತೆ-ಗೌರವವನ್ನು ಹೆಚ್ಚಿಸಿ, ಇದಕ್ಕೆ ಇನ್ನು ಬೆಲೆ ಬರುವ ದಿಸೆಯಲ್ಲಿ ತಾವು ಪ್ರಾಮಾಣಿಕವಾದಂಥ ಪ್ರಯತ್ನವನ್ನು ಮಾಡುತ್ತೀರಿ ಎನ್ನುವ ವಿಶ್ವಾಸದೊಂದಿಗೆ ಮತ್ತೊಮ್ಮೆ ತಮಗೆ ಶುಭ ಕೋರಿ, ನನ್ನ ಮಾತುಗಳನ್ನು ಮುಗಿಸುತ್ತೇನೆ ನಮಸ್ಕಾರ.

**ಡಾ॥ ಎ.ಎಚ್. ಶಿವಯೋಗಿಸ್ವಾಮಿ (ಪಧವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ವಿಶೇಷವಾಗಿ ಎರಡನೆಯ ಬಾರಿಗೆ ತಾವು ಸಭಾಪತಿಗಳಾಗಿ ಆಯ್ಕೆಯಾಗಿರುವುದು ನಮಗೆಲ್ಲಾ ಬಹಳ ಹರ್ಷವನ್ನುಂಟು ಮಾಡಿದೆ. ವೈಯಕ್ತಿಕವಾಗಿ ನನಗೆ ಹೆಚ್ಚಿನ ಸಂತೋಷವಾಗಲು ಕಾರಣವೇನೆಂದರೆ, ತಾವು ಮೂಲತಃ ನಮ್ಮೂರಿನವರು. 'ಡಿ. ಹೆಚ್. ಶಂಕರಮೂರ್ತಿಗಳು' ಎಂದರೆ 'ದಾವಣಗೆರೆ ಹನುಮಂತಪ್ಪ ಶಂಕರಮೂರ್ತಿಗಳು;' ಹಾಗಾಗಿ ನಮ್ಮೂರಿನವರು ಮತ್ತೊಂದು ಸಾರಿ ಸಭಾಪತಿಗಳ ಪೀಠದಲ್ಲಿ ಕುಳಿತಿರುವುದಕ್ಕೆ ನನಗೆ ತುಂಬಾ ಸಂತೋಷವಾಗಿದೆ. ಕಳೆದ ಸಲದ ಅಧಿವೇಶನದಲ್ಲಿ ತಾವು ಬಹಳಷ್ಟು ಒಳ್ಳೆಯ ವಿಷಯಗಳನ್ನು ತಿಳಿಸಿದ್ದೀರಿ. ನಮ್ಮ ಅಧಿವೇಶನ ಪ್ರಾರಂಭವಾಗುವಂಥಾದ್ದು 'ವಂದೇ ಮಾತರಂ' ಗೀತೆಯೊಂದಿಗೆ ಮತ್ತು ಅದು ಮುಕ್ತಾಯವಾಗುವಂಥಾದ್ದು ರಾಷ್ಟ್ರಗೀತೆಯಾದ 'ಜನ ಗಣ ಮನ' ದಿಂದ ಎನ್ನುವಂಥಾದ್ದನ್ನು ತಾವೇನು ಪ್ರಾರಂಭ ಮಾಡಿದಿರಿ, ಇದು ಬಹುಶಃ ಉಳಿದ ಸದನಗಳಿಗೆ, ಬೇರೆ ಬೇರೆ ರಾಜ್ಯಗಳಿಗೆ ಇದೊಂದು ಮಾದರಿ ಎಂದು ನಾನು

ಭಾವಿಸಿದ್ದೇನೆ. ಅದೇ ರೀತಿ ತಮ್ಮ ಅವಧಿಯಲ್ಲಿ ತಾವು ನಾಲ್ಕು ಜನ ರಾಷ್ಟ್ರೀಯ ಪುರುಷರ ಭಾವಚಿತ್ರವನ್ನು ಏನು ಅನಾವರಣ ಮಾಡಿದಿರಿ, ಅದು ಕೂಡ ನಮಗೆಲ್ಲರಿಗೂ ಪ್ರೇರಣಾದಾಯಕವಾದ ಕೆಲಸವನ್ನು ಮಾಡಿದ್ದೀರಿ, ತಮ್ಮ ನೇತೃತ್ವ, ಮಾರ್ಗದರ್ಶನ ನಮಗೆಲ್ಲಾ ಸದಾ ಇರಲಿ ಎನ್ನತಕ್ಕಂಥ ಪ್ರಾರ್ಥನೆಯನ್ನು ಮಾಡುತ್ತಿದ್ದೇನೆ ಮತ್ತು ವಿಶೇಷವಾಗಿ ತಾವು ಸಭಾಪತಿಗಳಾಗಿ ಅವಿರೋಧವಾಗಿ ಆಯ್ಕೆಯಾಗಿರುವುದಕ್ಕೆ ಸಹಕಾರ ನೀಡಿದಂಥ ಪ್ರತಿಪಕ್ಷದ ಎಲ್ಲಾ ನಾಯಕರಿಗೆ, ಅವರ ಪಕ್ಷದ ಅಧ್ಯಕ್ಷರುಗಳಿಗೆ ಮತ್ತು ನಮ್ಮ ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ನಮ್ಮ ಪಕ್ಷದ ರಾಜ್ಯ ಅಧ್ಯಕ್ಷರಿಗೆ ಮತ್ತು ಎಲ್ಲಾ ಪಕ್ಷಗಳ ಹಿರಿಯರಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ತಮ್ಮ ಮುಂದಿನ ಅವಧಿಯೊಳಗೆ ಇನ್ನು ಹೆಚ್ಚು ಅರ್ಥಪೂರ್ಣವಾಗಿ ನಮ್ಮ ಸದನ ಕಲಾಪಗಳನ್ನು ಮಾಡುತ್ತದೆ ಎನ್ನುವ ಆಶಯವನ್ನು ವ್ಯಕ್ತಪಡಿಸಿ, ತಮಗೆ ಮತ್ತೊಮ್ಮೆ ವಂದಿಸಿ, ನಾನು ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ನಮಸ್ಕಾರ.

**ಶ್ರೀ ಯಂ. ಸಿ. ನಾಣಯ್ಯ (ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಪ್ರಪ್ರಥಮವಾಗಿ ಇಡೀ ಸದನ ತಮ್ಮನ್ನು ಅವಿರೋಧವಾಗಿ ಆಯ್ಕೆ ಮಾಡಿದೆ. ಬಹುಶಃ ನಿಮ್ಮ ಪಕ್ಷದಲ್ಲಿಯೂ ಕೂಡ ನಿಮ್ಮ ಆಯ್ಕೆಯ ಬಗ್ಗೆ ಯಾವುದೇ ವಿರೋಧ ಕಂಡು ಬರದೇ ಇದ್ದುದು ಬಹುಶಃ ಇತ್ತೀಚಿನ ದಿನಗಳಲ್ಲಿ ಒಂದು ಅಪರೂಪದ ಘಟನೆ ಎಂದು ನಾನು ಹೇಳಿದರೆ ಅದನ್ನು ಯಾರೂ ಕೂಡ ತಪ್ಪಾಗಿ ಅರ್ಥೈಸಬಾರದು. ಕಾರಣ, ಶಂಕರಮೂರ್ತಿಯವರನ್ನು ಬಿಟ್ಟರೆ ಅವರಷ್ಟು ಅನುಭವವಿರುವವರು, ಆ ಸ್ಥಾನವನ್ನು ತುಂಬುವವರು, ಆ ಸ್ಥಾನದಲ್ಲಿದ್ದು ನಿಷ್ಪಕ್ಷಪಾತವಾಗಿ ಕೆಲಸ ಮಾಡುವವರು ನಿಮ್ಮಲ್ಲಿ ಇಲ್ಲ ಎನ್ನುವ ಭಾವನೆಯನ್ನು ನಾವು ನೀವು ಎಲ್ಲರೂ ಒಪ್ಪಿಕೊಳ್ಳೋಣ. ಅದನ್ನು ನಾವುಗಳು ಒಪ್ಪಿಕೊಳ್ಳಲೇಬೇಕು. ಈ ಹಿನ್ನೆಲೆಯಲ್ಲಿ ಬಹುಶಃ ನಿಮ್ಮ ಈ ಕಾರ್ಯ ಮತ್ತು ಮುಖ್ಯಮಂತ್ರಿಗಳ ಕಾರ್ಯ ಬಹಳ ಸುಗಮವಾಯಿತಲ್ಲಾ ಎಂದು ಹೇಳುತ್ತಿರತಕ್ಕಂಥಾದ್ದು ನಮಗೆಲ್ಲಾ ಬಹಳ ಸಂತೋಷವನ್ನುಂಟು ಮಾಡಿದೆ. ಅದರಲ್ಲಿಯೂ ವಿರೋಧ ಪಕ್ಷದಲ್ಲಿ ಪ್ರಮುಖ

ಪಕ್ಷವಾಗಿರತಕ್ಕಂಥ ಕಾಂಗ್ರೆಸ್ ಮತ್ತು ಎರಡನೆಯ ಸ್ಥಾನದಲ್ಲಿರತಕ್ಕಂಥ ನಾವು ಒಟ್ಟಾರೆ ಸೇರಿದರೆ ನಮಗೆ ಇರುವುದು. ಕೇವಲ 29 ಸಂಖ್ಯಾಬಲ ಮಾತ್ರ, ನೀವು 41 ಜನರು ಇದ್ದೀರಿ. ಆದರೆ ಆ 29 ಜನ ಇದ್ದರೂ ಸಹ ನಾವೂ ಸಹ, ಇರಲಿ ತಪ್ಪೇನಾಗುತ್ತದೆ, ರಾಜಕೀಯದಲ್ಲಿ ತಾತ್ವಿಕವಾದಂಥ ನೆಲೆಗಟ್ಟಿನ ಆಧಾರದ ಮೇಲೆ ಒಬ್ಬರನ್ನು ಸಭಾಪತಿಯವರ ಸ್ಥಾನಕ್ಕೆ ಸೂಚಿಸಬಹುದು ಎನ್ನುವ ಭಾವನೆಯನ್ನು ಬೆಳಸಿಕೊಳ್ಳಬಹುದಿತ್ತು. ಆದರೆ ನಾವುಗಳು ಆ ಕೆಲಸವನ್ನು ಮಾಡಲ್ಲಿಲ್ಲ. ನಾವು ಏಕೆ ಆ ಕೆಲಸವನ್ನು ಮಾಡಲಿಲ್ಲವೆಂದರೆ, it

demonstrates the political sagacity and maturity of the Members of this House. ಆದರೆ ಇಂಥದ್ದೇ ಪರಿಸ್ಥಿತಿ ನಮ್ಮ ರಾಷ್ಟ್ರ ಮಟ್ಟದಲ್ಲಿಯೂ ಸಹ ಆಗಬೇಕು ಎನ್ನತಕ್ಕಂಥಾದ್ದು ನಮ್ಮ ಒಂದು ಚಿಂತನೆಯಾಗಿದೆ. ಬಹುಶಃ ಒಂದು ಹೆಜ್ಜೆ ಮುಂದೆ ಹೋಗಿ ನಾವು ಹೇಳುವುದಾದರೆ, ತಾವುಗಳ ಯಾರೂ ಸಹ ಅಪಾರ್ಥ ಭಾವಿಸಬೇಡಿ. ನಾವು-ನೀವು ಎಲ್ಲರೂ ಕೂಡ ಉತ್ತಮ, ಸ್ವಷ್ಟ ಮತ್ತು ನೀತಿಯುತವಾದಂಥ ರಾಜಕಾರಣವನ್ನು ಮಾಡಬೇಕೆಂದು ನಾವೆಲ್ಲರೂ ಬಯಸುವವರೆ, ಅನೀತಿಯುತವಾಗಿರತಕ್ಕಂಥ ರಾಜಕಾರಣ, ಆ ರಾಜಕಾರಣದ ಮುಖಾಂತರ ಪ್ರಜಾತಂತ್ರದ ವ್ಯವಸ್ಥೆಯನ್ನು, ಸ್ವಾಸ್ಥ್ಯವನ್ನು ಹಾಳುಮಾಡುವಂಥ ರಾಜಕಾರಣ ಬಂದಾಗ ಅದರಿಂದ ನಾವು-ನೀವು ಕೆಡುವುದಲ್ಲ, ಇಡೀ ರಾಷ್ಟ್ರವೇ ಕೆಡುತ್ತದೆ ಎಂದು ಹೇಳತಕ್ಕಂಥ, ನಿರ್ವಿವಾದದಂಥ ಸತ್ಯವನ್ನು ಸಹ ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಈ ಹಿನ್ನಲೆಯಲ್ಲಿ ನನಗೆ ಅನ್ನಿಸುತ್ತದೆ, ನಮ್ಮ ಸಂಸತ್‌ನಲ್ಲಿರತಕ್ಕಂಥ ಸುಮಾರು 545 ಜನ ಸದಸ್ಯರು ಯಾರಿದ್ದಾರೆ ಮತ್ತು ರಾಜ್ಯಸಭೆಯಲ್ಲಿರತಕ್ಕಂಥ ಸದಸ್ಯರು, ಅವರೆಲ್ಲಗಿಂತಲೂ ನಮ್ಮ ಸದನದ ಬಗ್ಗೆ ನಾನು ಹೇಳುವುದಾದರೆ, ರಾಜಕೀಯದ ಮುತ್ಸದ್ಧಿತನದಲ್ಲಿ ನಾವು ಒಂದು ಹೆಜ್ಜೆ ಮುಂದಿದ್ದೇವೆ ಎಂದು ಹೇಳಿದರೆ ಖಂಡಿತವಾಗಿ ಯಾರೂ ಸಹ ಅಪಾರ್ಥವಾಗಿ ಭಾವಿಸಿಕೊಳ್ಳಬೇಡಿ. ಇದಕ್ಕೆ ಕಾರಣವೇನು ಎಂದು ತಾವು ಕೇಳಬಹುದು. ರಾಷ್ಟ್ರಾದ್ಯಕ್ಷರ ಚುನಾವಣೆಯಾಗುವಾಗ, ನಿಮ್ಮ ಪರಿಸ್ಥಿತಿ ಇದ್ದ ಹಾಗೆ ರಾಷ್ಟ್ರಾಧ್ಯಕ್ಷರ ಚುನಾವಣೆಯ ಸಹ ಆಗುತ್ತಿದೆ. ಶೇಕಡ 70 ರಿಂದ 75 ರಷ್ಟು ಮತ ಯುಪಿಎ ಅಭ್ಯರ್ಥಿಯಾಗಿರತಕ್ಕಂಥ ಶ್ರೀಯುತ ಪ್ರಣಬ್

ಮುಖರ್ಜಿ ಈ ರಾಷ್ಟ್ರ ಕಂಡ ಒಬ್ಬ ಅತ್ಯಂತ ಮೇಧಾವಿ, ಒಬ್ಬ ಉತ್ತಮ ರಾಜಕಾರಣಿ, ಸಜ್ಜನಿಕೆಯ ರಾಜಕಾರಣಿ. ದೇಶದ ಇತಿಹಾಸದಲ್ಲಿ ಅವರು ಮಾಡಿರತಕ್ಕಂಥ ಹತ್ತಾರು ಕೆಲಸಗಳನ್ನು ನಾವು ನೆನೆಸಿಕೊಳ್ಳಬೇಕಾಗಿರತಕ್ಕಂಥ ಒಬ್ಬ ರಾಜಕಾರಣಿ. ಅವರ ಹೆಸರನ್ನು ಎಲ್ಲರೂ ಸೇರಿ ಒಪ್ಪಿ ಇಡೀ ರಾಷ್ಟ್ರಕ್ಕೆ ಮಾದರಿಯಾಗತಕ್ಕಂಥ ಪರಿಸ್ಥಿತಿಯನ್ನು ಪ್ರಪಂಚದ ದೇಶಗಳ ಮಧ್ಯ ನಾವು ಮಾಡಬೇಕಾದಂಥ ಪರಿಸ್ಥಿತಿಯನ್ನು ನಿರ್ಮಾಣ ಮಾಡದೇ ಕೇವಲ ಸಾಂಕೇತಿಕವಾಗಿ ಅವರ ವಿರುದ್ಧ ಒಂದು ಅಭ್ಯರ್ಥಿಯನ್ನು ನಿಲ್ಲಿಸತಕ್ಕಂಥ ಪರಿಸ್ಥಿತಿಯನ್ನು ನಿರ್ಮಾಣ ಮಾಡಿ ಬಹುಶಃ ತಮ್ಮ ಆಯ್ಕೆಯನ್ನು, ಆ ಆಯ್ಕೆಯೊಂದಿಗೆ ಹೋಲಿಕೆ ಮಾಡಿದರೆ ನಾವು ನಿಜವಾಗಿ ರಾಜಕೀಯವಾಗಿ ಒಂದು ಹೆಜ್ಜೆ ಎತ್ತರದಲ್ಲಿ ನಿಲ್ಲುತ್ತೇವೆ ಎಂದು ಯಾರೂದರೂ ಭಾವಿಸುತ್ತೀರ, ಇಲ್ಲವಾ? ನಾವುಗಳು ಆ ರೀತಿಯಾಗಿ ಭಾವಿಸಲೇಬೇಕು. The Members of this House have demonstrated the political maturity much more then thouse Members at the Centre including all political parties. ಆದ್ದರಿಂದ ಬಹುಶಃ ಈ ಎಲ್ಲಾ ಹಿರಿಮೆ, ಗರಿಮೆ, ಎತ್ತರ ಎಲ್ಲವೂ ಕೂಡ ನಾನು ಹೇಳುತ್ತೇನೆ, ನಿಮಗೆ ಮತ್ತು ಈ ಸದನಕ್ಕೆ ಸಲ್ಲಬೇಕು ಎಂದು ಹೇಳುತ್ತಿರತಕ್ಕಂಥಾದ್ದು ನಮ್ಮೆಲ್ಲರ ಆಶಯ. ಆ ಕೆಲಸವನ್ನು ನಾವುಗಳು ಮಾಡಿದ್ದೇವೆ.

ಮಾನ್ಯ ಮುಖ್ಯಮಂತ್ರಿಗಳಿಗೆ ಇಷ್ಟು ದೊಡ್ಡ ಪ್ರಮಾಣದ political craftsmanship ಇದೆಯೇ ಎಂದು ಒಂದೊಂದು ಸಲ ನಾನು ಯೋಚನೆ ಮಾಡುತ್ತಿದ್ದೆ. ಅವರು ತಮ್ಮ political craftsmanship ನ್ನು ಈಗ demonstrate ಮಾಡಿದರು. ಯಾರಾದರೂ ಇದರ ಒಳಹೊಕ್ಕು ನೋಡಿದ್ದೀರಾ ಎಂದು ನನಗೆ ಅರ್ಥವಾಗಿಲ್ಲ. political craftsmanship ನ್ನು ಅವರು demonstrate ಮಾಡಿದರು. ಕಾರಣವೇನೆಂದರೆ, ಮಾನ್ಯ ಸಭಾಪತಿಯವರು ಸಭಾಪತಿಗಳಾಗಿ ಅಧಿಕಾರವನ್ನು ತ್ಯಾಗ ಮಾಡಿದ್ದು 21ನೇ ತಾರೀಖಿನಂದು. ಬಹುಶಃ ನಮಗೆಲ್ಲಾ ಗೊತ್ತಿರುವ ಹಾಗೆ ಸಭಾಪತಿಯವರ ಚುನಾವಣೆ, ಉಪ ಸಭಾಪತಿಯವರ ಚುನಾವಣೆ ಬಂದಾಗ ಬಹಳ ದಿವಸಗಳರೆಗೆ ಅದನ್ನು

ಮುಂದುವರೆಸಿಕೊಂಡು ಹೋಗುತ್ತಿದ್ದೆವು. ಉಪ ಸಭಾಪತಿಗಳೇ ಸಭಾಪತಿಗಳ ಸ್ಥಾನದಲ್ಲಿ ಸುಮಾರು ಒಂದು ವರ್ಷಗಳವರೆಗೆ ಕೆಲಸ ಮಾಡಿಕೊಂಡು ಹೋಗುತ್ತಿರಕ್ಕಂಥಾದ್ದನ್ನು ನಾವೆಲ್ಲರೂ ಇಲ್ಲಿ ನೋಡಿದ್ದೇವೆ. ಆದರೆ ಅಂತಹದ್ದಕ್ಕೆ ಯಾವುದಕ್ಕೂ ಆಸ್ಪದವನ್ನು ಕೊಡಬಾರದು ಎಂದು ಹೇಳಿ ಎಲ್ಲಾದರೂ ಮುಂದೆ ರಾಜಕೀಯ ವಿಪ್ಲವಗಳು ಆದಾತು ಎಂದು ಹೇಳುತ್ತಿರತಕ್ಕಂಥಾದ್ದನ್ನು ಮುಂಚೆಯೇ ಯೋಚನೆ ಮಾಡಿಕೊಂಡು, 23ನೇ ತಾರೀಖಿನಂದು ಸಚಿವ ಸಂಪುಟ ಸಭೆಯನ್ನು ಕೂಡಲೇ ಕರೆದು, ಯಾರೆಲ್ಲಾ ಬೆಂಗಳೂರಿನಲ್ಲಿದ್ದರೂ ಅವರುಗಳನ್ನು ಕರೆದುಕೊಂಡು 28ನೇ ತಾರೀಖಿನಂದು ಮಾನ್ಯ ಸಭಾಪತಿಯವರ ಚುನಾವಣೆ ಎಂದು ದಿನಾಂಕವನ್ನು ನಿಗದಿ ಮಾಡಿ, ಈ ಆಯ್ಕೆಯನ್ನು ಯಾರೂ ಕೂಡ ಇನ್ನು ಬೇರೆ ಬೇರೆ ತರಹದಲ್ಲಿ ಯೋಚನೆ ಮಾಡಲಿಕ್ಕೆ ಆಗದೇ ಇರತಕ್ಕಂಥ ಪರಿಸ್ಥಿತಿಯನ್ನು ನಿರ್ಮಾಣ ಮಾಡಿರತಕ್ಕಂಥ ಈ ಕೌಟಿಲ್ಯನ ಚಿಂತನೆ ಇತ್ತಲ್ಲ, ಅದನ್ನು ಮಾನ್ಯ ಸದಾನಂದಗೌಡರು...

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರಿಗೆ ಅಭಿನಂದನೆಯನ್ನು ಸಲ್ಲಿಸುವುದನ್ನು ಬಿಟ್ಟು ರಾಜಕಾರಣದ ಬಗ್ಗೆ ಮಾತನಾಡುತ್ತಿದ್ದಾರೆ.

**ಸಭಾಪತಿಯವರು:–** ಅವರು ಹೇಳಲಿ ಬಿಡಿ, ಮಧ್ಯದಲ್ಲಿ ಮಾತನಾಡಬೇಡಿ. ದಯಮಾಡಿ ಕುಳಿತುಕೊಳ್ಳಿ, ಅವರು ಮಾತನಾಡಲಿ.

**ಶ್ರೀ ಯಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಯವರೇ, ಅವರಿಗೆ ಇದನ್ನೆಲ್ಲಾ ಕೇಳಲಿಕ್ಕೆ ಕಷ್ಟವಾಗುತ್ತದೆಯೇ? Don't worry. ನಾನು ಹೇಳುತ್ತೇನೆ, ಸಂಸದೀಯ ವ್ಯವಸ್ಥೆಯಲ್ಲಿ ಈ ತರಹದ್ದನ್ನು ಮಾಡದೇ ಹೋದರೆ, let's not make the debate drabbed.

**ಸಭಾಪತಿಯವರು:–** ಅವರು ಮಾತನಾಡಲಿ ಬಿಡಿ, ಮಧ್ಯದಲ್ಲಿ ಬಾಯಿ ಹಾಕಬೇಡಿ.

**Sri M.C.NANAIAH:-** Let there be something. ಈ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಹೇಳುವುದೇನೆಂದರೆ,

ಅವರು ಈ ಕಾರ್ಯವನ್ನು ಬಹಳ ಬೇಗ ಮಾಡಿದರು, ಅದನ್ನು ನಾನು ಮೆಚ್ಚುತ್ತೇನೆ. ಬಹುಶಃ ಈ ಒಂದು ಆಯ್ಕೆಗೆ ನಾಳೆಯ ದಿವಸ ಎಲ್ಲಾದರೂ ಮೀನಾಮೇಷ ಎಣಿಸಿಕೊಂಡು ಅದಕ್ಕೆ ಪರ-ವಿರೋಧ ಎನ್ನುವುದು ಬರಬಾರದು. ಸಭಾಪತಿಗಳು ಹಾಗೂ ಸಭಾಧ್ಯಕ್ಷರ ಆಯ್ಕೆಯಲ್ಲಿ ನಿಜವಾಗಿ ಇದು ಬರಬಾರದು. ಅದು ರಾಜಕೀಯವಾಗಿರತಕ್ಕಂಥ ಒಂದು ವಸ್ತು ಅಥವಾ ಚರ್ಚೆಯ ವಸ್ತುವಾಗಬಾರದು. ಆ ಕೆಲಸವನ್ನು ಮಾಡಿರತಕ್ಕಂಥ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳೇ, ನಿಮಗೆ ನಾನು ಹೇಳುವುದೇನೆಂದರೆ, ರಾಜಕಾರಣದಲ್ಲಿ ನಿಮ್ಮ ಬುದ್ಧಿವಂತಿಕೆ ಇದೆಯಲ್ಲಾ, ಅದನ್ನು ತಾವು demonstrate ಮಾಡಿದ್ದೀರಿ. ಬಹುಶಃ ಅದೇ ತರಹದ ಬುದ್ಧಿವಂತಿಕೆಯ political craftsmanship ಇದೆಯಲ್ಲಾ, ಇದನ್ನು ನಾನು ಈ ಸಂದರ್ಭದಲ್ಲಿ ಎಲ್ಲಿಗೆ ತೆಗೆದುಕೊಂಡು ಹೋಗುತ್ತೇನೆಂದರೆ, ವಿಧಾನಸಭೆಗೆ 60ನೇ ವರ್ಷದ ವಾರ್ಷಿಕೋತ್ಸವವಾಯಿತು. ಆ ಸಂದರ್ಭದಲ್ಲಿ ವಿಧಾನಸಭೆಯ ಸಭಾಂಗಣದಲ್ಲಿ ನಾವೆಲ್ಲರೂ ಒಟ್ಟಿಗೆ ಸೇರಿದೆವು. ನಾವೆಲ್ಲರೂ ಸೇರಿದಾಗ ಒಬ್ಬರು ಗಣ್ಯರು ಭಾಗವಹಿಸಿದ್ದರು. ನಮ್ಮ ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿ ರಾಜ್ಯಾಂಗವನ್ನು ಹೊಸದಾಗಿ ಬರೆಯಬೇಕು ಎಂದು ಶ್ರೀಮಾನ್ ವಾಜಪೇಯಿಯವರಿಗೆ ಅಧಿಕಾರವನ್ನು ಕೊಟ್ಟಾಗ, ಆ ರಾಜ್ಯಾಂಗವನ್ನು ತಿದ್ದುಪಡಿ ಮಾಡಲಿಕ್ಕೆ ಇರತಕ್ಕಂಥ ವಿಚಾರಗಳು ಯಾವುದು ಎಂದು ಹೇಳಿ ಸುಮಾರು ಎರಡೂವರೆ ವರ್ಷಗಳವರೆಗೆ ಸತತ ಪ್ರಯತ್ನ ಮಾಡಿ ಒಂದು ದೊಡ್ಡ ಗ್ರಂಥವನ್ನು ಅವರು ಈ ರಾಷ್ಟ್ರಕ್ಕೆ ಕೊಟ್ಟರು. ದುರಾದೃಷ್ಟವಶಾತ್ ಅವರು ಆ ಗ್ರಂಥವನ್ನು ಕೊಟ್ಟ ನಂತರ ಅದು ಬೆಳಕನ್ನು ಕಾಣಲಿಲ್ಲ. It is gathering dust in the cupboard in the Central Secretariat. ಅವರು ಆವತ್ತು ಮಾಡಿರುವ ಭಾಷಣವನ್ನು ತಾವೆಲ್ಲರೂ ಓದಿದ್ದೀರಿ ಎಂದು ಭಾವಿಸುತ್ತೇನೆ. ಅವರ ಭಾಷಣದ ಪ್ರತಿಗಳು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿದ್ದವು. As Chief Justice of India ಅವರು ಮಾಡಿರುವಂತಹ ಕೆಲಸಗಳನ್ನು ನಾವು ಈ ಸಂದರ್ಭದಲ್ಲಿ ನೆನೆಸಿಕೊಳ್ಳಬೇಕಾದರೆ ಅವರು ಬರೆದಿರುವಂತಹ ಕೆಲವು ತೀರ್ಮಾನಗಳನ್ನು

ನೋಡಬೇಕು. The insight of that individual – ಅವರು ನಮಗೆ ಬುದ್ಧಿಯನ್ನು ಹೇಳಲಿ, ವಿಚಾರಗಳನ್ನು ತಿಳಿಸಲಿ ಎನ್ನುವ ಉದ್ದೇಶದಿಂದ ನಮ್ಮನ್ನು ಅಡ್ರೆಸ್ ಮಾಡಬೇಕೆನ್ನುವುದನ್ನು ನೀವೇ ತೀರ್ಮಾನ ಮಾಡಿದ್ದೀರಿ. ಅವರು ನೇರವಾಗಿ ಬುದ್ಧಿವಂತಿಕೆಯ ಮಾತುಗಳನ್ನು ಅಥವಾ ವಿಚಾರಗಳನ್ನು ಹೇಳದೇ ಹೋದರೂ ಕೂಡ ಪ್ರಪಂಚದ ನಾಯಕರುಗಳ ಮಾತುಗಳನ್ನು ತಮ್ಮ ಭಾಷಣದಲ್ಲಿ ಅಳವಡಿಸಿ ಒಂದು ಮಾತನ್ನು ಹೇಳಿದರು. ಅವರು "The Prime Minister of the country and the Chief Minister of a state , their power and authority, at no point of time, on account of either coalition politics or on account of groups, shall not be disturbed, shall not be destabilized. It will lead to disastrous consequences" ಎಂಬ ಮಾತುಗಳನ್ನು ಹೇಳಿದರು. ಇನ್ನು ಕೆಲವು ಮಾತುಗಳನ್ನು ಬಹಳ ಎಚ್ಚರಿಕೆಯಿಂದ ಹೇಳಿದರು "In a coalition Government, there are as many Chief Minister as that of the political parties." ಇದನ್ನು ನಾನು ಸ್ವಲ್ಪ ತಿದ್ದಿ ಹೇಳುವುದಾದರೆ, as at the moment in Karnataka, there is only one Chief Minister and he is Mr. Sadananda Gowda, the Chief Minister of Karnataka. I do not want as many Chief Ministers as that of poltical parties in a coalition Government. ಅವರು ಹೇಳಿದ್ದನ್ನು ನಾವಿಲ್ಲಿ ಪ್ರತಿಪಾದನೆ ಮಾಡಬೇಕಾದರೆ there should not be as many Chief Ministers as that of the political groups in one political party. It should not be. ನಾನು ಹೇಳುತ್ತಿರುವುದು ಬಹುಶಃ ಅತಿಶಯೋಕ್ತಿ ಆಗಲಾರದು ಎಂದು ಭಾವಿಸುತ್ತೇನೆ. It should not happen. ಆದ್ದರಿಂದ ಇವತ್ತು ಈ ಕೆಲಸವನ್ನು ಮಾಡುತ್ತಿರುವ ಸಂದರ್ಭದಲ್ಲಿ I want the Chief Minister to summon the House. ಬಜೆಟ್ ಅಧಿವೇಶನ ಕರೆಯಬೇಕಾಗುತ್ತದೆ. ರಾಜ್ಯ ಭೀಕರ ಬರಗಾಲ ಎದುರಿಸುತ್ತಿದೆ. ನಾವು 2012 ಜೂನ್ ತಿಂಗಳಿನಲ್ಲಿದ್ದೇವೆ. ನನ್ನ ಜಿಲ್ಲೆ ಕೊಡಗಿನಲ್ಲಿ ಇನ್ನೂ ಬೇಸಿಗೆ ಕಾಲ. ಕೊಡಗಿನಲ್ಲಿ ಮಳೆಯಾಗುತ್ತಿಲ್ಲ. ಕಳೆದ ವರ್ಷಕ್ಕೂ ಈ ವರ್ಷಕ್ಕೂ 32 ಇಂಚು ಮಳೆ ಕಡಿಮೆ ಬಿದ್ದಿದೆ. ಇದೇ

ಅವಧಿಯಲ್ಲಿ ಹೋದ ವರ್ಷ ಕೆಆರ್‌ಎಸ್‌ನಲ್ಲಿ 107 ಅಡಿ ನೀರಿತ್ತು. ಇಂತಹ ಪರಿಸ್ಥಿತಿ ಮುಂದುವರೆದರೆ ಮುಂದೇನಾಗುತ್ತದೆ? ಇದರ ಬಗ್ಗೆ ನಾವು ಯೋಚನೆ ಮಾಡಬೇಕಾಗುತ್ತದೆ. ಆದ್ದರಿಂದ all of you sitting in the Ruling Party ನಾವಿಲ್ಲಿ ಸೇರಿಕೊಂಡು, ಈ ರಾಜ್ಯದ ಬಗ್ಗೆ, ದೇಶದ ಬಗ್ಗೆ ಚಿಂತನೆ ಮಾಡಬೇಕು. ಇವತ್ತೇನು ಇಲ್ಲಿ ಕೆಲಸವನ್ನು ಜೋರಾಗಿ ಮಾಡಿದೆವೋ ಅದೇ ಕೆಲಸವನ್ನು ಕೆಳಮನೆ ಮತ್ತು ಮೇಲ್ಮನೆಯಲ್ಲಿ ಮಾಡಬೇಕಾಗುತ್ತದೆ. ನಮಗೆ ಸ್ಟೆಬಿಲಿಟಿ ಬೇಕು. ಬರವನ್ನು ಎದುರಿಸಿ ರಾಜ್ಯದ ಜನರ ಕಣ್ಣೀರು ಒರೆಸುವ ಕೆಲಸವನ್ನು ನಾವು ಸರ್ಕಾರದ ಕೈಯಿಂದ ಮಾಡಿಸಬೇಕಾಗುತ್ತದೆ. . .

**ಕ್ಯಾ.ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಗಳೆ, ಬರದ ಬಗ್ಗೆ ಮುಂದೆ ನಡೆಯುವಂತಹ ಅಧಿವೇಶನದಲ್ಲಿ ಚರ್ಚೆ ಮಾಡಬಹುದು. ಇವತ್ತು ಸದನವನ್ನು ಕರೆದಿರುವುದು ಅಭಿನಂದನೆ ಸಲ್ಲಿಸುವುದಕ್ಕೆ ಮಾತ್ರ, ಮಾನ್ಯ ಸದಸ್ಯರು ಎಷ್ಟು ಗಂಟೆ ಮಾತನಾಡುತ್ತಾರೆ, ಏನು ಮಾತನಾಡುತ್ತಾರೆ ಎನ್ನುವುದನ್ನು . . . .

**ಶ್ರೀ ಎಂ.ಸಿ.ನಾಣಯ್ಯ:-** ನೀವು ಯಾರ ಪರ . . .

(ಗೊಂದಲ)

**ಕ್ಯಾ. ಗಣೇಶ್ ಕಾರ್ಣಿಕ್:-** ಇನ್ನೂ ಬೇರೆ ಸದಸ್ಯರೂ ಕೂಡ ಮಾತನಾಡಬೇಕಿದೆ . . .

**ಸಭಾಪತಿಯವರು:-** ಮಾನ್ಯ ನಾಣಯ್ಯನವರು ತಮ್ಮ ಭಾಷಣವನ್ನು ಮುಗಿಸುತ್ತಾರೆ. ದಯವಿಟ್ಟು ಕುಳಿತುಕೊಳ್ಳಿ . . .

(ಗೊಂದಲ)

**ಡಾ॥ ಎ.ಹೆಚ್.ಶಿವಯೋಗಿಸ್ವಾಮಿ:-** ದಯವಿಟ್ಟು ರಾಜಕೀಯ ಪ್ರೇರಿತ ಮಾತುಗಳನ್ನು ಹೇಳಬಾರದು. ಇತರ ವಿಷಯಗಳ ಬಗ್ಗೆ ಮಾತನಾಡಲು ಜುಲೈ 16 ರಂದು ವಿಧಾನಮಂಡಲದ ಅಧಿವೇಶನವನ್ನು ಕರೆಯುತ್ತೇವೆ ಎಂದು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ.

**ಶ್ರೀಮತಿ ವಿಮಲಾಗೌಡ:–** ಇವತ್ತು ಅಜೆಂಡಾದಲ್ಲಿರುವುದು ಒಂದೇ ವಿಷಯ. ಅಜೆಂಡಾದಲ್ಲಿರುವ ವಿಷಯ ಬಿಟ್ಟು ಬೇರೆ ವಿಷಯ ಚರ್ಚೆಯಾಗುತ್ತಿದೆ . . .(ಗೊಂದಲ) ಬರಗಾಲದ ಬಗ್ಗೆ ಮಾತನಾಡುತ್ತಿದ್ದಾರೆ. ...

**ಸಭಾಪತಿಯವರು:–** ದಯಮಾಡಿ ಕುಳಿತುಕೊಳ್ಳಿ.

**ಡಾ|| ಎ. ಹೆಚ್. ಶಿವಯೋಗಿಸ್ವಾಮಿ :–** ಮಾನ್ಯ ನಾಣಯ್ಯನವರು ಮುಂದಿನ ಅಧಿವೇಶನದಲ್ಲಿ ಮಾನ್ಯ ದತ್ತಾರವರ ಸಮಯವನ್ನೂ ತೆಗೆದುಕೂಳಲಿ ಹಾಗಾಗಿ ಈಗ ಅಭಿನಂದನೆ ಹೇಳುವುದನ್ನು ಮುಗಿಸಿಬಿಡಿ politicize ಮಾಡಬೇಡಿ.

(ಗೊಂದಲ)

**Sri M.C. NANAIAH:-** I will come to that. ನಿಮ್ಮ ಅಸಹನೆಯನ್ನು ನೋಡಿದೆ. ನಮ್ಮ ಚಿಂತನೆ ಬೇರೆ ಇದೆ. ಮಾನ್ಯ ಸಭಾಪತಿಗಳೆ, ಇವತ್ತು ನಾವು ನಿಮ್ಮನ್ನು ಆಯ್ಕೆ ಮಾಡಿದೆವು. ಬರುವ ಮೂರು ದಿವಸದಲ್ಲೋ ಅಥವಾ ನಾಲ್ಕು ದಿವಸದಲ್ಲೋ ಯಾರಾದರೂ 15 ಜನ ಮಂತ್ರಿಗಳು ರಾಜೀನಾಮೆ ಕೊಟ್ಟು ಹೌಸ್ ಡಿಸಾಲ್ವ್ ಆದರೆ ಈ ಸದನ ಮೀಟ್ ಆಗುವುದಕ್ಕೆ ಆಗುವುದಿಲ್ಲ. Do you want it to happen?

(ಗೊಂದಲ)

**ಶ್ರೀ ವಿ. ಸೋಮಣ್ಣ:–** ನೀವು ಬೆಂಕಿ ಹಚ್ಚುವುದಕ್ಕೆ ಬಂದಿದ್ದೀರಾ? ಗ್ರೂಪಿಸಂ ಮಾಡುತ್ತಿದ್ದೀರಾ . . .

(ಗೊಂದಲ)

**ಡಾ|| ಎ.ಎಚ್. ಶಿವಯೋಗಿಸ್ವಾಮಿ:–** ನಾಳೆ ಏನಾಗುತ್ತದೆ, ನಾಳಿದ್ದು ಏನಾಗುತ್ತದೆ ಎಂದು ನೀವೇಕೆ ಹೇಳುತ್ತಿದ್ದೀರಿ . . . (ಗೊಂದಲ) ನಾಳೆ ಯಾರು ಸಾಯುತಾರೋ ಯಾರಿಗೆ ಗೊತ್ತು? Hypothetical ಆಗಿ ಹೇಳವ ಹಾಗೆ ಹೇಳಿಬಿಟ್ಟರೆ ಹೇಗೇ? . . .(ಗೊಂದಲ) ಆ ರೀತಿ ಮಾತನಾಡಬೇಡಿ.

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳ):-** ಮಾನ್ಯ ಸಭಾಪತಿಗಳೆ, ರಾಜ್ಯದ ಬಗೆಗಿನ ಮಾನ್ಯ ನಾಣಯ್ಯನವರ ಕಾಳಜಿಯನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಆದರೆ ಅವರ ಮಾತಿನ ಒಳಗಿನ ಮರ್ಮವನ್ನೂ ಸ್ವಲ್ಪಮಟ್ಟಿಗೆ ಅರ್ಥ ಮಾಡಿಕೊಳ್ಳಬಲ್ಲೆ. ಈಗಾಗಲೇ ಜುಲೈ16 ರಿಂದ ಅಧಿವೇಶನ ಕರೆಯಬೇಕು ಎಂದು ಸಚಿವ ಸಂಪುಟ ತೀರ್ಮಾನ ಮಾಡಿದೆ. ಬೇರೆ ಎಲ್ಲ ವಿಚಾರಗಳ ಬಗ್ಗೆ ಜುಲೈ 16ರಿಂದ ಪ್ರಾರಂಭವಾಗುವ ಅಧಿವೇಶನದಲ್ಲಿ ಮಾತನಾಡಬಹುದು ಮತ್ತು ಅದಕ್ಕೆ ಉತ್ತರ ಕೊಡಲು ಸರ್ಕಾರ ತಯಾರಾಗಿದೆ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ರಾಜ್ಯದ ಬರದ ಬಗ್ಗೆ ಕಳೆದ ಬಾರಿ ಎಲ್ಲ ವಿಪಕ್ಷಗಳ ಸದಸ್ಯರು ರಾಜ್ಯಾದ್ಯಂತ ಪ್ರವಾಸ ಮಾಡಿ ಅದರ ಬಗ್ಗೆ ಸರ್ಕಾರಕ್ಕೆ ಸಲಹೆ ಕೊಟ್ಟಿರುವುದು ಮತ್ತು ಅದನ್ನು ಸರ್ಕಾರ ಸ್ವೀಕಾರ ಮಾಡಿರುವಂಥದ್ದು ಜಾಗತಿಕ ಸತ್ಯವಾಗಿದೆ. ಬರ ಪರಿಸ್ಥಿತಿಯನ್ನು ನೋಡಲು ಕೇಂದ್ರದಿಂದ ಎರಡು ತಂಡಗಳು ಬಂದದ್ದು ನಮಗೆಲ್ಲರಿಗೂ ಗೊತ್ತಿದೆ. ಪ್ರಾರಂಭಿಕ ಹಂತದಲ್ಲಿ ಮೊದಲನೆ ತಂಡವನ್ನು ಲೀಡ್ ಮಾಡಿದಂತಹ ಶ್ರೀ ವಿಜಯಕುಮಾರ್ ಇರಬಹುದು ಅಥವಾ ಎರಡನೆ ತಂಡವನ್ನು ಲೀಡ್ ಮಾಡಿದಂತಹ ಶ್ರೀ ಶರ್ಮರವರಿಬಹುದು ಇವರು, ಕರ್ನಾಟಕದಲ್ಲಿ ಕಳೆದ 40 ವರ್ಷಗಳಲ್ಲಿ ಕಂಡರಿಯದಂತಹ ಭೀಕರ ಬರಗಾಲ ಬಂದಿದ್ದು ಅದರ ನಿರ್ವಹಣೆಯಲ್ಲಿ ಇಡೀ ದೇಶಕ್ಕೆ ಹೋಲಿಸಿದರೆ ನಿಮ್ಮ ಸರ್ಕಾರ ಅದ್ಭುತವಾದ ರೀತಿಯಲ್ಲಿ ಕೆಲಸ ಮಾಡಿದೆ ಎಂದು ಹೇಳಿದ್ದರು. ಹೀಗೆ ಹೇಳಿದ ಮಾತ್ರಕ್ಕೆ ಎಲ್ಲವೂ ಮುಗಿದು ಹೋಯಿತು ಎನ್ನುವ ಅರ್ಥವಲ್ಲ. ಪರಿಸ್ಥಿತಿ ಗಂಭೀರವಾಗುತ್ತಿರುವುದನ್ನೂ ಸಹ ನಾವು ಪರಿಗಣನೆಗೆ ತೆಗೆದುಕೊಂಡಿದ್ದೇವೆ. ನಿರಂತರವಾಗಿ ಈ ಸ್ಥಿತಿಯನ್ನು ಮಾನಿಟರಿಂಗ್ ಮಾಡುವ ಕೆಲಸ-ಕಾರ್ಯಗಳನ್ನು ಮಾಡುತ್ತಿದ್ದೇವೆ. ಮತ್ತೆ ನಾವು ಜಿಲ್ಲಾ ಪ್ರವಾಸಗಳನ್ನು ಮಾಡುವವರಿದ್ದೇವೆ. ಜುಲೈ 16 ರಿಂದ ಪ್ರಾರಂಭವಾಗುವ ಅಧಿವೇಶನದ ಮೊದಲ ಹಂತದಲ್ಲೇ ಬರದ ಕಾಮಗಾರಿಗಳು ನಡೆಯುತ್ತಿರುವುದರ ಬಗ್ಗೆ ಮತ್ತು ನಡೆಯಬೇಕಾಗಿರುವುದರ ಬಗ್ಗೆ ಚರ್ಚೆ ಮಾಡುವುದಕ್ಕೆ ಮತ್ತು ಅದಕ್ಕೆ

ಉತ್ತರ ಕೊಡುವುದಕ್ಕೆ ನಾವು ತಯಾರಾಗಿದ್ದೇವೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಸಿ.ಹೆಚ್. ವಿಜಯಶಂಕರ್:-** ಮಾನ್ಯ ಸಭಾಪತಿಗಳೆ, ಮಾನ್ಯ ನಾಣಯ್ಯನವರು ಕೊಡಗಿನವರು. ತಾವು ಕೊಡಗಿನ ಅಳಿಯಂದಿರು. ಇವತ್ತು ತಾವಿಬ್ಬರೂ ಸೂಟ್‌ನಲ್ಲಿ ಬಂದಿದ್ದೀರಿ. ಇದರ ಮರ್ಮ ಏನು ಎನ್ನುವುದು ನಮಗೆ ಅರ್ಥವಾಗುತ್ತಿಲ್ಲ. (ಸದನದಲ್ಲಿ ನಗು)

**ಶ್ರೀ ಯಂ.ಸಿ.ನಾಣಯ್ಯ:-** ಮಾನ್ಯ ಸಭಾಪತಿಗಳೆ, ಇವತ್ತಿನ ಈ ಸಂದರ್ಭದ ಘನತೆಯನ್ನು ಡೈಲ್ಯೂಟ್ ಮಾಡುವುದಕ್ಕೆ ನಾನು ಮಾತನಾಡುತ್ತಿಲ್ಲ. ಈ ಘನತೆಯನ್ನು ಇನ್ನೂ ಎತ್ತರಕ್ಕೆ ಕೊಂಡಯ್ಯಬೇಕು ಎನ್ನುವ ಹಿನ್ನೆಲೆಯಲ್ಲಿ ಮಾತ್ರ ಮಾತನಾಡುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದನ್ನು ನಾನು ಮೆಚ್ಚುತ್ತೇನೆ. ಇವತ್ತು Karnataka State is one of the most progressive States, one of the matured States; Karnataka has got more number of very very political matured leaders. Let's not become a laughing stock in the eyes of the rest of the country. ಇದನ್ನು ಗಮನದಲ್ಲಿಟ್ಟುಕೊಂಡು ನಾನು ಮಾತನಾಡಿದೆ. ನನ್ನ ಹೆದರಿಕೆಯನ್ನು ನಾನು ಹೇಳುತ್ತೇನೆ. ಪ್ರಸ್ತುತ ನಡೆಯುತ್ತಿರುವ ಘಟನಾವಳಿಗಳನ್ನು ನೋಡಿದಾಗ ಮುಂದೆ ನಾವು ಈ ರೀತಿ ಸದನದಲ್ಲಿ ಸೇರುವುದಕ್ಕೆ ಅವಕಾಶ ಇಲ್ಲದೇ ಹೋಗಬಹುದು. ದಯವಿಟ್ಟು ಹಾಗೆ ಮಾಡಬೇಡಿ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. Don't try to do that. ನನ್ನ ಚಿಂತನೆ ಇಷ್ಟೆ. ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಮಂಡನೆ ಮಾಡಿದ್ದಾರೆ. I do not want our Budget to go before the Parliament for approval. It should be passed here on the floor of the House. ಅಂಥದ್ದಕ್ಕೆ ನೀವು ಅವಕಾಶ ಮಾಡಿಕೊಡಬೇಡಿ ಎಂದು ಹೇಳಿದರೆ ತಪ್ಪಾಗುತ್ತದೆಯೇ? As a Member of this House, I feel I have got a right to do that. ಅಂತಹ ಕೆಲಸವನ್ನು ಮಾಡುವುದಕ್ಕೆ ದಯವಿಟ್ಟು ಯಾರೂ ಪ್ರಯತ್ನ ಪಡಬೇಡಿ. ಮಾನ್ಯ ಸಭಾಪತಿಗಳೆ, ತಾವು ಇವತ್ತು ಆ ಸ್ಥಾನವನ್ನು ಅಲಂಕಾರ

ಮಾಡಿದ್ದೀರಿ. ಇದನ್ನು ನಾನು ಮೆಚ್ಚುಗೆಗೆಂದು ಹೇಳುತ್ತಿಲ್ಲ. ಈ ಸದನದಲ್ಲಿ ಬಹಳಷ್ಟು ಜನ ಸಭಾಪತಿಗಳು ಕೆಲಸ ಮಾಡಿರುವುದನ್ನು ಕಂಡಿದ್ದೇವೆ. ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿದಂತಹ ಸಭಾಪತಿಗಳೂ ಇದ್ದಾರೆ ಮತ್ತು ಆ ಎತ್ತರಕ್ಕೆ ಏರದೇ ಇದ್ದಂಥ ಸಭಾಪತಿಗಳೂ ಇದ್ದಾರೆ. ಆದರೆ ತಾವು ಈ ಒಂದು ಸ್ಥಾನವನ್ನು ಅಲಂಕರಿಸಿದ ಮೇಲೆ, ಈ ಸ್ಥಾನದ ಘನತೆಯನ್ನು, ಹಿರಿಮೆಯನ್ನು ಎತ್ತಿಹಿಡಿದಿದ್ದೀರಿ ಮತ್ತು ನಿಷ್ಪಕ್ಷಪಾತವಾಗಿ ಚಿಂತನೆಯನ್ನು ಮಾಡಿದ್ದೀರಿ.

ಎಲ್ಲರನ್ನು ಒಂದೇ ತಕ್ಕಡಿಯಲ್ಲಿ ಕಂಡು ಎಷ್ಟು ಸದಸ್ಯರಿಗೆ ಎಷ್ಟು ಸಮಯ ಕೊಡಬೇಕೋ ಅಷ್ಟನ್ನು ತಾವು ಕೊಟ್ಟಿದ್ದೀರಿ. ಅದನ್ನೇ ಮುಂದುವರೆಸಿಕೊಂಡು ಹೋಗಬೇಕಾಗಿರುವ ಜವಾಬ್ದಾರಿ ತಮ್ಮ ಮೇಲೆ ಇದೆ. ಇದೇ ತರಹ ತಮ್ಮ ಕುರ್ಚಿಯಲ್ಲೇ ಕುಳಿತಿರತಕ್ಕಂಥವರು ಇತರ ಪ್ರದೇಶಗಳಲ್ಲಿ, ಇತರ ರಾಜ್ಯಗಳಲ್ಲಿ ಅದೇ ಕೆಲಸವನ್ನು ನಿಮ್ಮ ಹಾಗೆ ಮಾಡಿದ್ದಾರೆಯೆ ಎಂದು ಯಾರಾದರೂ ಕೇಳಿದರೆ ನನ್ನ ಉತ್ತರ ಇಲ್ಲ ಎಂದು ಹೇಳುತ್ತೇನೆ. ಆ ಸ್ಥಾನದಲ್ಲಿ ಕುಳಿತಿರತಕ್ಕಂಥವರು ರಾಜಕಾರಣ ಪ್ರವೇಶ ಮಾಡುತ್ತಿರತಕ್ಕಂಥದ್ದನ್ನು ನಾವು ನೇರವಾಗಿ ನೋಡಿದ್ದೇವೆ. ಅಂತಹ ಪರಿಸ್ಥಿತಿ ಈ ಸದನದಲ್ಲಿ ಇಲ್ಲಿಯವರೆಗೆ ನಿರ್ಮಾಣವಾಗಿಲ್ಲ. ತಾವು ಈ ಸದನದ ಘನತೆ, ಗೌರವವನ್ನು ಇನ್ನೂ ಹೆಚ್ಚು ಎತ್ತರಕ್ಕೆ ತೆಗೆದುಕೊಂಡು ಹೋಗುತ್ತಿರಿ ಎನ್ನುವ ವಿಶ್ವಾಸ ನನಗಿದೆ. ಈ ಸಂದರ್ಭದಲ್ಲಿ ಹೊಸದಾಗಿ ಬಂದಿರತಕ್ಕಂಥ ನನ್ನ ಮಿತ್ರರು ಯಾರಿದ್ದಾರೆ ಅವರೆಲ್ಲರನ್ನು ನಾವೆಲ್ಲ ಸ್ವಾಗತ ಮಾಡೋಣ. ಈ ಮನೆಗೆ ಮೇಲ್ಮನೆ ಎಂದು ಹೇಳತಕ್ಕಂಥ ಹಿರಿಮೆ ಇದೆ. ಆ ಹಿರಿಮೆಯನ್ನು ಎತ್ತಿಹಿಡಿಯಬೇಕಾಗಿರುವಂಥದ್ದು ನಮ್ಮ ನಿಮ್ಮೆಲ್ಲರ ಕರ್ತವ್ಯ. ಇಡೀ ಸದನದ ಪರವಾಗಿ ಆ ಶಕ್ತಿಯನ್ನು ತಮಗೆ ದಯಪಾಲಿಸಲೆಂದು ಈ ಸಂದರ್ಭದಲ್ಲಿ ನಾನು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ. ಆ ಶಕ್ತಿ ಯಾವುದೆಂದರೆ, ಯಾವುದೇ ಸಂದರ್ಭದಲ್ಲಿ ಎಷ್ಟೇ ಸಿಟ್ಟು ಬಂದರೂ ಎಷ್ಟೇ ಉದ್ವೇಗ ಬಂದರೂ ಕೂಡ ಎಲ್ಲರನ್ನೂ ಸಮಾನತೆಯಿಂದ ಕಾಣುವ ಶಕ್ತಿ. ಈ ಸದನದಲ್ಲಿ ಮತ್ತು ಕೆಳಗಿನ ಸದನದಲ್ಲಿ ಅರ್ಥ ಪೂರ್ಣವಾಗಿರುವಂತಹ ಚರ್ಚೆ ನಡೆಯುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು

ವಿಚಾರವನ್ನು ಕೇಳುತ್ತೇನೆ. ಮೂರು ಜನ ನಾಮಕರಣವಾಗಿರುವಂತಹ ಸದಸ್ಯರುಗಳು ನಿವೃತ್ತಿಯಾಗಿ ಬಹಳ ದಿವಸವಾಯಿತು. ಸಂವಿಧಾನದ ಆರ್ಟಿಕಲ್ 175(5)ರ ಪ್ರಕಾರ ನಾಮಕರಣ ಸದಸ್ಯರುಗಳನ್ನು ಕೂಡಲೇ ತುಂಬಬೇಕಾಗುತ್ತದೆ. ಉಪ ಸಭಾಪತಿಯವರ ಸ್ಥಾನವನ್ನು ಕೂಡ ಕೂಡಲೇ ತುಂಬಬೇಕಾಗುತ್ತದೆ. ಆ ಕೆಲಸವನ್ನೂ ನಾಳೆಯೇ ನೀವು ಮಾಡಿದರೂ ಕೂಡ ಬಹಳ ಸಂತೋಷ. ನಾಮಕರಣ ಮಾಡಬೇಕಾದ ಎಷ್ಟು ಸ್ಥಾನಗಳಿವೆಯೋ, ಆ ಸ್ಥಾನಗಳನ್ನು ಕೂಡಲೇ ತುಂಬಿ. ಆದರೆ, ಆರ್ಟಿಕಲ್ 175(5) ರಲ್ಲಿ ತಿಳಿಸಿರುವಂತೆ ಮಾಡಿ. 175(5) ರಲ್ಲಿ ಎಂಥಹವರನ್ನು ನಾಮಕರಣ ಮಾಡಬೇಕೆಂಬುದರ ಬಗ್ಗೆ ಹೇಳಿದ್ದಾರೆ. ಈ ಸದನದ ಘನತೆ, ಗೌರವವನ್ನು ಎತ್ತಿಹಿಡಿಯತಕ್ಕಂಥವರನ್ನು ನಾಮಕರಣ ಮಾಡಬೇಕಾಗುತ್ತದೆ. ಉದಾಹರಣೆಗೆ, ಸಾಹಿತ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದವರನ್ನು ನಾಮಕರಣ ಮಾಡಬಹುದು. ನಮ್ಮ ದೊಡ್ಡರಂಗೇಗೌಡರು ಇದ್ದಾರೆ, ಅವರು ಯಾವುದೇ ಪಾರ್ಟಿಗೆ ಸೇರಿಲ್ಲ. ಈ ಸದನದಲ್ಲಿ ಚಂದ್ರಶೇಖರ್ ಕಂಬಾರ್‌ರವರು ಇದ್ದರು, ಅವರು ಯಾವುದೇ ಪಾರ್ಟಿಗೆ ಸೇರಿರಲಿಲ್ಲ. ಈ ಹಿಂದೆ ಜರ್ನಲಿಸ್ಟ್ ಆಗಿದ್ದ ಶ್ರೀಮಾನ್ ಖಾದ್ರಿ ಶಾಮಣ್ಣನವರಿದ್ದರು. ಆ ಭಾಗದಲ್ಲಿ ಕುಳಿತುಕೊಂಡು ಖಾದ್ರಿ ಶಾಮಣ್ಣನವರು ಮಾಡಿರತಕ್ಕಂಥ ಒಂದೊಂದು ಭಾಷಣ ಇದೆಯಲ್ಲಾ ಅದು ಇಡೀ ರಾಜ್ಯದ ಗಮನವನ್ನು ಸೆಳೆದಿರತಕ್ಕಂಥದ್ದು. ಅದಾದ ಮೇಲೆ ಶ್ರೀಮಾನ್ ಪಿ. ರಾಮಯ್ಯನವರನ್ನು ನಾಮಕರಣ ಮಾಡಿರತಕ್ಕಂಥದನ್ನು ನಾವು ನೋಡಿದ್ದೇವೆ. ಹಿಂದೂ ಪತ್ರಿಕೆಯಲ್ಲಿ ಅವರು ಬಹಳ ವರ್ಷಗಳವರೆಗೆ ಕೆಲಸ ಮಾಡಿಕೊಂಡು ಬಂದಿರತಕ್ಕಂಥ ಒಬ್ಬ ಪ್ರಖ್ಯಾತ ಜರ್ನಲಿಸ್ಟ್ ಆಗಿದ್ದರು. ನಿಮ್ಮ ಚಿಂತನೆ ಮತ್ತು ಗಮನ ಆ ಕಡೆಯಲ್ಲಿ ಇರಲಿ. ಕೇವಲ ರಾಜಕೀಯ ಮತ್ತು ರಾಜಕೀಯದ ಜನರನ್ನೇ ನಾಮಕರಣ ಮಾಡುವಂತಹದ್ದಕ್ಕೆ 175(5) ವಿಧಿ ಇಲ್ಲ. ತಾವು ಇದರ ಬಗ್ಗೆಯೂ ಗಮನಹರಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ನಿಮ್ಮ ಸ್ಥಾನಕ್ಕೆ ಯಾವುದೇ ಸಂದರ್ಭದಲ್ಲಿ, ಯಾವುದೇ ತರಹದ ಕಂದಕ, ಕಂಟಕ ಬಾರದಿರುವ ಹಾಗೆ ರಾಜಕೀಯ ಚತುರತೆಯನ್ನು ನೀವೇ ಉಪಯೋಗಿಸಿಕೊಂಡು ನೀವು ತರಬೇಕಾಗುತ್ತದೆ. ನಾವು ನಿಮ್ಮ ಜೊತೆಯಲ್ಲಿ

ಬರುವುದಕ್ಕೆ ಆಗುವುದಿಲ್ಲ. ಏಕೆಂದರೆ, ಇವೆಲ್ಲಾ ನಿಮ್ಮ ಒಳಗಡೆ ನಡೆಯುತ್ತಿರತಕ್ಕಂಥ ವಿಚಾರಗಳು. ನಾವು ಇದಕ್ಕೆ ಸೂತ್ರಧಾರಿಗಳೂ ಅಲ್ಲ, ಪಾತ್ರಧಾರಿಗಳು ಅಲ್ಲ. ಆದ್ದರಿಂದ ಸೂತ್ರಧಾರಿಗಳು, ಪಾತ್ರಧಾರಿಗಳು ಆಗತಕ್ಕಂಥ ಪಾತ್ರಗಳನ್ನು ಗಟ್ಟಿಯಾಗಿ ನಿಭಾಯಿಸಿಕೊಂಡು ಇನ್ನೂ ಉಳಿದಿರತಕ್ಕಂಥ ಅವಧಿ ಏನಿದೆ, ಆರು ತಿಂಗಳೋ, ಎಂಟು ತಿಂಗಳೋ, ಒಂದು ವರ್ಷವೋ ಗೊತ್ತಿಲ್ಲ. ಇವೆಲ್ಲಾ ನಿಭಾಯಿಸಿಕೊಂಡು ನೀವೇ ಈ ಕೆಲಸವನ್ನು ಮಾಡಿದರೆ continuity ಇರುತ್ತದೆ ಅಷ್ಟೆ. ಇಲ್ಲದೆ ಹೋದರೆ ಎಲ್ಲಾ ರೀತಿಯ ಗೊಂದಲ, ಜಗಳ-ಗಿಗಳ ಆಗಿ ಕೊನೆಗೆ ವಿಧಾನಸಭೆ ವಿಸರ್ಜನೆ ಆಗಿ, ವಿಧಾನ ಪರಿಷತ್ ನಡೆಯದೇ ಇರುವಂತಹ ಪರಿಸ್ಥಿತಿ ನಿರ್ಮಾಣವಾಗಬಹುದು. ಅಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡುವಂಥದಕ್ಕೆ ತಾವು ಅವಕಾಶ ಕೊಡಬಾರದು. ಆ ಸ್ಥಾನದಲ್ಲಿ ಕುಳಿತು ಆಡಳಿತ ಪಕ್ಷದ ಸದಸ್ಯರಿಗೆ ಮಾರ್ಗದರ್ಶನ ಮಾಡುವ ಹಕ್ಕು ನಿಮಗಿದೆ. ಆ ಕೆಲಸವನ್ನು ತಾವು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನನ್ನ ಕೆಲವು ವಿಚಾರಗಳನ್ನು ನಿಮ್ಮ ಜೊತೆಯಲ್ಲಿ ಹೇಳಿದ್ದೇನೆ. ಅನ್ಯಥಾ ಭಾವಿಸಬೇಡಿ. ನಾವು ನೀವೆಲ್ಲರೂ ಸೇರಿ ಒಟ್ಟಾರೆ ಮಾಡಬೇಕು. ಮಿತ್ರರಾಗಿರತಕ್ಕಂಥ ಶ್ರೀಮಾನ್ ಪುಟ್ಟಸ್ವಾಮಿಯವರು ಬಂದಿದ್ದಾರೆ. ಬಹಳ ಅವಧಿಗೆ ಅವರು ಪಕ್ಷದ ವಕ್ತಾರರಾಗಿ ಕೆಲಸ ಮಾಡಿದ್ದಾರೆ. 24 ವರ್ಷಗಳ ಹಿಂದೆ ನಾನು ಅವರು ವಿರೋಧ ಪಕ್ಷದಲ್ಲಿ ಒಟ್ಟಾರೆ ಕುಳಿತುಕೊಂಡು ಕೆಲಸವನ್ನು ಮಾಡಿರತಕ್ಕಂಥದನ್ನು ಕೂಡ ಈ ಸಂದರ್ಭದಲ್ಲಿ ನೆನೆಸಿಕೊಂಡು ಈ ಹಿಂದೆ ಅವರು ಪಕ್ಷದ ವಕ್ತಾರರಾಗಿ ಕೆಲಸ ಮಾಡಿರುವಂಥದ್ದು ಇದೆಯೆಲ್ಲಾ ಅದು ಬೇಡ, ಇನ್ನೂ ಮುಂದಕ್ಕಾದರೂ ನಾವೆಲ್ಲರೂ ಕೌನ್ಸಿಲ್ ಕೆಲಸವನ್ನು ಕೂಡ ಮಾಡೋಣವೆಂದು ಈ ಸಂದರ್ಭದಲ್ಲಿ ಹೇಳುತ್ತಾ ಎಲ್ಲರಿಗೂ ನನ್ನ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸಬಯಸುತ್ತೇನೆ. ಹೊಸದಾಗಿ ಬಂದಿರತಕ್ಕಂಥ ಸದಸ್ಯರುಗಳಿಗೂ ಕೂಡ ನನ್ನ ಅತ್ಯಂತ ಆದರದ ಅಭಿನಂದನೆಗಳು, ನಮಸ್ಕಾರ.

**ಶ್ರೀ ಗೋವಿಂದ ಎಂ. ಕಾರಜೋಳ (ಕನ್ನಡ ಮತ್ತು ಸಂಸ್ಕೃತಿ ಸಚಿವರು):–** ಮಾನ್ಯ ಸಭಾಪತಿಯವರೇ, ಎರಡನೇ ಬಾರಿಗೆ ತಾವು ಆ ಪೀಠವನ್ನು ಅಲಂಕರಿಸಿದ್ದೀರಿ. ಈ ಮನೆಯ ಎಲ್ಲಾ ಸದಸ್ಯರು ತಮ್ಮನ್ನು ಅವಿರೋಧವಾಗಿ ಆಯ್ಕೆ ಮಾಡಿರುವುದಕ್ಕೆ ಮೊಟ್ಟ ಮೊದಲಿಗೆ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಕಳೆದ ಅವಧಿಯಲ್ಲಿ ಆಡಳಿತ ಪಕ್ಷ, ವಿರೋಧ ಪಕ್ಷ ಎಂಬ ಭೇದಭಾವ ಇಲ್ಲದೆ ಬಹಳ ನಿಷ್ಪಕ್ಷಪಾತವಾಗಿ ಮತ್ತು ಅಚ್ಚುಕಟ್ಟಾಗಿ ವೇಳೆಗೆ ಸರಿಯಾಗಿ ಈ ಸದನವನ್ನು ನಡೆಸಿಕೊಂಡು ಬಂದಿರುವುದನ್ನು ನಾವೆಲ್ಲರೂ ಗಮನಿಸಿದ್ದೇವೆ. ಇವತ್ತು ಮುಕ್ತ ಕಂಠದಿಂದ ಎಲ್ಲರೂ ಕೂಡ ತಮಗೆ ಅಭಿನಂದಿಸಿದರು. ಏಕೆಂದರೆ, ತಾವು ನಿಷ್ಪಕ್ಷಪಾತವಾಗಿ ಅಚ್ಚುಕಟ್ಟಾಗಿ ಈ ಸದನದ ಘನತೆ, ಗೌರವವನ್ನು ಎತ್ತಿಹಿಡಿಯತಕ್ಕಂಥ ಕೆಲಸವನ್ನು ಮಾಡಿದ್ದೀರಿ. ಅದಕ್ಕೆ ಮುಂದೆಯೂ ಕೂಡ ತಾವು ಮಾಡುತ್ತೀರಿ ಎನ್ನತಕ್ಕಂಥ ವಿಶ್ವಾಸವನ್ನಿಟ್ಟು ಎಲ್ಲರೂ ಕೂಡ ತಮ್ಮನ್ನು ಅಭಿನಂದಿಸಿದ್ದಾರೆ. ತಮ್ಮ ಆರು ವರ್ಷಗಳ ಅವಧಿಯಲ್ಲಿ ಒಳ್ಳೆಯ ಕೆಲಸಗಳು ಆಗಲಿ ಎಂದು ಹಾರೈಸುತ್ತೇನೆ. ತಾವು ಸಭಾಪತಿಯಾಗಿ ಆಯ್ಕೆ ಆಗಿರುವುದಕ್ಕೆ ನಾನು ಅಭಿನಂದಿಸುತ್ತೇನೆ.

**ಶ್ರೀ ಎಂ.ವಿ. ರಾಜಶೇಖರನ್:–** ಸನ್ಮಾನ್ಯ ಸಭಾಪತಿಗಳೇ, ನನ್ನ ಮಟ್ಟಿಗೆ ಹೇಳುವುದಾದರೆ ಈ ದಿವಸ ನನ್ನ ಸುದಿನ ಎಂದು ನಾನು ತಿಳಿದುಕೊಂಡಿದ್ದೇನೆ. ನಾನು ಹಂಗಾಮಿ ಸಭಾಪತಿಯಾಗಿ ತಮ್ಮನ್ನು ಸರ್ವಾನುಮತದಿಂದ ಈ ಸದನದ ಸಭಾಪತಿಗಳಾಗಿ ಆಯ್ಕೆ ಮಾಡುವುದಕ್ಕೆ ಎಲ್ಲರ ಸಹಕಾರದಿಂದ ನಡೆದಿರತಕ್ಕಂಥ ಈ ಕಾರ್ಯ ನನಗೆ ಅತ್ಯಂತ ಸಂತೋಷ ತಂದಿದೆ. ಈ ಸಂದರ್ಭದಲ್ಲಿ ತಮ್ಮ ಅಪ್ಪಣೆ ಪಡೆದು ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರಬೇಕೆಂದು ಬಯಸಿದ್ದೇನೆ. ಮಾನ್ಯ ಸಭಾಪತಿಗಳೇ, ತಾವು ಐದನೇ ಬರಿ ಸತತವಾಗಿ ಈ ಸದನಕ್ಕೆ ಆಯ್ಕೆಯಾಗಿದ್ದೀರಿ. 1988 ರಿಂದ ಸದನದ ಸದಸ್ಯರಾಗಿ ಅತ್ಯಂತ ವಿಶಿಷ್ಟವಾದ ಸೇವೆಯನ್ನು ಸಲ್ಲಿಸಿದ್ದೀರಿ. ನಿಮ್ಮ ವಿಚಾರದಲ್ಲಿ ನಮಗೆಲ್ಲಾ ಅತ್ಯಂತ ಗೌರವವಿದೆ. ನೀವು ಯಾವುದೇ ಸ್ಥಾನದಲ್ಲಿದ್ದರೂ ಕೂಡ ನಾನು ನೋಡಿದ್ದೇನೆ,

ವಿರೋಧ ಪಕ್ಷದ ನಾಯಕರಾಗಿರಬಹುದು, ಸದನದ ನಾಯಕರಾಗಿರಬಹುದು, ಸಾಮಾನ್ಯ ಸದಸ್ಯರಾಗಿರಬಹುದು, ಯಾವುದೇ ಸ್ಥಾನವನ್ನು ಅಲಂಕರಿಸಿದಾಗ ತಾವು ಅತ್ಯಂತ ವಿಶಿಷ್ಟ ರೀತಿಯಲ್ಲಿ ನಡೆದುಕೊಂಡಿದ್ದೀರಿ. ಇವತ್ತಿನ ದಿವಸ ಸರ್ವಾನುಮತದಿಂದ ಚುನಾವಣೆಯಲ್ಲಿ ಆಯ್ಕೆಯಾಗಿದ್ದೀರಿ. ನಿಮಗೆ ನನ್ನ ವೈಯುಕ್ತಿಕ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ ಬಯಸುತ್ತೇನೆ. ಈ ಸಮಯದಲ್ಲಿ ಒಂದೆರಡು ವಿಷಯಗಳನ್ನು ತಮ್ಮ ಅಪ್ಪಣೆ ಪಡೆದು ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. 50ರ ದಶಕದಲ್ಲಿ ನಾನು ದೆಹಲಿ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಯಾಗಿದ್ದಾಗ ಪ್ರತಿ ದಿವಸ ಸಮಯ ಸಿಕ್ಕಿದಾಗಲೆಲ್ಲ ಲೋಕಸಭೆ ಮತ್ತು ರಾಜ್ಯಸಭೆಗೆ ಹೋಗುತ್ತಿದ್ದೆ. ಆಗ Mavalankar ರವರು ನಮ್ಮ ಸ್ಪೀಕರ್ ಆಗಿದ್ದರು. ಆಗಿನ ದಿನಮಾನಗಳಲ್ಲಿ ನಮ್ಮ ಸಂಸದೀಯ ವ್ಯವಸ್ಥೆಗಳಲ್ಲಿ ಎಷ್ಟು ಚೆನ್ನಾಗಿ ಚರ್ಚೆ ನಡೆಯುತ್ತಿತ್ತು ಎನ್ನುವುದನ್ನು ನೆನಪಿಸಿಕೊಂಡಾಗ ನನಗೆ ಇವತ್ತಿನ ದಿವಸ ಅತ್ಯಂತ ವಿಶಿಷ್ಟವಾದಂತಹ ಚೈತನ್ಯ ಬರುತ್ತದೆ. ನಾನು ಒಂದು ಸಂದರ್ಭವನ್ನು ನೋಡಿದ್ದೇನೆ. ಲೋಕಸಭೆಯಲ್ಲಿ ವಿದೇಶಾಂಗ ವಿಚಾರದ ಬಗ್ಗೆ ಚರ್ಚೆ ನಡೆಯುತ್ತಿತ್ತು. ಆಗಿನ ಪ್ರಧಾನಮಂತ್ರಿಗಳಾಗಿದ್ದಂತಹ ಪಂಡಿತ ಜವಾಹರ್‌ಲಾಲ್ ನೆಹರುರವರು ಆ ಚರ್ಚೆಯಲ್ಲಿ ಭಾಗವಹಿಸಿ ಉತ್ತರವನ್ನು ಕೊಡುತ್ತಿದ್ದರು. ಸದನದಲ್ಲಿ ಸ್ವಲ್ಪ ಗೊಂದಲದ ವಾತಾವರಣ ನಿರ್ಮಾಣವಾದಾಗ ಸ್ಪೀಕರ್ ಆದ Mavalankar ರವರು ಬೆಲ್ ಅನ್ನು ಹೊಡೆದರು, ಪಂಡಿತ ಜವಾಹರ್‌ಲಾಲ್ ನೆಹರುರವರು ತಮ್ಮ ಚರ್ಚೆಯನ್ನು ಮುಂದುವರಿಸುತ್ತಿದ್ದರು. ಪುನ: ಬೆಲ್‌ನ್ನು ಹೊಡೆದು ಆರ್ಡರ್, ಆರ್ಡರ್, ಎಂದು ಹೇಳಿದರು. ಮರುಕ್ಷಣದಲ್ಲಿ ಪಂಡಿತ ಜವಾಹರ್‌ಲಾಲ್‌ನೆಹರುರವರು ಕುಳಿತುಕೊಂಡರು. ಇದನ್ನು ನಾನು ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಈ ರಾಷ್ಟ್ರದಲ್ಲಿ ನಮ್ಮ ಸಂಸದೀಯ ವ್ಯವಸ್ಥೆ ಏನಿದೆ, ಅದು ವಿಶ್ವದಲ್ಲಿಯೇ ಅತ್ಯಂತ ವಿಶಿಷ್ಟವಾದಂತಹ ವ್ಯವಸ್ಥೆ ಎಂದು ಹೇಳಬಯಸುತ್ತೇನೆ. ಇವತ್ತಿನ ದಿವಸ ನಮ್ಮ ಸ್ವಾತಂತ್ರ್ಯ ಹೋರಾಟಗಾರರು ಏನು ಈ ಸಂವಿಧಾನವನ್ನು ನಮಗೆ ಕೊಟ್ಟಿದ್ದಾರೆ, ಅವರು ಏನನ್ನು ಬಯಸಿದ್ದರು, ಏನು ಕನಸನ್ನು ಕಂಡಿದ್ದರು,

ಅದನ್ನು ಸಾಕ್ಷಾತ್ಕಾರ ಮಾಡತಕ್ಕಂತಹ ಜವಾಬ್ದಾರಿ ನಮ್ಮೆಲ್ಲರ ಮೇಲೂ ಇದೆ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ನಾನು ನೋಡಿದ ಹಾಗೆ Mavalankar ರವರಿಂದ ಹಿಡಿದು ಅನಂತಶಯನಂ ಅಯ್ಯಂಗಾರ್‌ರವರು, ಸಂಜೀವ್ ರೆಡ್ಡಿಯವರು, ತದನಂತರ ಬಲರಾಮ್ ಜಾಖಡ್‌ರವರು, ವಿದೇಶಾಂಗ ಸಚಿವರಾಗಿ ಕೆಲಸ ಮಾಡುತ್ತಿದ್ದ ಭಗತ್‌ರವರು, ಇತ್ತೀಚಿನ ದಿನಗಳಲ್ಲಿ ನಾವು ಕಂಡಂತಹ ಸೋಮನಾಥ್ ಚಟರ್ಜಿಯವರು, ಈಗ ಶ್ರೀಮತಿ ಮೀರಾಕುಮಾರ್‌ರವರು, ನಮ್ಮ ಸಂಸದೀಯ ವ್ಯವಸ್ಥೆಯನ್ನು ಕಾಪಾಡತಕ್ಕಂತಹ ಜವಾಬ್ದಾರಿ ನಮ್ಮೆಲ್ಲರ ಮೇಲೆ ಬಿದ್ದಿದೆ. We must preserve, protect and sustain our democracy. The very future of India depends on the success of our democratic system. Sir, while telling this, I am greatly concerned about some of the things which are happening.

ಹಿಂದೆ ಲೋಕಸಭೆಯಲ್ಲಿ Golden Jubilee Celebration ಆಯಿತು. ಆಗ ಶ್ರೀಮಾನ್ ಅಟಲ್ ಬಿಹಾರಿ ವಾಜಪೇಯಿಯವರು ನಮ್ಮ ರಾಷ್ಟ್ರದ ಪ್ರಧಾನ ಮಂತ್ರಿಗಳಾಗಿ ಕೆಲಸ ಮಾಡುತ್ತಿದ್ದರು. ಆಗ ಅವರು ಒಂದು ಮಾತನ್ನು ಹೇಳಿದರು. He told, "During our days whenever we differed, we used to walkout of the House. Now, unfortunately a situation has come wherein whenever we have differences, we walk into the Well of the House. ಇದು ಬದಲಾವಣೆಯಾಗಬೇಕು. ಆಗ ಮಾತ್ರ ಈ ಸಂಸತ್ತಿಗೆ ಮತ್ತು ಈ ಸಂಸತ್ತಿನ ವ್ಯವಸ್ಥೆಗೆ ನಾವು ಅತ್ಯಂತ ವಿಶಿಷ್ಟವಾದಂತಹ ಗೌರವವನ್ನು ತಂದು ಕೊಟ್ಟಂತಾಗುತ್ತದೆ.

ಮಾನ್ಯ ಸಭಾಪತಿಯವರೇ, ತಮಗೆ ಅತ್ಯಂತ ವಿಶಿಷ್ಟ ರೀತಿಯಲ್ಲಿ ಅಭಿನಂದನೆಯನ್ನು ಸಲ್ಲಿಸುವುದಕ್ಕೆ ಬಯಸುತ್ತೇನೆ. ಏಕೆಂದರೆ, ನಾನು ಅತ್ಯಂತ ಹೆಚ್ಚಿನ ವಯಸ್ಸಿನ ಒಬ್ಬ ಸಾಮನ್ಯ ಸದಸ್ಯನಾಗಿದ್ದೇನೆ. ಆದರೆ, ನನ್ನ ಚಿಂತನೆ

ಏನಿದೆ ಎಂದರೆ, ನಮ್ಮ ರಾಷ್ಟ್ರದ ಅಭಿವೃದ್ಧಿ ನಮ್ಮ ಸಂಸದೀಯ ವ್ಯವಸ್ಥೆಯ ಅಡಿಪಾಯದ ಮೇಲೆ ನಿಂತಿದೆ ಎನ್ನುವುದನ್ನು ಎಲ್ಲರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಆದ್ದರಿಂದ, ಎಲ್ಲಾ ಸದಸ್ಯರಲ್ಲಿ ಸಹಿತ ಅತ್ಯಂತ ವಿನಯದ ಕಳಕಳಿ ಏನೆಂದರೆ, let us preserve and protect this system which has been given to us as a gift of God by our Constitution framers.

ಕೊನೆಯದಾಗಿ ಹೇಳುವುದಾದರೆ, ನಮ್ಮ ರಾಷ್ಟ್ರದ ಅತ್ಯಂತ ವಿಶಿಷ್ಟವಾದಂತಹ noble laureate, greatest poet, ಶ್ರೀ ರವೀಂದ್ರನಾಥ ಟಾಗೂರ್‌ರವರು ಹೇಳಿರುವಂತಹ ಒಂದು quotation ಅನ್ನು ತಮ್ಮ ಮೂಲಕ ಎಲ್ಲಾ ಸದಸ್ಯರ ಗಮನಕ್ಕೆ ತಂದು ನನ್ನ ಮಾತನ್ನು ಮುಗಿಸುತ್ತೇನೆ. I quote,

"Where the mind is without fear and the head is held high

Where knowledge is free

Where the world has not been broken up into fragments

By narrow domestic walls

Where words come out from the depth of truth

Where tireless striving stretches its arms towards

Perfection

Where the clear stream of reason has not lost its way

Into the dreary desert sand of dead habit

Where the mind is led forward by thee

Into ever-widening thought and action

Into that heaven of freedom, my Father, let my country

Awake."

ಎಲ್ಲರಿಗೂ ಧನ್ಯವಾದಗಳು, ನಮಸ್ಕಾರ.

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೆ, ಇವತ್ತು ಸನ್ಮಾನ್ಯ ಶ್ರೀ ನಾಣಯ್ಯನವರು ಮಾತನಾಡುತ್ತಾ, ಏನು ಪ್ರಸ್ತಾಪವನ್ನು ಮಾಡಿದರು. ಅದರ ಹಿನ್ನೆಲೆಯಲ್ಲಿ ನಿಜವಾಗಿಯೂ ಸಹ ನಾವೆಲ್ಲರೂ ಯೋಚನೆ ಮಾಡುವಂತಹ ಚರಿತ್ರಾರ್ಹವಾದ ದಿನ ಇದಾಗಿದೆ. ಇವತ್ತಿನ ದಿನ ಈ ಎಲ್ಲಾ ರಾಜಕೀಯ ಪಕ್ಷಗಳಲ್ಲಿರುವಂತಹ ಎಲ್ಲಾ ಗೊಂದಲಗಳ ನಡುವೆಯೂ ಸಹ ತಮ್ಮನ್ನು ಅವಿರೋಧವಾಗಿ ಆಯ್ಕೆ ಮಾಡಿರುವುದಕ್ಕೆ ತಮ್ಮ ವ್ಯಕ್ತಿತ್ವ ಕಾರಣವಿದೆ, ನಮ್ಮ ಪಕ್ಷದ ಮತ್ತು ವಿರೋಧಿ ಪಕ್ಷದ ಸದಸ್ಯರ ಸದ್ಭಾವನೆಯೂ ಸಹ ಕಾರಣವಿದೆ. ಆ ಕಾರಣಕ್ಕೋಸ್ಕರವಾಗಿ ಈ ಸಮಯದಲ್ಲಿ ನಮ್ಮ ಸದನದಲ್ಲಿರುವಂತಹ ವಿರೋಧಿ ಪಕ್ಷದ, ವಿರೋಧಿ ಪಕ್ಷ ಎನ್ನುವಂತಹದ್ದು ಸರಿಯಾದ ಶಬ್ಧವಲ್ಲ. ಪ್ರತಿಪಕ್ಷದ ನಮ್ಮೆಲ್ಲಾ ಸದಸ್ಯರ ಆ ಒಂದು ಸದ್ಭಾವನೆಯೂ ಕಾರಣವಿದೆ, ಒಟ್ಟಾರೆ, ಕರ್ನಾಟಕದ ವಿಧಾನ ಪರಿಷತ್ತು ಇವತ್ತಿನ ಈ ಘಟನೆಯಿಂದ ತನ್ನ ಘನತೆಯನ್ನು ಹೆಚ್ಚಿಸಿಕೊಂಡಿದೆ ಎಂದು ಈ ಸಮಯದಲ್ಲಿ ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ. ನಮ್ಮಲ್ಲಿ ಏನೇ ಚರ್ಚೆಗಳು ನಡೆದರೂ ಸಹ ಸದನದ ಘನತೆಯನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ಸದಸ್ಯರೆಲ್ಲರೂ ಒಟ್ಟಾಗಿ ಯೋಚನೆ ಮಾಡುತ್ತೇವೆ. ಸದನದ ಘನತೆಯನ್ನು ಕಾಪಾಡಿಕೊಳ್ಳುತ್ತೇವೆ ಎನ್ನುವಂತಹ ಒಂದು ಸ್ಪಷ್ಟವಾದಂತಹ ಸಂದೇಶವನ್ನು ಕರ್ನಾಟಕದ ಜನತೆಗೆ ನಾವು ಇವತ್ತು ನೀಡುತ್ತಿದ್ದೇವೆ.

ತಾವು ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದೀರಿ. ತಮ್ಮ ಜೊತೆ ಅಂದು ವಿರೋಧ ಪಕ್ಷದಲ್ಲಿ ಕುಳಿತಿದ್ದೆವು. ಆ ಸ್ಥಾನದಲ್ಲಿ ತಾವು ಕುಳಿತಿದ್ದ ಸಂದರ್ಭದಲ್ಲಿ ತಮ್ಮ ಜೊತೆ ಡಾ॥ ತಂಗಾ ಅವರು ಇದ್ದರು, ಶ್ರೀ ಎಂ.ಪಿ.ಪ್ರಕಾಶ್‌ರವರು ಇದ್ದರು, ಡಾ॥ ವಿ.ಎಸ್.ಆಚಾರ್ಯರವರು ಇದ್ದರು. ಇಂತಹ ಅನೇಕ ಜನ ಹಿರಿಯರೊಂದಿಗೆ ನಾವುಗಳು ತಮ್ಮ ಜೊತೆ ವಿರೋಧ ಪಕ್ಷದಲ್ಲಿ ಕೆಲಸ ಮಾಡಿದಂತಹ ಅನುಭವ ನಮಗೆ ಇತ್ತು. ಶಿಕ್ಷಕರ ಕ್ಷೇತ್ರದಿಂದ ಆಯ್ಕೆಯಾಗಿ ಬಂದಂತಹ ಶ್ರೀಯುತ ಗುರುಗಳಾದ ನರಹರಿಯವರು ಇದ್ದರು. ಆ ಸಮಯದಲ್ಲಿ ನಾವು ವಿರೋಧ ಪಕ್ಷದಲ್ಲಿ ಇದ್ದೆವು. ಇನ್ನೊಬ್ಬರು ಆಡಳಿತ

ಪಕ್ಷದಲ್ಲಿ ಇದ್ದರು. ಆದರೂ ಸಹ ಸದನ ತುಂಬಾ ಚೆನ್ನಾಗಿ ನಡೆದುಕೊಂಡು ಹೋಗುತ್ತಿತ್ತು. ತದನಂತರ ತಾವು ಸಭಾಪತಿಗಳಾಗಿ ಕೆಲಸ ನಿರ್ವಹಿಸಿದ ಎರಡು ವರ್ಷಗಳಲ್ಲಿ ಸದನ ತುಂಬಾ ಚೆನ್ನಾಗಿ ನಡೆದುಕೊಂಡು ಬಂದಿರುವಂತಹದ್ದು, ತಮ್ಮ ಈ ಸಭಾಪತಿಯ ಆಯ್ಕೆಯ ಈ ಒಂದು ಘಟನೆ ಏನು ನಡೆಯಿತು, ತಮ್ಮನ್ನು ಅವಿರೋಧವಾಗಿ ಆಯ್ಕೆ ಮಾಡುವಂತಹ ಪರಿಸ್ಥಿತಿ ಏನು ನಿರ್ಮಾಣವಾಯಿತು, ಅದಕ್ಕೆ ತಮ್ಮ ಎರಡು ವರ್ಷದಲ್ಲಿ ತಾವು ಸದನದ ಕಾರ್ಯಕಲಾಪವನ್ನು ನಡೆಸಿಕೊಂಡು ಬಂದ ರೀತಿಯೂ ಸಹ ಅದಕ್ಕೆ ಒಂದು ಮೇಲ್ಪಂಕ್ತಿಯನ್ನು ಹಾಕಿಕೊಡಲಿಕ್ಕೆ ಸಾಧ್ಯವಾಗಿದೆ. ಈ ಸಮಯದಲ್ಲಿ ತಮ್ಮನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ನಮ್ಮ ಎಲ್ಲಾ ಸದಸ್ಯರ ಪ್ರತಿನಿಧಿಯಾಗಿ ತಾವು ಅಲ್ಲಿ ಕುಳಿತ್ತಿದ್ದಿರಿ. ಎಲ್ಲರನ್ನೂ ಸಹ ತಾವೂ ಅತ್ಯಂತ ಪ್ರೀತಿಯಿಂದ ಎಲ್ಲರಿಗೂ ಅವಕಾಶ ಕೊಟ್ಟು, ಎಲ್ಲರ ಮಾತನ್ನು ಕೇಳುವಂತಹ ತಾಳ್ಮೆಯನ್ನು ತಾವೂ ಇಟ್ಟುಕೊಂಡಿದ್ದೀರಿ. ಆ ಕಾರಣಕ್ಕೋಸ್ಕರ ನಾನು ಎಲ್ಲರ ಪರವಾಗಿ ತಮ್ಮನ್ನು ಅಭಿನಂದಿಸುತ್ತೇನೆ. ತಮ್ಮನ್ನು ಅಭಿನಂದಿಸುವುದಕ್ಕೆ ಒಂದು ವಿಶೇಷ ಕಾರಣ ಇದೆ. ನಮ್ಮ ವಿಧಾನ ಪರಿಷತ್ತಿನ ಸರ್ಕಾರಿ ಮುಖ್ಯ ಸಚೇತರಾದಂತಹ ಡಾ|| ಎ.ಹೆಚ್. ಶಿವಯೋಗಿಸ್ವಾಮಿಯವರು ತಮ್ಮನ್ನು ದಾವಣಗೆರೆಯವರು ಎಂದು ಹೇಳಿ ಜ್ಞಾಪಿಸಿಕೊಟ್ಟರು. ಆದರೆ, ಈ ಬಾರಿ ತಾವು ಚುನಾವಣೆಗೆ ಸ್ಪರ್ಧೆ ಮಾಡಿದ್ದು ಶಿವಮೊಗ್ಗ, ಮಂಗಳೂರು ಕ್ಷೇತ್ರದಿಂದ ಆದರೂ ಸಹ ತಾವು ನಾಮಪತ್ರವನ್ನು ಮೈಸೂರಿನಲ್ಲಿ ಸಲ್ಲಿಸಿದ್ದಿರಿ. ತಮ್ಮ ಚುನಾವಣೆಯ ಮತ ಎಣಿಕೆ ಮೈಸೂರಿನಲ್ಲಿ ನಡೆದಿತ್ತು. ಹಾಗಾಗಿ, ಈ ಒಂದು ಚುನಾವಣೆಯಲ್ಲಿ ತಾವು ಏನು ಗೆದ್ದಿದ್ದೀರಿ, ಇದಕ್ಕೆ ಮೈಸೂರಿನ ನಮ್ಮೆಲ್ಲರ ಕಾರ್ಯಕರ್ತರ, ಬಂಧುಗಳ ಒಂದು ವಿಶೇಷವಾದಂತಹ ಪ್ರಯತ್ನವೂ ಇದೆ ಎನ್ನುವುದನ್ನು ನಾನು ಜ್ಞಾಪಿಸಿಕೊಳ್ಳುತ್ತಾ, ಮೈಸೂರಿನ ಎಲ್ಲಾ ಕಾರ್ಯಕರ್ತರ ಪರವಾಗಿ, ನಮ್ಮ ಕ್ಷೇತ್ರದ ಎಲ್ಲಾ ಕಾರ್ಯಕರ್ತರ ಪರವಾಗಿ ತಮ್ಮನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ನಮಸ್ಕಾರ.

**ಶ್ರೀ ಮತ್ತಿಕಟ್ಟಿ ವೀರಣ್ಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಂದಿನ ದಿನ ಬಹಳ ಹರ್ಷ ತರತಕ್ಕಂತಹ ದಿನ ಎಂದು

ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಸಭಾಪತಿ ಸ್ಥಾನ ಬಹಳ ಗೌರವಯುತವಾದಂತಹದ್ದು. ಅದರಲ್ಲೂ ಸಹ ಹಲವಾರು ಹಿರಿಯ ಸದಸ್ಯರು ಹೇಳಿದ ಹಾಗೆ ಕರ್ನಾಟಕ ಮುಖ್ಯ ಪರಂಪರೆಯನ್ನು ಅದರಲ್ಲಿಯೂ parliamentary democracy ಯಲ್ಲಿ ಹೆಚ್ಚು ಆಸ್ತೆಯನ್ನು ಹೊಂದಿದಂತಹ ನಾಯಕರಿಂದ ಕೂಡಿದಂತಹ ರಾಜ್ಯ. ಇವತ್ತು ಈ ರಾಜ್ಯದಲ್ಲಿ ಈ ಮೇಲ್ಮನೆಗೆ ಅತ್ಯಂತ ಗೌರವಯುತ ಸ್ಥಾನ ಇದೆ. ಇದಕ್ಕೆ ಹಿರಿಯರ ಸಭೆ ಎಂದು ಕರೆಯುತ್ತಾರೆ. ನನಗೆ ಬಹಳ ಸಂತೋಷ ಏನೆಂದರೆ, ತಮ್ಮನ್ನು ಮತ್ತೆ ಸಭಾಪತಿಯನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಿದ್ದಾರೆ. ಇವತ್ತಿನ ಪರಿಸ್ಥಿತಿಯಲ್ಲಿ ಸಂಘರ್ಷ, ದ್ವೇಷ, ಅಸೂಯೆಗಳಿಂದ ಕೂಡಿದೆ. ಹಿಂದೆ ವ್ಯಕ್ತಿಗತ ರಾಜಕೀಯಕ್ಕಿಂತ ಹೆಚ್ಚು ತತ್ವಕ್ಕೆ, ಸಿದ್ಧಾಂತಕ್ಕೆ ಮಹತ್ವ ಇತ್ತು. ದುರ್ದೈವ ಇವತ್ತು ಆ ಮೌಲ್ಯಗಳೆಲ್ಲಾ ಕಡಿಮೆಯಾಗಿ ವ್ಯಕ್ತಿಗತ ರಾಜಕೀಯಕ್ಕೆ ಹೆಚ್ಚು ಒತ್ತನ್ನು ಕೊಡುವುದರಿಂದ ಈ ರಾಜ್ಯದಲ್ಲಿ ಸಂಘರ್ಷ, ದ್ವೇಷದ ವಾತಾವರಣ ನಿರ್ಮಾಣವಾಗಿದೆ. ಅದು ಹೋಗಬೇಕು. ಅದಕ್ಕೆ ಪೂರಕವಾಗಿ ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ವಿರೋಧಪಕ್ಷದ ಅಧ್ಯಕ್ಷರಿಗೆ, ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ಸನ್ಮಾನ್ಯ ಡಾ॥ ಜಿ. ಪರಮೇಶ್ವರ್ ರವರಿಗೆ ಹಾಗೂ ಜನತಾದಳ ಅಧ್ಯಕ್ಷರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿ ಅವರಿಗೆ ಮಾತನಾಡಿದ್ದನ್ನು ಪ್ರಸ್ತಾವನೆ ಮಾಡಿದರು. ಅದಕ್ಕಿಂತ ಮೊದಲು ಡಾ॥ ಎ.ಹೆಚ್. ಶಿವಯೋಗಿಸ್ವಾಮಿಗಳು ನನ್ನ ಜೊತೆ ಮಾತನಾಡಿದರು. ಮಾನ್ಯ ಮುಖ್ಯಮಂತ್ರಿಗಳ ಅಭಿಪ್ರಾಯ ಹೀಗೆ ಇದೆ. ಶ್ರೀಯುತ ಶಂಕರಮೂರ್ತಿ-ಯವರನ್ನು ನಾವು ಮರಳಿ ಸಭಾಪತಿಗಳನ್ನಾಗಿ ಮಾಡುತ್ತಿದ್ದೇವೆ, ಅದಕ್ಕೆ ನಿಮ್ಮ ಬೆಂಬಲ ಬೇಕೆಂದು ಹೇಳಿದರು. ಅದಕ್ಕೆ ನಾನು ಆಗಲೇ ಹೇಳಿದೆ. ನಾವು ಖಂಡಿತವಾಗಿ ಶ್ರೀಯುತ ಶಂಕರಮೂರ್ತಿಯವರಿಗೆ ಸಂಪೂರ್ಣವಾದ ಸಹಕಾರವನ್ನು ಕೊಡುತ್ತೇವೆ, ಅದಕ್ಕಿಂತ ಮೊದಲು ನಮ್ಮ ಪಕ್ಷದ ಅಧ್ಯಕ್ಷರು ಹಾಗೂ ಶಾಸಕಾಂಗ ಪಕ್ಷದ ನಾಯಕರೊಂದಿಗೆ ಮಾತನಾಡುತ್ತೇನೆ ಎಂದು ಹೇಳಿ ನಾನು ಡಾ॥ ಜಿ. ಪರಮೇಶ್ವರ್‌ರವರ ಜೊತೆ ಮಾತನಾಡಿದೆ. ಅವರು ಬಹಳ ಸಂತೋಷದಿಂದ ಹೇಳಿದರು. ಇದು ಒಳ್ಳೆಯ ವಿಚಾರ, ಒಳ್ಳೆಯ

ವಾತಾವರಣ ನಿರ್ಮಾಣವಾಗಬೇಕು ಎನ್ನುವುದನ್ನು ಹೇಳಿ ತಮ್ಮ ವಿಚಾರಕ್ಕೆ ನಮ್ಮ ಪಕ್ಷದಿಂದ ಸಂಪೂರ್ಣವಾದ ಸಹಕಾರವನ್ನು ಕೊಡಲು ತಿಳಿಸಿದೆವು.

ನಾನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ನನಗೆ ಒಂದು ವರ್ಷ 11 ತಿಂಗಳ ಕಾಲ ಈ ಸದನದ ಸಭಾಪತಿಯಾಗುವಾಗ ಅವಿರೋಧವಾಗಿ ಆಯ್ಕೆಯಾಗುವ ಅವಕಾಶ ಲಭ್ಯವಾಯಿತು. ಅಂದು ಯಾವುದೇ ಪಕ್ಷಕ್ಕೂ ಬಹುಮತ ಇರಲಿಲ್ಲ. ಜನತಾದಳದ ನಾಯಕರು ಹಾಗೂ ಅಂದಿನ ಬಿ.ಜೆ.ಪಿ. ಸರ್ಕಾರದಲ್ಲಿ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮತ್ತು ತಾವು ಹಾಗೂ ದಿವಂಗತರಾಗಿರುವಂತಹ ಡಾ: ಆಚಾರ್ಯ ಅವರನ್ನು ನೆನೆಸಿಕೊಳ್ಳತ್ತೇವೆ. ಅವರು ಅತ್ಯಂತ ಮಾನವೀಯ ಮೌಲ್ಯಗಳನ್ನು ಹೊಂದಿದ ಒಬ್ಬ ಮಹಾನ್ ನಾಯಕರು. ನೀವುಗಳು ಎಲ್ಲರೂ ಸಹ ಸಭಾಪತಿಯವರ ಸ್ಥಾನಕ್ಕೆ ಮತ್ತೆ ಅವರನ್ನೆ ಅವಿರೋಧವಾಗಿ ಆರಿಸತಕ್ಕಂತಹ ಅವಕಾಶವನ್ನು ಕಲ್ಪಿಸಿದ್ದೀರಿ. ಅದಕ್ಕೆ ನಾವುಗಳೂ ಕೂಡ ದನಿಗೂಡಿಸಿದ್ದೇವೆ. ಅಂದಿನ ಕ್ಲಿಷ್ಟ ಸಮಸ್ಯೆಗಳ ಮಧ್ಯದಲ್ಲಿ ಸದನದ ಎಲ್ಲಾ ಸದಸ್ಯರ ಸಹಕಾರ ಇಲ್ಲದೇ ಹೋಗಿದ್ದರೆ ನಾವು ಅಷ್ಟು ಚೆನ್ನಾಗಿ ಸದನವನ್ನು ನಡೆಸುವುದಕ್ಕಾಗುತ್ತಿರಲಿಲ್ಲ. ಜನ ಮೆಚ್ಚುಗೆಯನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಅಂದು ತಾವು ಅಧಿಕಾರ ರೂಢ ಪಕ್ಷದಲ್ಲಿದ್ದಾಗಲೂ ನಮಗೆಲ್ಲರಿಗೂ ಕೂಡ ಕೊಟ್ಟಂತಹ ಸಹಕಾರ, ಸಹಭಾವನೆ ಏನು ಇದೆ ಅದನ್ನು ನಾನು ಇವತ್ತಿಗೂ ಸಹ ನೆನೆಸುತ್ತೇನೆ. ಈ ಸದನದ ಮೂಲಕ ನಾನು ಈ ಮಾತನ್ನು ಹೇಳಬಯಸುತ್ತೇನೆ. ಅಧಿಕಾರ ನಿರಂತರವಾಗಿ ಇರುತ್ತದೆಂದು ಯಾರೂ ಹೇಳುವುದಕ್ಕಾಗುವುದಿಲ್ಲ. ಅಧಿಕಾರ ಕೊನೆಯವರೆಗೂ ಇರುವುದಿಲ್ಲ. ಅಧಿಕಾರ ಇದ್ದಾಗ ನಾವು ಏನು ಮಾಡುತ್ತೇವೆ ಯಾವ ರೀತಿ ನಡೆದುಕೊಳ್ಳುತ್ತೇವೆ ಅದು ಬಹಳ ಮುಖ್ಯ. ಪೂಜ್ಯ ಮಹಾತ್ಮಾ ಗಾಂಧಿಯವರು ಮತ್ತು ಅಂದಿನ ಎಲ್ಲಾ ನಾಯಕರು ಈ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟು ಯಾವ ಉದ್ದೇಶಗಳಿಗಾಗಿ ಸಂವಿಧಾನವನ್ನು ರಚನೆ ಮಾಡಿ ಕೊಟ್ಟರೋ ಅದನ್ನು ಆ ಉದ್ದೇಶಗಳ ಈಡೇರಿಕೆಗಾಗಿ ಮತ್ತು ಅದನ್ನು ಸಮರ್ಪಕವಾಗಿ ಕಾರ್ಯರೂಪಕ್ಕೆ ತರಬೇಕಾದರೆ ಸಂವಿಧಾನಕ್ಕೆ ನಾವೆಲ್ಲರೂ ಬದ್ಧರಾಗಿ, ಅದಕ್ಕೆ

ಬದ್ಧತೆಯಿಂದ ನಡೆದುಕೊಳ್ಳಬೇಕು. ಈ ಸದನ ನಡೆಯಬೇಕು. ವರ್ಷದಲ್ಲಿ ಕನಿಷ್ಠ 60 ದಿವಸಗಳ ಕಾಲ ಈ ಸದನವನ್ನು ನಡೆಸಬೇಕೆಂದು ನಾವೇ ಒಂದು ಕಾನೂನನ್ನು ಮಾಡಿಕೊಂಡಿದ್ದೇವೆ. ಕನಿಷ್ಠ 60 ದಿವಸಗಳು ಅಲ್ಲ ಎಷ್ಟು ದಿವಸಗಳ ಕಾಲ ಈ ಸದನ ನಡೆಯುತ್ತದೆ ಅಷ್ಟೂ ಈ ರಾಜ್ಯಕ್ಕೆ ಒಳ್ಳೆಯದಾಗುತ್ತದೆ. ಇದರಿಂದಾಗಿ ನಾವೆಲ್ಲರೂ ಈ ರಾಜ್ಯದ ಜನತೆಯ ಸಮಸ್ಯೆಗಳಿಗೆ ಸ್ಪಂದಿಸಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದರಿಂದ ಸರ್ಕಾರಕ್ಕೂ ಕೂಡ ಒಳ್ಳೆಯದಾಗುತ್ದೆ. ಈ ಸದನ ನಡೆದರೆ ಅದು ತಪ್ಪು ಎಂದು ಸರ್ಕಾರ ತಿಳಿದುಕೊಳ್ಳಬಾರದು. ಸದನ ನಡೆದರೆ ಈ ಸರ್ಕಾರಕ್ಕೆ ಒಂದು ಶಕ್ತಿ ಬರುತ್ತದೆ. ಆಡಳಿತದಲ್ಲಿನ executive machinery ಏನು ಇದೆ ಅದು ಚೆನ್ನಾಗಿ ಕೆಲಸ ಮಾಡುತ್ತದೆ. ಹಾಗೂ ಆಡಳಿತದಲ್ಲಿ ಇರುವ ಅಧಿಕಾರಿಗಳು ಹೆಚ್ಚು ನಿಷ್ಠೆಯಿಂದ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ಸದನ ಕೆಳ ಮನೆಗಿಂತಲೂ ಬಹಳ ಚೆನ್ನಾಗಿ ನಡೆದಿದೆ. ಅದನ್ನು ಮುಂದುವರಿಸಿಕೊಂಡು ಹೋಗಬೇಕು. ಅದರಲ್ಲೂ ತಾವು ಈ ಸದನದ ಎಲ್ಲಾ ಸ್ಥಾನಗಳಲ್ಲಿ ಕುಳಿತು ಕೆಲಸ ಮಾಡಿದ್ದೀರಿ. ವಿರೋಧ ಪಕ್ಷದ ನಾಯಕರಾಗಿ ಕಲೆಸ ಮಾಡಿದ್ದಿರಿ. ಆಡಳಿತ ಪಕ್ಷದ ಸದಸ್ಯರಾಗಿ ಕೆಲಸ ಮಾಡಿದ್ದೀರಿ ಹಾಗೂ ಸಚಿವರಾಗಿ ಕೆಲಸ ಮಾಡಿದ್ದೀರಿ. ಮತ್ತು ಈ ರಾಜ್ಯದಲ್ಲಿನ ಈ ಸದನದ ಅತ್ಯುನತ ಸ್ಥಾನಕ್ಕೆ ಆಯ್ಕೆಯಾಗಿದ್ದೀರಿ. ಈ ಒಂದು ಅತ್ಯುನ್ನತ ಗೌರವಯುತವಾದ ಸ್ಥಾನಕ್ಕೆ ತಮ್ಮಂತಹ ಬದ್ಧತೆ ಇದ್ದವರು ತತ್ವ ನಿಷ್ಠೆಗೆ ಬದ್ಧರಾಗಿರುವವರು ಆರಿಸಿ ಬಂದಿರುವುದರಿಂದ ಆ ಸ್ಥಾನಕ್ಕೆ ಮತ್ತು ಈ ಸದನಕ್ಕೆ ಹೆಚ್ಚಿನ ಗೌರವವನ್ನು ತಂದು ಕೊಟ್ಟಿದೆ ಎಂದರೆ ಅದು ಅತಿಶಯೋಕ್ತಿಯಾಗಲಾರದು. ಮುಂಬರುವ ದಿನಗಳಲ್ಲಿ ಅತ್ಯಂತ ಮೌಲ್ಯಯುತವಾದ ವಿಚಾರಗಳನ್ನು ಚರ್ಚಿಸುವುದರ ಜೊತೆಗೆ ಈ ರಾಜ್ಯದ ಜನತೆಯ ಎಲ್ಲಾ ಸಮಸ್ಯೆ ಅವರ ನೋವು ನಲಿವುಗಳಿಗೆ ಸ್ಪಂದಿಸುವುದಕ್ಕೆ ಸಾಧ್ಯವಾಗುತ್ತದೆ. ಸುವರ್ಣ ಕರ್ನಾಟಕವೆಂದು ಏನು ಹೇಳುತ್ತೇವೆ ಅದು ಸಮೃದ್ಧ ಕರ್ನಾಟಕವೆಂದು ಆಗಲಿ ಎಂದು ಹಾರೈಸಿ ಮತ್ತೊಮ್ಮೆ ಹೃದಯಪೂರ್ವಕವಾಗಿ ತಮ್ಮನ್ನು ಅಭಿನಂದಿಸುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನನ್ನ ಕ್ಷೇತ್ರದ ಎಲ್ಲಾ ಮತದಾರರ ಪರವಾಗಿ ಮತ್ತು ವೈಯಕ್ತಿಕವಾಗಿ ತಮಗೆ ವಿಶೇಷವಾದಂತಹ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಉಳಿದೆಲ್ಲಾ ಸದಸ್ಯರಿಗಿಂತ ನನಗೆ ಒಂದು ವಿಶೇಷವಾದ ಅವಕಾಶ ಇದೆ. ಹಿಂದಿನ ಚುನಾವಣೆ ಮತ್ತು ಈ ಚುನಾವಣೆಯಲ್ಲಿ ನಾವಿಬ್ಬರೂ ಒಂದೇ ಕ್ಷೇತ್ರದಿಂದ ಒಟ್ಟಿಗೆ ಸ್ಪರ್ಧೆಯನ್ನು ಮಾಡಿದ್ದೆವು. ಈ ಬಾರಿಯಂತೂ ಕಳೆದ ಮೂರು ತಿಂಗಳ ಕಾಲ ಒಂದೇ ಕಾರಿನಲ್ಲಿ ಐದೂವರೆ ಜಿಲ್ಲೆಗಳಲ್ಲಿ ಪ್ರವಾಸವನ್ನು ಮಾಡಿದ್ದೇವೆ. ಹಾಗಾಗಿ ತಮಗೆ ವಿಶೇಷವಾಗಿ ಅಭಿನಂದನೆಯನ್ನು ಹೇಳಬಯಸುತ್ತೇನೆ. ಈ ಸದನದಲ್ಲಿ ತಮಗೆ ಅಭಿನಂದನೆಯನ್ನು ಹೇಳಿದಂತಹ ಹಿರಿಯ ಸದಸ್ಯರಾದ ಮಾನ್ಯ ಎಂ.ವಿ. ರಾಜಶೇಖರನ್ ಅವರ ಮಾತುಗಳನ್ನು ಕೇಳುತ್ತಿದ್ದೆ. ಮತ್ತೊಬ್ಬ ಹಿರಿಯ ಸದಸ್ಯರಾದ ಮಾನ್ಯ ವೀರಣ್ಣ ಮತ್ತಿಕಟ್ಟಿಯವರ ಮಾತನ್ನು ಕೂಡ ನಾನು ಕೇಳಿದೆ. ಅವರು ಒಂದಷ್ಟು ಸಂಗತಿಗಳನ್ನು ಉಲ್ಲೇಖ ಮಾಡಿದರು. ಪರಸ್ಪರ ಪ್ರೀತಿ ವಿಶ್ವಾಸ, ಮತ್ತು ಸೌಹಾರ್ದತೆ, ಮಾತುಕತೆಯೇ ನಮ್ಮ ಸಂವಿಧಾನದ ಉದ್ದೇಶವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಒಂದು ಸಮಾನತೆಯ ಚಿಂತನೆಯೊಂದಿಗೆ ಒಂದು ಒಳ್ಳೆಯ ಸಂವಿಧಾನದ ಆಧಾರದ ಚೌಕಟ್ಟಿನಲ್ಲಿ ಆಡಳಿತವನ್ನು ನಡೆಸುವಂಥಾದ್ದಾಗಿದೆ. ನಾನು ಚುನಾವಣಾ ಸಮಯದಲ್ಲಿ ಪ್ರಚಾರಕ್ಕೆ ಹೋಗಬೇಕಾದರೆ ಈ ಮಾತು ಮತ್ತೆ ಮತ್ತೆ ಬರುತ್ತಿತ್ತು. ಈ ಹಿಂದಿನ ಎಲ್ಲಾ ಸಭಾಪತಿಗಳ ಕೆಲಸವನ್ನು ಅತ್ಯಂತ ಗೌರವದಿಂದ ನೆನಪು ಮಾಡಿಕೊಂಡು ಬಹಳ ದಿನಗಳಾದ ಮೇಲೆ ನಮ್ಮ ಸದನಕ್ಕೆ ಒಬ್ಬ ಒಳ್ಳೆಯ ಹೆಡ್‌ಮಾಸ್ಟರ್ ಸಿಕ್ಕಿದ್ದಾರೆ ಎಂಬ ಮಾತು ಬರುತ್ತಿತ್ತು. ಮಾನ್ಯ ಮುಖ್ಯ ಸಚೇತಕರು ಉಲ್ಲೇಖ ಮಾಡಿದ ಹಾಗೆ ಕಳೆದ 20–22 ತಿಂಗಳ ಅವಧಿಯಲ್ಲಿ ವಿಶಿಷ್ಠ ಮತ್ತು ವಿನೂತನವಾದಂತಹ ಕೆಲಸಗಳನ್ನು ತಾವು ಪ್ರಾರಂಭ ಮಾಡಿದ್ದೀರಿ. ಅದು ಇಲ್ಲಿ ಭಾವಚಿತ್ರಗಳನ್ನು ಅನಾವರಣ ಮಾಡಿದ್ದು ಇರಬಹುದು ಮತ್ತು ಸದನ ಪ್ರಾರಂಭವಾಗುವ ಸಮಯದಲ್ಲಿ ನಾವೆಲ್ಲರೂ ಎದ್ದುನಿಂತು ವಂದೇಮಾತರಂಗೆ ದನಿಗೂಡಿಸುವುದು ಇರಬಹುದು. ಆ

ಸಮಯದಲ್ಲಿ ಭಾವನಾತ್ಮಕವಾದ ಬದಲಾವಣೆಗಳು ಆಗಬಹುದು. ಮತ್ತು ಈ ಸದನ ಮುಗಿಯುವ ದಿನ ಕೊನೆಯಲ್ಲಿ, ಎಷ್ಟೇ ಹೊತ್ತಿಗೆ ಮುಗಿಯಲಿ ಆ ಸಂದರ್ಭದಲ್ಲಿ ರಾಷ್ಟ್ರಗೀತೆಯನ್ನು ಹಾಡಿಕೊಂಡು ಮತ್ತೊಮ್ಮೆ ಬದ್ಧತೆಯನ್ನು ಪ್ರದರ್ಶನ ಮಾಡುವುದು ಇರಬಹುದು. ಮತ್ತು ನಮ್ಮ ಸದನದ ಪ್ರಶ್ನೋತ್ತರ ಅವಧಿಯನ್ನು ಒಂದು ಗಂಟೆಗೆ ಸೀಮಿತಗೊಳಿಸುವ ಮೂಲಕ ಶಿಸ್ತನ್ನು ಕಾಪಾಡುವುದು ಇರಬಹುದು. ಮತ್ತು ಈ ಸದನದಲ್ಲಿ ಮೊಬೈಲ್ ಅನ್ನು ಒಳಗಡೆ ತಂದು ಅದರಿಂದಾಗಿ ಸದನದ ಶಾಂತಿಗೆ ಭಂಗ ಬಂದಾಗ ನಿಜವಾಗಲೂ ಈ ಮೊಬೈಲುಗಳನ್ನು ಏಕೆ ಉಪಯೋಗ ಮಾಡುತ್ತೇವೆಂದು ಹೆಡ್ ಮಾಸ್ಟರ್ ತರಹ ಹೇಳಿದಂತಹ ಸಂಗತಿಗಳ ಬಗ್ಗೆ ತಾವು ಮಾಡಿದಂತಹ ಉಲ್ಲೇಖ ಇರಬಹುದು. ಸದನದಲ್ಲಿ ಸದಸ್ಯರುಗಳ ಹಾಜರಾತಿಯ ಬಗ್ಗೆ ಇರಬಹುದು. ಕಳೆದ ಆರು ವರ್ಷಗಳ ಹಿಂದೆ ನಾನು ಈ ಸದನಕ್ಕೆ ಬಂದಾಗ ನೋಡಿದ್ದಕ್ಕೂ ಈಗಿನ ಪರಿಸ್ಥಿತಿಗೂ ತುಂಬಾ ವ್ಯತ್ಯಾಸಗಳಾಗಿವೆ. ಈ ಎಲ್ಲಾ ಸಂಗತಿಗಳನ್ನು ನೆನಪು ಮಾಡಿಕೊಳ್ಳುತ್ತಾ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಬಹಳ ಸಂದರ್ಭಗಳಲ್ಲಿ ನಾವು ಭಾಷಣ ಮಾಡಬೇಕಾದರೆ ಮಾತನಾಡುತ್ತೇವೆ. ಈ ಸದನದ ಚರ್ಚೆಯ ಕಾರ್ಯಕಲಾಪದ ಘನತೆ ಗೌರವ ಜಾಸ್ತಿಯಾಗಬೇಕೆಂದು ಮಾತನಾಡುತ್ತೇವೆ. ಆದರೆ ಆ ಮಾತುಗಳನ್ನು ಹೇಳುವಂತಹ ನಾವು ಈ ಸದನದಲ್ಲಿ ಮಾತನಾಡಲು ನಮಗೆ ಅವಕಾಶ ಸಿಕ್ಕಿದಾಗ ಹೇಗೆ ವರ್ತನೆ ಮಾಡುತ್ತೇವೆ, ಹೇಗೆ ಚರ್ಚೆಗಳನ್ನು ಸ್ಥಳಾಂತರ ಮಾಡುತ್ತೇವೆ, ಇಲ್ಲವೇ ಆ ಚರ್ಚೆಯ ದಾರಿಯನ್ನು ತಪ್ಪಿಸುವ ಕೆಲಸವನ್ನು ಮಾಡುತ್ತೇವೆ ಮತ್ತು ಇದರಿಂದ ಖಂಡಿತವಾಗಿ ಸದನದ ಚರ್ಚೆಗೆ ಗೌರವ ಬರುವುದಿಲ್ಲ. ನಮಗೆ ಇಲ್ಲಿ ಮಾತನಾಡಲು ಸಿಕ್ಕಿದಂತಹ ಎಲ್ಲಾ ಅವಕಾಶಗಳೆಲ್ಲವನ್ನೂ ಕೂಡ ರಾಜಕಾರಣದ ಚರ್ಚೆಗಳನ್ನು ಮಾಡುವುದಕ್ಕೆ ಉಪಯೋಗ ಮಾಡಿಕೊಂಡು ಒಟ್ಟಾರೆ ಸದನದ ಚರ್ಚೆಯ ಘನತೆ ಗಾಂಭೀರ್ಯದ ದಾರಿ ತಪ್ಪಿಸುವ ಕೆಲಸ ಮಾಡುವಾಗ, ಎಲ್ಲೋ ಒಂದು ಕಡೆಯಲ್ಲಿ ನಾವು ತಮ್ಮನ್ನು ವಿನಂತಿ ಮಾಡಬೇಕಾದ ಕಾಲಘಟ್ಟದಲ್ಲಿ ಇದ್ದೇವೆಂದು ಅಂದುಕೊಳ್ಳುತ್ತೇನೆ. ಕಾರ್ಯಕಲಾಪದ ಪಟ್ಟಿ ನಮಗೆ ಏನು

ಬರುತ್ತದೆ ಅದಕ್ಕೆ ಸೀಮಿತವಾಗಿ ಇಲ್ಲಿ ಚರ್ಚೆ ನಡೆಸುವ ಪ್ರಾಮಾಣಿಕವಾದ ಪ್ರಯತ್ನವನ್ನು ತಾವು ಮಾಡುತ್ತಿದ್ದೀರಿ. ಮಾಡಿದ್ದೀರಿ. ಕಳೆದ ಮೂರು ತಿಂಗಳ ಅವಧಿಯಲ್ಲಿ ನಾನು ತಮ್ಮ ಜೊತೆಯಲ್ಲಿ ಪ್ರವಾಸ ಮಾಡಬೇಕಾದರೆ ಒಟ್ಟು ಈ ಸಂವಿಧಾನದ ವ್ಯವಸ್ಥೆಯ ಬಗ್ಗೆ ಈ ಸದನದ ಕಾರ್ಯಕಲಾಪಗಳ ಚರ್ಚೆಯ ಬಗ್ಗೆ ನನ್ನ ಜೊತೆಯಲ್ಲಿ ತಾವು ಬಹಳಷ್ಟು ವಿಚಾರಗಳನ್ನು ಹಂಚಿಕೊಂಡಿದ್ದೀರಿ. ಅದೇ ರೀತಿ ನಾನೂ ಕೂಡ ಕೆಲವು ವಿಚಾರಗಳನ್ನು ತಮ್ಮ ಜೊತೆಯಲ್ಲಿ ಹಂಚಿಕೊಂಡಿದ್ದೇನೆ. ಈ ಒಂದು ವಿಚಿತ್ರವಾದ, ವಿಶಿಷ್ಠವಾದ ಕಾಲಘಟ್ಟದಲ್ಲಿ ಈ ಸದನದ ಮೂಲಕ ರಾಜ್ಯದ ಜನರಿಗೆ ಉತ್ತಮವಾದ ಆಡಳಿತವನ್ನು ಕೊಡುವುದಕ್ಕಾಗಿ ತಮ್ಮ ಆ ಎಲ್ಲಾ ಚಿಂತನೆಗಳನ್ನು ಮುಂದಿನ ದಿನಗಳಲ್ಲಿ ಅನುಷ್ಠಾಣಗೊಳಿಸುವುದಕ್ಕೆ ತಾವು ಎಲ್ಲಾ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೀರಿ ಎಂಬ ಆ ಒಂದು ಭರವಸೆ ನನಗೆ ಖಂಡಿತವಾಗಿ ಇದೆ. ತಮ್ಮ ಮುಂದಿನ ಅವಧಿಯಲ್ಲಿ ಈ ಸದನದ ಮೂಲಕ ಇನ್ನಷ್ಟು ಅರ್ಥಪೂರ್ಣ ಚರ್ಚೆಗಳು ಆಗಲಿ ಸದನದ ಒಟ್ಟು ಘನತೆ ಗಾಂಭೀರ್ಯವನ್ನು ಇನ್ನೂ ಹೆಚ್ಚಿಸುವಂತಹ ಪ್ರಯತ್ನಗಳು ಆಗಲಿ. ಪರಸ್ಪರ ಪ್ರೀತಿ ವಿಶ್ವಾಸ ಮಾತುಕತೆಯ ಮೂಲಕ ರಾಜ್ಯದ ಜನರ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ದಿಸೆಯಲ್ಲಿ ನಾವೆಲ್ಲರೂ ಸೇರಿ ಕೆಲಸವನ್ನು ಮಾಡುವ ಎಂದು ಹೇಳಬಯಸುತ್ತೇನೆ. ಒಂದೇ ಭೌಗೋಳಿಕ ಕ್ಷೇತ್ರದಿಂದ ನಾವು ಆಯ್ಕೆಯಾಗಿ ಬಂದಿದ್ದೇವೆ. ನನ್ನ ಎಲ್ಲಾ ಮತದಾರರು ಅವರಿಗೂ ಮತದಾರರಾಗಿದ್ದಾರೆ. ತಮ್ಮ ಮೂಲಕ ತಮ್ಮ ಸಹಕಾರದೊಂದಿಗೆ ನನ್ನ ಕ್ಷೇತ್ರದ ಸಮಸ್ಯೆ ಮಾತ್ರವಲ್ಲ, ಈ ರಾಜ್ಯದ ಎಲ್ಲಾ ಜನರ ಸಮಸ್ಯೆಗಳಿಗೆ ಪರಿಹಾರವನ್ನು ಕೊಡುವಂತಹ ಕೆಲಸವನ್ನು ನಾವೆಲ್ಲರೂ ಸೇರಿ ಮಾಡೋಣ ಎಂದು ಹೇಳಬಯಸುತ್ತೇನೆ. ಈ ಅವಧಿಯಲ್ಲಿ ತಮಗೆ ಶುಭವನ್ನು ಹಾರೈಸುತ್ತೇನೆ. ಮತ್ತು ಈ ಸದನಕ್ಕೆ ಬಹಳಷ್ಟು ಹೊಸ ಸದಸ್ಯರು ಆಯ್ಕೆಯಾಗಿ ಬಂದಿದ್ದಾರೆ. ಅವರೆಲ್ಲರನ್ನೂ ಈ ಸದನಕ್ಕೆ ಪರಿಚಯ ಮಾಡಿಸಿಕೊಡಬೇಕೆಂದು ವಿನಂತಿ ಮಾಡುತ್ತಾ ತಮಗೂ ಮತ್ತು ಎಲ್ಲಾ ಹೊಸ ಸದಸ್ಯರಿಗೂ ಶುಭಾಶಯಗಳನ್ನು ಹೇಳಬಯಸುತ್ತಾ

ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಇಂದು ಸಂತಸದ ದಿನವಾಗಿದೆ. ತಮ್ಮನ್ನು ಈ ಸಭಾಪತಿ ಸ್ಥಾನಕ್ಕೆ ಮತ್ತೊಮ್ಮೆ ಅವಿರೋಧವಾಗಿ ಪುನರ್ ಆಯ್ಕೆ ಮಾಡಿರುವುದು ನಮಗೆಲ್ಲರಿಗೂ ಅತ್ಯಂತ ಸಂತಸದ ವಿಷಯವಾಗಿದೆ. ತಮ್ಮನ್ನು ಈ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆ ಮಾಡಿದಂತಹ ಎಲ್ಲಾ ಪಕ್ಷದ ಮಾನ್ಯ ಸದಸ್ಯರುಗಳಿಗೆ ಮೊದಲು ನಾನು ಅಭಿನಂದನೆ ಸಲ್ಲಿಸುತ್ತೇನೆ, ಡಾ॥ ಶಿವಯೋಗಿ ಸ್ವಾಮಿಯವರು ನನ್ನ ಹತ್ತಿರ ಮಾತನಾಡಿದರು. ಅವರು ಮಾತನಾಡುವುದಕ್ಕೆ ಪೂರ್ವದಲ್ಲಿ ನಾನು ನಮ್ಮ ಪಕ್ಷದ ಅಧ್ಯಕ್ಷರ ಹತ್ತಿರ ಮಾತನಾಡಿದ್ದೆನು. ಈ ಸ್ಥಾನಕ್ಕೆ ಮಾನ್ಯ ಡಿ.ಹೆಚ್.ಶಂಕರಮೂರ್ತಿಯವರ ಹೆಸರು ಬಂದಾಗ ಅವಿರೋಧವಾಗಿ ಆಯ್ಕೆ ಮಾಡುತ್ತೇವೆಂದು ನಾವು ಒಪ್ಪಿಕೊಂಡಿದ್ದೆವು. ನಮ್ಮ ಕಾಂಗ್ರೆಸ್ ಪಕ್ಷದ ಸ್ನೇಹಿತರು ಕೂಡ ಒಪ್ಪಿಕೊಂಡಿದ್ದಾರೆ. ಎಲ್ಲರ ಪರವಾಗಿ ನಾನು ತಮಗೆ ಹೃದಯಪೂರ್ವಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಸದನವನ್ನು ಬಹಳ ಉತ್ತಮವಾಗಿ ನಡೆಸಿಕೊಂಡು ಹೋಗುತ್ತಿರಿ ಎಂಬ ಸಂಪೂರ್ಣವಾದ ವಿಶ್ವಾಸ, ಭರವಸೆ ನನ್ನದಾಗಿದೆ. ದೇವರು ತಮಗೆ ಆ ಒಂದು ಶಕ್ತಿಯನ್ನು ನೀಡಲಿ ತಮಗೆ ಎಲ್ಲಾ ರೀತಿಯಿಂದ ಆಯುರಾರೋಗ್ಯವನ್ನು ನೀಡಲಿ ಎಂದು ಬೇಡಿಕೊಳ್ಳುತ್ತೇನೆ. ತಾವು ಸರಿಯಾದ ರೀತಿಯಲ್ಲಿ ನಮ್ಮೆಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸದನವನ್ನು ನಡೆಸಿಕೊಂಡು ಹೋಗಬೇಕೆಂದು ಹೇಳಬಯಸುತ್ತೇನೆ. ಮಾನ್ಯ ಎಂ. ವಿ. ರಾಜಶೇಖರನ್ ಅವರು ಹಾಗೂ ಮಾನ್ಯ ನಾಣಯ್ಯನವರು ಒಂದು ಮಾತನ್ನು ಹೇಳಿದರು. ನಾನು ಅತ್ಯಂತ ಚಿಕ್ಕ ವಯಸ್ಸಿನಲ್ಲಿ ಇಲ್ಲಿಗೆ ಸದಸ್ಯನಾಗಿ ಬಂದಿದ್ದೇನೆ. 1980ರಲ್ಲಿ ಈ ಸದನಕ್ಕೆ ಬಂದಿದ್ದೇನೆ. ಆಗ ಮಾನ್ಯ ಎಸ್. ವೆಂಕಟರಾಮನ್ ಹಾಗೂ ಮಾನ್ಯ ರಾಜಗೋಪಾಲ್ ಅವರು ಕೂಡ ಇದ್ದರು. ಮಾನ್ಯ ಎ.ಕೆ. ಸುಬ್ಬಯ್ಯನವರು ಕೂಡ ಇಲ್ಲಿ ಸದಸ್ಯರಾಗಿದ್ದರು. ಅವರು ಇಲ್ಲೇ ಕುಳಿತುಕೊಳ್ಳುತ್ತಿದ್ದರು. ಮೂರುವರೆ ತಾಸು ನಿರರ್ಗಳವಾಗಿ

ಮಾತನಾಡುತ್ತಿದ್ದರು. ಈ ರಾಜ್ಯದ ಬಗ್ಗೆ ಕಾರ್ಮಿಕರ ಬಗ್ಗೆ ಮಾತನಾಡುತ್ತಿದ್ದರು. ಇಲ್ಲಿ ಕುಳಿತಿರುತ್ತಿದ್ದ ಎಲ್ಲಾ ಪಕ್ಷದ ಸದಸ್ಯರೂ ಕೂಡ ನೇಚರ್ ಕಾಲ್‌ಗೆ ಓಡಿ ಹೋಗಿ ಬೇಗನೆ ವಾಪಸ್ ಬಂದು ಇಲ್ಲಿ ಕುಳಿತುಕೊಳ್ಳುತ್ತಿದ್ದೆವು. ಇಲ್ಲಿ ಏನು ನಡೆಯುತ್ತಿದೆ ಎಂದು ತಿಳಿದುಕೊಳ್ಳಲು ಅಷ್ಟು ಆಸಕ್ತಿ ನಮಗೆ ಇರುತ್ತಿತ್ತು. ಜೊತೆಗೆ ಅಷ್ಟು ಉತ್ತಮವಾದ ರೀತಿಯಲ್ಲಿ ಇಲ್ಲಿ ನಡವಳಿಕೆಗಳು ನಡೆಯುತ್ತಿತ್ತು. ಈ ಸದನ ಮಾನ್ಯ ಗುಂಡೂರಾಯರು ಮತ್ತು ಇನ್ನೊಬ್ಬರನ್ನು ರಾಜೀನಾಮೆ ಕೊಡಿಸಿದಂತಹ ಸದನವಾಗಿದೆ. ಏನೇನೆಲ್ಲಾ ಮಾಡಿದಂತಹ, ಮಂತ್ರಿಗಳು ತಮ್ಮ ಜವಾಬ್ದಾರಿಯನ್ನು ಸರಿಯಾಗಿ ತಿಳಿದುಕೊಳ್ಳದೆ ಏನು ಬೇಕಾದರೂ ಮಾಡಿದರೆ ನಡೆಯುತ್ತದೆ ಎಂದು ಅಂದುಕೊಂಡಿದ್ದರು, ಅವರಿಂದ ರಾಜೀನಾಮೆ ಕೊಡಿಸಿದಂತಹ ಸದನ ಇದಾಗಿದೆ ಎಂದು ಹೇಳಬಯಸುತ್ತೇನೆ. ಭ್ರಷ್ಟಾಚಾರದಲ್ಲಿ ಒಬ್ಬರು ಮತ್ತೊಂದು ವಿಚಾರದಲ್ಲಿ ತೊಡಗಿದ್ದರು ಎಂದು ಆರೋಪ ಬಂದ ಹಿನ್ನೆಲೆಯಲ್ಲಿ ಅವರುಗಳಿಂದ ರಾಜೀನಾಮೆಯನ್ನು ಕೊಡಿಸಿದಂತಹ ಸದನ ಇದಾಗಿದೆ. ಅಷ್ಟು ಉತ್ತಮವಾದಂತಹ ರೀತಿಯಲ್ಲಿ ನಡವಳಿಕೆಗಳು ನಡೆಯುತ್ತಿದ್ದವು. ಇವತ್ತು ನನಗೂ ಬಹಳ ನೋವು ಆಗುತ್ತಿದೆ.

ಸನ್ಮಾನ್ಯ ಸಭಾಪತಿಯವರೇ, ನಾನು ಈ ಸದನದಲ್ಲಿ ಬಹಳಷ್ಟು ಜನ ಸಭಾಪತಿಯವರನ್ನು, ಬಹಳಷ್ಟು ಜನ ಮುಖ್ಯಮಂತ್ರಿಯವರನ್ನು ನೋಡಿದ್ದೇನೆ. ನಾನು ಈಗ ರಾಜ್ಯದ 13ನೇ ಮುಖ್ಯಮಂತ್ರಿಯವರನ್ನು ನೋಡುತ್ತಿದ್ದೇನೆ. ಇವರು ಎಷ್ಟನೇ ಸಭಾಪತಿಯವರು ಎಂದು ನನಗೆ ಗೊತ್ತಿಲ್ಲ. ಇದಕ್ಕಿಂತ ಮುಂಚೆ ಶ್ರೀ ಡಿ.ಬಿ.ಕಲ್ಮಣಕರ್‌ರವರು ಎರಡು ಬಾರಿ ಸಭಾಪತಿಗಳಾಗಿ ಆಯ್ಕೆಯಾಗಿದ್ದರು. ಅವರಾದ ನಂತರ ತಾವು ಎರಡನೆಯವರು. ಈ ಸದನದಲ್ಲಿ ಎರಡನೇ ಬಾರಿ ಪುನರಾಯ್ಕೆಯಾದವರು ಕೇವಲ ಇಬ್ಬರು ಮಾತ್ರ. ಹಿಂದಿನಿಂದಲೂ ನಮ್ಮ ಸದನವನ್ನು ಬಹಳ ಉತ್ತಮ ಪದ್ಧತಿಯಿಂದ ನಡೆಸಿಕೊಂಡು ಬಂದಂಥ ಸಂಪ್ರಾದಯವಿದೆ. ಆದರೆ, ಇವೊತ್ತಿನ ಕಾಲಮಾನದಲ್ಲಿ ನಮ್ಮ ಸದನವೂ ಸಹ ಬೇರೆ ಸದನದ ಹಾಗೆ ಆಗುತ್ತಿದೆ ಎನ್ನುವ ನೋವು ನಮಗಿದೆ. ಎಷ್ಟೋ ಸಲ ನಾನು ಮಾತನಾಡುವುದಕ್ಕೆ

ಹೋಗುವುದಿಲ್ಲ. ಇಲ್ಲಿ ಎಷ್ಟೋ ಬಾರಿ ರಾಜಕೀಯ ಮತ್ತು ರಾಜಕೀಯೇತರ ಚರ್ಚೆಗಳು ನಡೆಯುತ್ತಿರುತ್ತವೆ. ನೀವು ನಮ್ಮನ್ನು ಟೀಕೆ ಮಾಡುವುದು, ನಾವು ನಿಮ್ಮನ್ನು ಟೀಕೆ ಮಾಡುವುದು ನಡೆಯುತ್ತಿರುತ್ತದೆ. ಇವೆಲ್ಲಾ ಹಿಂದೆ ನಡೆಯುತ್ತಿರಲಿಲ್ಲ. ಇತ್ತೀಚೆಗೆ ನಮ್ಮ ಸದನ ಕೂಡ ಆ ಕಡೆಗೆ ಹೋಗುತ್ತಿದೆ. ಜನ ನಮ್ಮನ್ನು ನೋಡುತ್ತಿರುತ್ತಾರೆ. ಇದು ಹಿರಿಯರ ಮನೆ. ಇಡೀ ಭಾರತ ದೇಶದಲ್ಲಿ ಮಾದರಿಯಾದಂಥ 'ವಿಧಾನ ಪರಿಷತ್ತು' ಅಂದರೆ 'ಕರ್ನಾಟಕ ವಿಧಾನ ಪರಿಷತ್ತು' ಎಂದು ನಾವು ಹೋದ ಕಡೆಯಲ್ಲೆಲ್ಲಾ ಕೇಳಿದ್ದೇವೆ. ಆ ಹಿನ್ನಲೆಯಲ್ಲಿ ನಾನು ಎಲ್ಲರಿಗೂ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ದೇಶದಲ್ಲಿ ಮಾದರಿಯಾದಂಥ ಸದನವನ್ನಾಗಿ ಮಾಡುವಂತಹ ಪ್ರಯತ್ನ ತಮ್ಮ ಮೂಲಕ ಇನ್ನು ಮೇಲಾದರು ನಡೆಯಲಿ ಎನ್ನುವುದು ನಮ್ಮ ಅಭಿಲಾಷೆಯಾಗಿದೆ. ನಾವು ಎಷ್ಟೋ ಸಲ ವಿರೋಧ ಪಕ್ಷದಲ್ಲಿದ್ದು ಮಾತನಾಡುತ್ತೇವೆ, ಅದರ ಬಗ್ಗೆ ನಮ್ಮ ಮನಸ್ಸಿನಲ್ಲಿ ನೋವು ಇರುತ್ತದೆ. ಸದನದ ಬಾವಿಗೆ ಹೋಗಬಾರದೆನ್ನುವ ಭಾವನೆ ನಮ್ಮಲ್ಲಿ ಇರುತ್ತದೆ. ತಾವು ನಮ್ಮೆಲ್ಲರನ್ನು ಕರೆದು ಹಿಂದೆ ಯಾವ ರೀತಿಯಲ್ಲಿ ಸದನ ನಡೆಯುತ್ತಿತ್ತು, ಈಗ ಹೇಗೆ ಸದನ ನಡೆಯುತ್ತಿದೆ ಎನ್ನುವುದರ ಬಗ್ಗೆ ತಾವು ಮಾರ್ಗದರ್ಶನ ಮಾಡಬೇಕೆಂದು ಈ ಸಂದರ್ಭದಲ್ಲಿ ತಮ್ಮನ್ನು ಕೋರುತ್ತೇನೆ. ಇನ್ನು ಹೊಸದಾಗಿ ಬಂದಂಥ ಸದಸ್ಯರು ಹಿಂದಿನ ಸದನಗಳಲ್ಲಿ ಅನೇಕ ಹಿರಿಯ ಸದಸ್ಯರು ಮಾತನಾಡಿರುವಂಥ ನಡವಳಿಕೆಗಳನ್ನು ಓದಬೇಕೆಂದು ನಮ್ಮ ಎಲ್ಲಾ ಹೊಸ ಸ್ನೇಹಿತರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಸದನದಲ್ಲಿ ಹೊಸತನವನ್ನು ತರುವ ಹಿನ್ನೆಲೆಯಲ್ಲಿ ತಮಗೆ ನಮ್ಮ ಸಹಕಾರ ಮತ್ತು ನಮ್ಮ ಪಕ್ಷದ ಸಹಕಾರ ಇದ್ದೇ ಇರುತ್ತದೆ. ಇಡೀ ಸದನ ತಮ್ಮ ಪರವಾಗಿ ಇರುತ್ತದೆ ಎನ್ನುವ ಮಾತನ್ನು ಹೇಳಿ, ಅವಿರೋಧವಾಗಿ ತಮ್ಮನ್ನು ಆಯ್ಕೆ ಮಾಡಿರುವಂಥ ಎಲ್ಲರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಅನೇಕ ಮಾನ್ಯ ಸದಸ್ಯರುಗಳು ಹೊಸದಾಗಿ ಆರಿಸಿ ಬಂದಿದ್ದಾರೆ. ಅವರಿಗೆ ನನ್ನ ಕಡೆಯಿಂದ ಶುಭವನ್ನು ಕೋರುತ್ತೇನೆ. ಅವರು ಸಹಿತ ಈ ಸದನದ ಹಿಂದಿನ ನಡವಳಿಕೆಗಳನ್ನು ನೋಡಿ, ಕಲಿತು

ಉತ್ತಮವಾದಂಥ ಕೆಲಸಗಳನ್ನು ಮಾಡಲಿ ಎನ್ನುವಂಥ ಮಾತನ್ನು ಹೇಳಬಯಸುತ್ತೇನೆ. ಇನ್ನು ಮಾನ್ಯ ಪುಟ್ಟಸ್ವಾಮಿಯವರು 24 ವರ್ಷದ ನಂತರ ವಾಪಸ್ಸು ಬಂದಿದ್ದಾರೆ. 24 ವರ್ಷದ ಹಿಂದೆ ನಾವು ಅವರು ಈ ಸದನದಲ್ಲಿದ್ದೆವು. ನನಗನ್ನಿಸಿದ ಮಟ್ಟಿಗೆ 24 ವರ್ಷದ ನಂತರ ವಾಪಸ್ಸು ಬಂದವರು ನೀವು ಒಬ್ಬರೇ ಇರಬಹುದು. ಒಂದೊಂದು ಟರ್ಮ್ ಹೆಚ್ಚು ಕಡಿಮೆ ಇರುತ್ತದೆ. ಆದರೆ 24 ವರ್ಷದ ಗ್ಯಾಪ್ ಬಹಳ ಕಡಿಮೆ ಇರುತ್ತದೆ. ಅವರು ಅಂದು ಬಹಳ ಉತ್ತಮವಾದಂಥ ರೀತಿಯಲ್ಲಿ ಮಾತನಾಡುತ್ತಿದ್ದರು. ಉತ್ತಮವಾದಂಥ ಕೆಲಸಗಳನ್ನು ಮಾಡುತ್ತಿದ್ದರು. ನಾವು ಅವರು ಒಂದೇ ಸಮಿತಿಯಲ್ಲಿ ಕೆಲಸ ಮಾಡಿದ್ದೇವೆ. ಈ ಎಲ್ಲಾ ಹಿನ್ನೆಲೆಯಲ್ಲಿ ಈ ಸದನ ಮಾದರಿಯಾದಂಥ ಸದನ ಆಗಲಿ ಎಂದು ಹೇಳಿ ತಮಗೆ ಶುಭವನ್ನು ಕೋರಿ ನಾನು ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

**ಶ್ರೀಮತಿ ಮೋಟಮ್ಮ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಿರೋಧವಾಗಿ ಆಯ್ಕೆಯಾಗಿರುವ ತಮಗೆ ನನ್ನ ಹಾರ್ದಿಕ ಅಭಿನಂದನೆಗಳು. ಹಾಗೆಯೇ ಹೊಸದಾಗಿ ಈ ಮನೆಗೆ ಆಯ್ಕೆಯಾಗಿ ಬಂದಿರುವ ಇತರ ಸದಸ್ಯ ಸ್ನೇಹಿತರಿಗೂ ಕೂಡ ವಿಶೇಷವಾಗಿ ನಾನು ಹಾರ್ದಿಕ ಅಭಿನಂದನೆಯನ್ನು ಸಲ್ಲಿಸುವುದಕ್ಕೆ ಇಷ್ಟಪಡುತ್ತೇನೆ. ತಾವು ಬಹಳ ಹಿರಿಯರು ಹಾಗೂ ಬಹಳ ಅನುಭವಿಗಳಾಗಿ ಕೆಲಸ ಮಾಡುತ್ತಿದ್ದೀರಿ. ಆದರೆ ತಾವು ಸದನವನ್ನು ಪ್ರವೇಶ ಮಾಡುವಾಗ ಯಾವಾಗಲು ಬಲಗಡೆಗೆ ಮುಖವನ್ನು ಮಾಡಿಕೊಂಡು ಬರುತ್ತೀರಿ. ನಾವು ಇಲ್ಲಿ ಏಕೋ ಮಾನ್ಯ ಸಭಾಪತಿಯವರು ಆ ಕಡೆಯೇ ಮುಖ ಮಾಡಿಕೊಂಡು, ಆ ಕಡೆಯೇ ದೃಷ್ಟಿ ಇಟ್ಟುಕೊಂಡು ಬರುತ್ತಾರೆಂದು ತಮಾಷೆ ಮಾಡುತ್ತಿರುತ್ತೇವೆ. ಈ ಕಡೆ ಕೂಡ ದೃಷ್ಟಿ ಇರಬೇಕೆಂದು ನಾವು ಇಲ್ಲಿ ಕುಳಿತುಕೊಂಡು ಮಾತನಾಡುತ್ತಿರುತ್ತೇವೆ. ಆದ್ದರಿಂದ ತಮ್ಮಲ್ಲಿ ಮನವಿ ಏನೆಂದರೆ ತಾವು ಇನ್ನು ಮುಂದೆ ಬರಬೇಕಾದರೆ ಒಂದು ದಿವಸ ಬಲಕ್ಕೆ ಮುಖ ಮಾಡಿಕೊಂಡು ಬನ್ನಿ, ಇನ್ನೊಂದು ದಿವಸ ಎಡಕ್ಕೆ ಮುಖ ಮಾಡಿಕೊಂಡು ಬನ್ನಿ. ಆಗ ನಮಗೂ ಕೂಡ ನಿಮ್ಮಲ್ಲಿ ಬಹಳ ವಿಶ್ವಾಸ ಬರುತ್ತದೆ. ಇನ್ನು ಮಾನ್ಯ ಸಭಾಪತಿಯವರು ಈ ಸದನವನ್ನು ಬಹಳ

ಸ್ಟ್ರಿಕ್ಟ್ ಆಗಿ ಕಂಡಕ್ಟ್ ಮಾಡುತ್ತಿದ್ದಾರೆನ್ನುವುದು ನಮಗೆಲ್ಲರಿಗೂ ಗೊತ್ತಾಗಿದೆ. ಅದನ್ನು ತಾವು ತಮ್ಮ ಕಾರ್ಯವೈಖರಿಯಲ್ಲೂ ತೋರಿಸಿದ್ದೀರಿ. ಆದರೆ ನನಗನಿಸುದೇನೆಂದರೆ ಪ್ರಶ್ನೆಗಳನ್ನು ಕೇಳುವುದು ಸದಸ್ಯರ ಹಕ್ಕು. ಅದರ ಜೊತೆಗೆ ಮಾನ್ಯ ಸದಸ್ಯರುಗಳಿಗೆ ಏನು ಅನ್ನಿಸುತ್ತಿರುತ್ತದೆಂದರೆ ಸರ್ಕಾರದಿಂದ ಸರಿಯಾದ ಉತ್ತರ ಬಂದು ಆ ಕೆಲಸ ಕಾರ್ಯಗತ ಆಗಬೇಕು. ಅದರ ಜೊತೆಗೆ ಈ ಸರ್ಕಾರಕ್ಕೆ ಮಣಿಸಬೇಕುನ್ನುವ ವಿಶ್ವಾಸ ಕೂಡ ಅವರಿಗೆ ಇರುತ್ತದೆ. ನೀವು ಸಮಯದ ನಿಬಂದನೆಯನ್ನು ನಿರ್ಬಂಧಿಸಿ ಸರ್ಕಾರ ಸರಿಯಾದ ಉತ್ತರ ಹೇಳದಿದ್ದರು, ಮಂತ್ರಿಗಳು ಸರಿಯಾಗಿ ಉತ್ತರ ಹೇಳದಿದ್ದರು, ಬೆಲ್ ಮಾಡಿ ಸಮಯ ಆಯಿತು, ಸಮಯ ಆಯಿತು, ಬೇರೆ ಪ್ರಶ್ನೆಗಳು ಬರುವುದಿಲ್ಲವೆಂದು ಹೇಳಿ ಕಾಲಕ್ಕೆ ಸರಿಯಾದ ಒತ್ತನ್ನು ಕೊಟ್ಟರೆ ನಿಜವಾಗಲೂ ಪ್ರಶ್ನೆಗಳನ್ನು ಕೇಳಿದವರಿಗೆ ಸರಿಯಾದ ಉತ್ತರ ದೊರೆಯುವುದಿಲ್ಲ. ಆ ಪ್ರಶ್ನೆಗೆ ಸರಿಯಾದ ನ್ಯಾಯ ಕೂಡ ಸಿಗುವುದಿಲ್ಲ. ನಾನು ಕಿರಿಯವಳಾಗಿ ಈ ರೀತಿ ಹೇಳುತ್ತಿದ್ದೇನೆಂದು ತಾವು ಅನ್ಯಥಾ ಭಾವಿಸಬೇಡಿ. ನೀವು ಸಮಯ ನಿರ್ಬಂಧ ಮಾಡುವುದರ ಜೊತೆಗೆ ಪ್ರಶ್ನೆ ಕೇಳಿದವರಿಗೆ ಸರ್ಕಾರದಿಂದ ಸರಿಯಾದ ಉತ್ತರವನ್ನು ಕೊಡಿಸಿದರೆ ಮುಖ್ಯಮಂತ್ರಿಗಳ ಜೊತೆಗೆ, ಉಳಿದ ಮಂತ್ರಿಗಳಲ್ಲಿ ಕೂಡ ಭಯ ಭಕ್ತಿ ಇರುತ್ತದೆ. ಇವೊತ್ತು ನಾವು ಸರಿಯಾಗಿ ಉತ್ತರ ಹೇಳದಿದ್ದರೆ ನನಗೆ ಅಷ್ಟು ಗೌರವ ಸಿಗುವುದಿಲ್ಲ, ನಾನು ಸರಿಯಾಗಿ ಉತ್ತರ ಹೇಳಲಿಲ್ಲವೆಂದು ನನಗೆ ಅಪಖ್ಯಾತಿ ಬರುತ್ತದೆನ್ನುವ ಭಯ ಭಕ್ತಿ ಅವರಿಗೆ ಬರುತ್ತದೆ. ಆದ್ದರಿಂದ ದಯಮಾಡಿ ತಾವು ಅದಕ್ಕೆ ಅವಕಾಶ ಮಾಡಿಕೊಡಬೇಕು. ಮೊನ್ನೆ 60 ವರ್ಷದ ವಿಧಾನ ಸಭೆಯ ಹುಟ್ಟು ಹಬ್ಬದ ಸಂದರ್ಭದಲ್ಲಿ ಮಾನ್ಯ ಡಿ.ಬಿ. ಚಂದ್ರೇಗೌಡರು ಸಭಾಧ್ಯಕ್ಷರಾಗಿ ಕೆಲಸ ಮಾಡಿದ ಕೆಲವೊಂದು ಅನುಭವವನ್ನು ಹೇಳಿದ್ದಾರೆ. ಸಭಾಪತಿಯವರಿಗೆ ಹಾಗೂ ಸಭಾಧ್ಯಕ್ಷರಿಗೆ ಯಾವುದೇ ಒತ್ತಡಗಳಿರಬಾರದು ಒಂದು ವೇಳೆ ಒತ್ತಡಗಳಿದ್ದರೂ ಕೂಡ ಒತ್ತಡಗಳಿಗೆ ಒಳಗಾಗಬಾರದೆಂದು ಹೇಳಿದ್ದಾರೆ. ಅಂದರೆ ತಾವು ಇಂಪಾರ್ಷಿಯಲ್ ಆಗಿ ನಡೆದುಕೊಳ್ಳಬೇಕೆಂದು ಹೇಳಿದ್ದಾರೆ. ನಾನು ಇದನ್ನು ತಮಗೆ ಹೇಳಬೇಕೆಂದು

ಹೇಳುತ್ತಿಲ್ಲ, ಇನ್ ಜನರಲ್ ಆಗಿ ಹೇಳುತ್ತಿದ್ದೇನೆ. ಹತ್ತು ದಿವಸಕ್ಕೆಂದು ಸದನವನ್ನು ಕರೆದು, ಐದು ದಿನಕ್ಕೆ ಮೊಟಕುಗೊಳಿಸಿ, ಇದ್ದಬದ್ದ ಬಿಲ್‌ಗಳನ್ನೆಲ್ಲಾ ಒಂದೇ ದಿವಸ ತಂದು ಪಾಸ್ ಮಾಡಿ ಎಂದು ಹೇಳುತ್ತಾ ಹೋದರೆ ಆ ಬಿಲ್‌ಗಳನ್ನು ಯಾರಿಗೂ ಓದಲಿಕ್ಕೆ ಆಗುವುದಿಲ್ಲ ಹಾಗೂ ಚರ್ಚೆ ಮಾಡುವುದಕ್ಕೂ ಅಗುವುದಿಲ್ಲ. ಆಗ ಸಭಾಪತಿಯವರು ಸರ್ಕಾರದ ಒತ್ತಡಕ್ಕೆ ಮಣಿದು ಈ ಬಿಲ್‌ಗಳನ್ನು ಒಮ್ಮೆಲೆ ಗಿಲೋಟಿನ್ ಮಾಡುತ್ತಿದ್ದಾರೆನ್ನುವ ಭಾವನೆ ಬರುತ್ತದೆ. ನೀವು ನಿಮ್ಮ ಪಕ್ಷದ ಹಾಗೂ ನಮ್ಮೆಲ್ಲರ ವಿಶ್ವಾಸಕ್ಕೆ ಪಾತ್ರರಾಗಿ ಆಯ್ಕೆಯಾಗಿದ್ದರೂ ಕೂಡ ಬಿಲ್‌ಗಳನ್ನು ಪಾಸ್ ಮಾಡುವಂಥ ಸಂದರ್ಭದಲ್ಲಿ, ಬಜೆಟ್ ಅನ್ನು ಪಾಸ್ ಮಾಡುವಂಥ ಸಂದರ್ಭದಲ್ಲಿ ಅದು ಸರಿಯಾದ ರೀತಿಯಲ್ಲಿ ಚರ್ಚೆಯಾಗಿ ಅದಕ್ಕೆ ನ್ಯಾಯ ಸಿಗುವ ರೀತಿಯಲ್ಲಿ ಅವಕಾಶವನ್ನು ಮಾಡಿಕೊಟ್ಟರೆ ತಮಗೆ ಇನ್ನಷ್ಟು ಗೌರವ ಹೆಚ್ಚಾಗುತ್ತದೆ ಎನ್ನುವುದು ನನ್ನ ಭಾವನೆ.

ಇನ್ನು ಎರಡನೆಯದಾಗಿ ನಾನು ವಿರೋಧ ಪಕ್ಷದ ನಾಯಕಿಯಾಗಿ ಕೆಲಸ ಮಾಡುತ್ತಿದ್ದಾಗ ತಾವು ನನಗೆ ಒಳ್ಳೆಯ ಸಹಕಾರವನ್ನು ನೀಡಿದ್ದೀರಿ. ಮತ್ತು ಒಳ್ಳೆಯ ಮಾತುಗಳನ್ನಾಡಿದಾಗ ಬೆನ್ನುತಟ್ಟುವಂಥ ಮಾತುಗಳನ್ನು ಹೇಳಿದ್ದೀರಿ. ಅದಕ್ಕಾಗಿ ನಾನು ವಿಶೇಷವಾಗಿ ತಮ್ಮನ್ನು ಅಭಿನಂದಿಸುತ್ತೇನೆ. ಮುಂದೆ ಈ ಭಾಗದಿಂದ ವಿರೋಧ ಪಕ್ಷದ ನಾಯಕರು ಆಗುವ ನಮ್ಮ ಸ್ನೇಹಿತರಾದ ಶ್ರೀ ಎಸ್.ಆರ್. ಪಾಟೀಲ್‌ರವರಿಗೂ ಕೂಡ ಅದೇ ರೀತಿಯ ಸಹಕಾರವನ್ನು ತಾವೆಲ್ಲರೂ ನೀಡುತ್ತೀರೆಂದು ನಾನು ನಂಬಿದ್ದೇನೆ. ಇನ್ನು ಕೊನೆಯದಾಗಿ ಮಾನ್ಯ ನಾಣಯ್ಯನವರು ಮಾತನಾಡಿದ್ದರಲ್ಲಿ ತಪ್ಪೇನಿಲ್ಲ. ತಾವು ಅವರು ಸ್ವಲ್ಪ ಜಾಸ್ತಿ ಮಾತನಾಡುತ್ತಾರೆಂದು ಮನಸ್ಸಿಗೆ ಬೇಜಾರು ಮಾಡಿಕೊಳ್ಳಬಾರದು. ರಾಜಕೀಯ ವಿಮರ್ಶೆ ಮಾಡಬೇಕಾದಂಥ ಸಂದರ್ಭ ಬಂದಾಗ ಯಾವುದು ಸರಿ, ಯಾವುದು ತಪ್ಪು ಎಂದು ಹೇಳುಬೇಕಾಗುತ್ತದೆ. ಅವರು ಏಕೆ ಹೇಳಿದರು ಎಂದು ಹೇಳಿದರೆ ಇವೊತ್ತು ರಾಷ್ಟ್ರಪತಿ ಆಯ್ಕೆಯಲ್ಲಿ ಯುನಾನಿಮಸ್ ಆಗಿ ಸೆಲೆಕ್ಷನ್ ಮಾಡಬಹುದಾಗಿತ್ತು, ಅದನ್ನು ನಾವು ಇಲ್ಲಿ ಮಾಡಿ ತೋರಿಸಿದ್ದೇವೆ. ಅದನ್ನು ಅಲ್ಲಿ ಏಕೆ ಮಾಡಲಿಲ್ಲ ಎನ್ನುವುದು ನಮ್ಮ

ಪ್ರಶ್ನೆಯಾಗಿದೆ. ಹಾಗೆ ಮಾಡಿದ್ದರೆ ರಾಜಕೀಯ ಇತಿಹಾಸದ ಪುಟಗಳಲ್ಲಿ ಅದು ಉಳಿಯುತ್ತಿತ್ತು. ನಾವು ವಿರೋಧ ಪಕ್ಷದವರೆಲ್ಲಾ ಸೇರಿ ಇನ್ನೊಂದು ಅಭ್ಯರ್ಥಿಯನ್ನು ಹಾಕಬಹುದಾಗಿತ್ತು. ಆದ್ದರಿಂದ ಅವರು ಮಾತನಾಡಿದ್ದರಲ್ಲಿ ಸತ್ಯ ಇದೆ. ಮುಂದೆ ರಾಜಕೀಯ ಪಕ್ಷಕ್ಕೆ ಇದೊಂದು ಪಾಠ ಆಗಬೇಕೆಂದು ಹೇಳುತ್ತಿದ್ದೇನಷ್ಟೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೆ, ರಾಷ್ಟ್ರಪತಿಗಳ ಸ್ಥಾನಕ್ಕೆ ಮಾನ್ಯ ಅಬ್ದುಲ್ ಕಲಾಂರವರ ಚುನಾವಣೆ ಆದಾಗ ಇವರಿಗೆ ಇಷ್ಟು ಒಳ್ಳೆಯ ಬುದ್ಧಿ ಬರಲಿಲ್ಲ. ಆಗ ಈ ಮಾತು ನೀವು ಹೇಳಲಿಲ್ಲ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ಹಿಂದೆ ಆಗಿದ್ದು ಮುಂದೆ ಆಗಬೇಕೆಂದೇನಿಲ್ಲ, ನಾವು ಒಳ್ಳೆಯದಕ್ಕೆ ಹಾದಿ ಮಾಡಿಕೊಡಬೇಕು.

**ಸಭಾಪತಿಯವರು:–** ಸಾಕು ಈಗ ಆ ಚರ್ಚೆ ಬೇಡ. ನಾನೊಂದು ಪ್ರಕಟಣೆ ಮಾಡಬೇಕಾಗಿದೆ. ತಾವು ದಯಮಾಡಿ ತಮ್ಮ ಭಾಷಣವನ್ನು ಮುಕ್ತಾಯ ಮಾಡಿ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ಆಯಿತು ಮುಗಿಸುತ್ತೇನೆ. ಮಾನ್ಯ ನಾಣಯ್ಯನವರು ಮಾತನಾಡುವಾಗ ಬಹಳಷ್ಟು ಕಿರಿಕಿರಿ ಮಾಡಿಕೊಂಡರು. ಅವರು ಒಳ್ಳೆಯ ಬುದ್ಧಿ ಹೇಳಿದ್ದಾರೆ. ಮುಂದಿನ ರಾಜಕಾರಣದಲ್ಲಿ ಇಂತಹ ಹಾದಿಗಳು ಬಹಳ ಸುಗಮವಾಗಿ ಇರಬೇಕೆನ್ನುವುದನ್ನು ಹೇಳಿದರೇ ಹೊರತು ಬೇರೆ ಯಾವುದೇ ದೃಷ್ಟಿಯಿಂದ ಹೇಳಲಿಲ್ಲ. ತಮಗೆ ಯಶಸ್ಸು ಸಿಗಲಿ, ತಾವು ನಮ್ಮೆಲ್ಲರನ್ನು ತಮ್ಮ ಮಕ್ಕಳ ಹಾಗೆ ನೋಡಿಕೊಂಡು ಎಲ್ಲರಿಗೂ ಸಮಾನವಾದ ಅವಕಾಶವನ್ನು ಕೊಡಿ ಈ ಕಡೆ ಕೂಡ ಮುಖ ತೋರಿಸಿಕೊಂಡು ನಡೆದುಕೊಂಡು ಬರಬೇಕೆಂದು ನನ್ನ ಮಾತನ್ನು ಮುಗಿಸುತ್ತೇನೆ.

## 4. ಪ್ರಕಟಣೆ

### ಶ್ರೀ ಎಸ್.ಆರ್. ಪಾಟೀಲ್ ಅವರಿಗೆ ವಿರೋಧ ಪಕ್ಷದ ನಾಯಕರಾಗಿ ಮಾನ್ಯತೆ ನೀಡುವ ಕುರಿತು

**ಸಭಾಪತಿಯವರು:–** ಇನ್ನು ಮಾನ್ಯ ಸದಸ್ಯರುಗಳು ಮಾತನಾಡ–ಬೇಕೆಂದಿದ್ದಾರೆ, ನಾನು ಖಂಡಿತ ಅವರುಗಳಿಗೆ ಅವಕಾಶವನ್ನು ಮಾಡಿಕೊಡುತ್ತೇನೆ. ಅದಕ್ಕಿಂತ ಮುಂಚೆ ನಾನೊಂದು ಪ್ರಕಟಣೆಯನ್ನು ಮಾಡಬೇಕಾಗಿದೆ. ದಯಮಾಡಿ ಪ್ರಕಟಣೆ ಕಡೆಗೆ ಗಮನ ಕೊಡಿ.

"ಕರ್ನಾಟಕ ಪ್ರದೇಶ ಸಮಿತಿಯ ಅಧ್ಯಕ್ಷರಾದ ಡಾ॥ ಜಿ. ಪರಮೇಶ್ವರ್, ಮತ್ತು ಕರ್ನಾಟಕ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾದ ಶ್ರೀ ಸಿದ್ಧರಾಮಯ್ಯನವರು ದಿನಾಂಕ:27–06–2012ರಂದು ನನಗೆ ಒಂದು ಪತ್ರವನ್ನು ನೀಡಿ **"ಕರ್ನಾಟಕ ವಿಧಾನ ಪರಿಷತ್ತಿನ ಕಾಂಗ್ರೆಸ್ ಪಕ್ಷದ ನಾಯಕನನ್ನಾಗಿ ಶ್ರೀ ಎಸ್.ಆರ್. ಪಾಟೀಲ್** ಅವರನ್ನು ಆಯ್ಕೆ ಮಾಡಲಾಗಿದ್ದು ಸದರಿಯವರಿಗೆ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾಗಿ ಮಾನ್ಯತೆ ನೀಡಬೇಕೆಂದು ಕೋರಿರುತ್ತಾರೆ. ಈ ಹಿನ್ನಲೆಯಲ್ಲಿ ಈ ಕೋರಿಕೆಯು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 2 (2)ರ ನಿಬಂಧನೆಗಳಿಗನುಸಾರವಾಗಿ ಕ್ರಮಬದ್ಧವಾಗಿರುವುದರಿಂದ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀಯುತ ಎಸ್.ಆರ್. ಪಾಟೀಲ್‌ರವರನ್ನು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರನ್ನಾಗಿ ಮಾನ್ಯತೆ ನೀಡಲಾಗಿರುತ್ತದೆಂದು ಸದನಕ್ಕೆ ತಿಳಿಸುತ್ತಿದ್ದೇನೆ.

ಮಾನ್ಯ ಎಸ್.ಆರ್. ಪಾಟೀಲ್‌ರು ದಯಮಾಡಿ ವಿರೋಧ ಪಕ್ಷದ ನಾಯಕರ ಸ್ಥಾನದಲ್ಲಿ ಬಂದು ಕುಳಿತುಕೊಳ್ಳಬೇಕೆಂದು ಕೋರುತ್ತೇನೆ. ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕರು ಮಾನ್ಯ ಎಸ್.ಆರ್.ಪಾಟೀಲ್‌ರನ್ನು ವಿರೋಧ ಪಕ್ಷದ ನಾಯಕರ ಸ್ಥಾನಕ್ಕೆ ಕರೆ ತಂದು ಕೂರಿಸಬೇಕೆಂದು ಕೋರುತ್ತೇನೆ.

**(ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಶ್ರೀ ಆರ್.ವಿ. ವೆಂಕಟೇಶ್‌ರವರು ಮಾನ್ಯ ಎಸ್.ಆರ್. ಪಾಟೀಲ್‌ರವರನ್ನು ವಿರೋಧ ಪಕ್ಷದ ನಾಯಕರ ಸ್ಥಾನಕ್ಕೆ ಕರೆದುಕೊಂಡು ಕೂರಿಸಿದರು)**

## 5. ಅಭಿನಂದನೆ

### ಶ್ರೀ ಎಸ್.ಆರ್. ಪಾಟೀಲ್ ಅವರು ವಿರೋಧ ಪಕ್ಷದ ನಾಯಕರಾಗಿ ಅಧಿಕಾರ ಸ್ವೀಕರಿಸಿರುವ ಕುರಿತು

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೆ, ಎರಡು ಕುರ್ಚಿಗಳಿಗೂ ಕೂಡ ಇಂದು ಒಳ್ಳೆಯವರನ್ನು ಆಯ್ಕೆ ಮಾಡಿರುವುದು ನನಗೆ ತುಂಬಾ ಸಂತೋಷ ತಂದಿದೆ. ನಾನು ಶ್ರೀಮತಿ ಮೋಟಮ್ಮನವರಿಗೆ ಇನ್ನು ಹೆಚ್ಚು ಅವಕಾಶ ಸಿಗಲಿ ಎಂದು ಈಗಾಗಲೇ ಹಾರೈಕೆ ಮಾಡಿದ್ದೇನೆ. ಸನ್ಮಾನ್ಯ ಎಸ್.ಆರ್.ಪಾಟೀಲ್‌ರು ಮಾನ್ಯ ವಿರೋಧ ಪಕ್ಷದ ನಾಯಕರಾಗಿ ಇವೊತ್ತು ಅಧಿಕಾರವನ್ನು ಸ್ವೀಕಾರ ಮಾಡಿದ್ದಾರೆ. ನಾನು ಕಳೆದ ಹತ್ತು ತಿಂಗಳುಗಳಿಂದ ಅವರನ್ನು ನೋಡುತ್ತಿದ್ದೇನೆ. ವಿಚಾರಗಳ ಬಗ್ಗೆ ಭಾರಿ ಸ್ಪಷ್ಟತೆಯನ್ನು, ಸೀಮಿತವಾದ ಮಾತುಗಳನ್ನು ಮಂಡನೆ ಮಾಡುವಂಥವರು. ಅವರು ಒಂದು ವಿಚಾರಕ್ಕೆ ಇನ್ನೊಂದು ವಿಚಾರವನ್ನು ಸೇರಿಸಿಕೊಂಡು ಮಾತನಾಡಿರುವಂಥದ್ದನ್ನು ನಾವು ಯಾವೊತ್ತು ನೋಡಿಲ್ಲ. ವಿರೋಧ ಪಕ್ಷದಲ್ಲಿರುವವರು ಸ್ವಲ್ಪ ಖಾರವಾಗಿ ಮಾತನಾಡಬೇಕಾಗಿದ್ದು ನಿಜ. ಅವರು ನಮ್ಮ ಬಗ್ಗೆ ಸ್ವಲ್ಪ ಖಾರವಾಗಿ ಮಾತನಾಡಬಹುದು, ಸ್ವಲ್ಪ ನಮ್ಮ ಬಗ್ಗೆ ಮಾಹಿತಿಯನ್ನು ಸಂಗ್ರಹ ಮಾಡಬಹುದೆಂದು ನಮಗೆ ಗೊತ್ತಿದೆ. ಅವರು ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ ಅನುಭವವನ್ನು ಹೊಂದಿದವರಿದ್ದಾರೆಂದು ನನಗೆ ಮಾನ್ಯ ಗೋವಿಂದ ಕಾರಜೋಳ್‌ರವರು ಹೇಳುತ್ತಿದ್ದರು. ಅವರು ಅವರ ಜಿಲ್ಲೆಯಲ್ಲಿ ಹಿಂದಿನ ದಿನಗಳಲ್ಲಿ ಜಿಲ್ಲಾಪಂಚಾಯತ್‌ನಲ್ಲೂ ಕೂಡ ವಿರೋಧ ಪಕ್ಷದ ನಾಯಕರಾಗಿದ್ದರು. ಆದಕಾರಣ ಒಂದು ಒಳ್ಳೆಯ ಆಯ್ಕೆ ಇವೊತ್ತು ಆಗಿದೆ. ಅವರು ವಿರೋಧ ಪಕ್ಷದ ನಾಯಕರಾಗಿ ರಾಜ್ಯದ ಎಲ್ಲಾ ಸಮಸ್ಯೆಗಳ ಬಗ್ಗೆ, ರಾಜ್ಯದ ಎಲ್ಲಾ

ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರುವಲ್ಲಿ ಅವರು ಸಂಪೂರ್ಣ ಯಶಸ್ವಿಯಾಗಲಿ ಎಂದು ಹೇಳುವಂಥ ಪ್ರಾರ್ಥನೆಯನ್ನು ಆ ದೇವರಲ್ಲಿ ಮಾಡುತ್ತೇನೆ. ಅವರಿಗೆ ಆ ದೇವರು ಆ ಶಕ್ತಿಯನ್ನು ಕೊಡಲಿ ಎಂದು ಹಾರೈಸುತ್ತೇನೆ. ಅವರು ಹಲವಾರು ವಿದ್ಯಾ ಸಂಸ್ಥೆಗಳನ್ನು ಕೂಡ ನಡೆಸುತ್ತಿದ್ದಾರೆಂದು ನನಗೆ ತಿಳಿದು ಬಂದಿದೆ. ಅವರು ಮೃದು ಭಾಷಿ ಮತ್ತು ಗೌರವ ಕೊಟ್ಟು, ಗೌರವ ತೆಗೆದುಕೊಳ್ಳುವಂಥದ್ದು. ಯಾವ ಮನುಷ್ಯನಲ್ಲಿ ಇನ್ನೊಬ್ಬರಿಗೆ ಗೌರವ ಕೊಟ್ಟು, ಗೌರವ ತೆಗೆದುಕೊಳ್ಳುವ ಭಾವನೆಗಳಿರುತ್ತವೆ ಅವರು ಸಮಾಜದಲ್ಲಿ ಎಲ್ಲದರಲ್ಲೂ ಯಶಸ್ವಿಯಾಗುತ್ತಾರೆ. ಆದ್ದರಿಂದ ಈ ಕ್ಷೇತ್ರದಲ್ಲಿ ತಾವು ಖಂಡಿತ ಯಶಸ್ವಿಯಾಗುತ್ತೀರೆನ್ನುವ ವಿಶ್ವಾಸ ನನಗಿದೆ. ಅವರಿಗೆ ಶುಭ ಹಾರೈಕೆಗಳು. ನಾವು ನೀವು ಒಟ್ಟಿಗೆ ಸೇರೋಣ. ಆಗ ಬಾಕಿಯವರಿಗೆ ಎಲ್ಲೂ ಅವಕಾಶ ಸಿಗುವುದಿಲ್ಲ. ಮಾನ್ಯ ಮೋಟಮ್ಮನವರಿಗೆ ಹಾಗೂ ಮಾನ್ಯ ಮತ್ತಿಕಟ್ಟಿಯವರಿಗೆ ನಾವೇನೋ ಒಳ ಒಪ್ಪಂದಗಳನ್ನು ಮಾಡಿಕೊಳ್ಳುತ್ತಿದ್ದೇವೆಂದು ಸ್ವಲ್ಪ ಸಂಶಯ ಇತ್ತು. ಅಂತಹದ್ದೇನಿಲ್ಲ. ಆದರೆ ನಾವು ಎಷ್ಟೇ ಒಳ ಒಪ್ಪಂದಗಳನ್ನು ಮಾಡಿದರೂ ಕೂಡ ನಾವು ಒಟ್ಟಾಗುವುದಕ್ಕೆ ನಾಣಯ್ಯನವರು ಖಂಡಿತ ಬಿಡುವುದಿಲ್ಲ. ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷ ಪ್ರಜಾತಂತ್ರ ವ್ಯವಸ್ಥೆಯ ಎರಡು ಗಾಲಿಗಳಂತೆ. ನಾವಿಬ್ಬರು ಸಮರ್ಥವಾಗಿ ಕೆಲಸ ಮಾಡಿದರೆ, ರಾಜ್ಯದ ಹಿತಾಸಕ್ತಿಯ ಕಡೆಗೆ ಹೆಚ್ಚು ಗಮನವನ್ನು ಕೊಡುವ ಭಾವನೆಗಳು ಬಂದಾಗ ಎಲ್ಲಾ ರಾಜಕೀಯ ದ್ವೇಷವನ್ನು ಮರೆತು ಯಾವಾಗ ಕೆಲಸ ಕಾರ್ಯಗಳನ್ನು ಮಾಡುತ್ತೇವೆಯೋ ಆಗ ಪ್ರಜಾತಂತ್ರ ಯಶಸ್ವಿಯಾಗುತ್ತದೆನ್ನುವಂಥದ್ದು ನಮ್ಮ ಸ್ಪಷ್ಟವಾದಂಥ ಕಲ್ಪನೆ. ಬಹುಶ: ನನಗೆ ಮಾನ್ಯ ಎಸ್.ಆರ್. ಪಾಟೀಲ್‌ರಿಗೆ ಹೊಂದಾಣಿಕೆಯಾಗಬಹುದೆನ್ನುವ ವಿಶ್ವಾಸ ನನಗಿದೆ. ಈ ಸದನದಲ್ಲಿ ನಿಮ್ಮ ಮಾರ್ಗದರ್ಶನದಲ್ಲಿ ನಾವಿಬ್ಬರು ಪ್ರಜಾತಂತ್ರ ವ್ಯವಸ್ಥೆಯ ಈ ರಥವನ್ನು ಅತ್ಯಂತ ಯಶಸ್ವಿಯಾಗಿ ಮುಂದೆ ತೆಗೆದುಕೊಂಡು ಹೋಗಲಿಕ್ಕೆ ಪ್ರಯತ್ನ ಪಡುತ್ತೇವೆ. ಅದಕ್ಕಾಗಿ ಅವರು ಪೂರ್ಣ ಸಹಕಾರ ನೀಡಬೇಕೆಂದು ಈ

ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಅವರಿಗೆ ಯಶಸ್ವಿಯಾಗಲಿ. ಶುಭವಾಗಲಿ, ದೇವರು ಒಳ್ಳೆಯದನ್ನು ಮಾಡಲಿ.

**ಶ್ರೀ ಆರ್.ವಿ. ವೆಂಕಟೇಶ್ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ತಾವು 2ನೇ ಬಾರಿಗೆ ಪೀಠವನ್ನಲಂಕರಿಸಿದ್ದೀರಿ. ತಮ್ಮ ಜೊತೆಗೆ 17 ನೂತನ ಸದಸ್ಯರು ಕೂಡ ಈ ಮನೆಯನ್ನು ಪ್ರವೇಶ ಮಾಡಿದ್ದಾರೆ. ಎಲ್ಲರಿಗೂ ನನ್ನ ಹಾಗೂ ನನ್ನ ಪಕ್ಷದ ಅಭಿನಂದನೆಗಳು. ಕಳೆದ ಅವಧಿಯಲ್ಲಿ ತಾವು ಕೆಲವೊಂದು ಸಂದರ್ಭಗಳಲ್ಲಿ ನಮ್ಮನ್ನು ನಿಷ್ಠುರವಾಗಿ ತಿಳಿದುಕೊಂಡಿದ್ದೀರಿ. ಆದರೆ, ವಿಷಯಾಧಾರಿತವಾಗಿ ನಾವು ನಡೆದುಕೊಂಡಿದ್ದೇವೆಯೇ ವಿನಃ ನಿಮ್ಮನ್ನು ನೋಯಿಸಬೇಕೆನ್ನುವ ಯಾವುದೇ ಒಂದು ಕಾರಣದಿಂದಲ್ಲ. ಈಗಾಗಲೇ ಮೋಟಮ್ಮನವರು ಅದನ್ನು ಹೇಳಿದ್ದಾರೆ. ಆದರೆ ನಮಗೆ ನಿಮ್ಮ ಮೊದಲನೆ ಅವಧಿಯ ಕಾರ್ಯವಿಧಾನ, ಅನೇಕ ನೂತನ ಮಾದರಿಯ ಕೆಲಸಗಳು ಮೆಚ್ಚುಗೆಯಾಗಿವೆ. ಈ ಬಾರಿಯೂ ಕೂಡ ತಮ್ಮ ಎಲ್ಲಾ ಕಾರ್ಯವಿಧಾನಗಳಿಗೆ ಮತ್ತು ಕಾರ್ಯಕ್ರಮಗಳಿಗೆ ನಾವೆಲ್ಲರೂ ಸಹಕರಿಯಾಗಿರುತ್ತೇವೆ. ಅದೇ ರೀತಿಯಲ್ಲಿ ಕಳೆದ ಅವಧಿಯಲ್ಲಿ ನಮ್ಮ ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದಂಥ ಶ್ರೀಮತಿ ಮೋಟಮ್ಮನವರ ಸ್ಥಾನ ಖಾಲಿಯಾಗುತ್ತಿರುವಂಥ ಸಂದರ್ಭದಲ್ಲಿ ನಮ್ಮ ಪಕ್ಷದ ವರಿಷ್ಠರು ಹಾಗೂ ನಮ್ಮ ಪಕ್ಷದ ಎಲ್ಲಾ ಸದಸ್ಯರು ಯಾವ ರೀತಿಯಲ್ಲಿ ತಮ್ಮ ಆಯ್ಕೆಯಾಯಿತು ಅದೇ ರೀತಿಯಲ್ಲಿ ನಮ್ಮ ವಿರೋಧ ಪಕ್ಷದ ನಾಯಕ ಸ್ಥಾನಕ್ಕೆ ಶ್ರೀ ಎಸ್.ಆರ್. ಪಾಟೀಲರನ್ನು ನೇಮಕ ಮಾಡಿದ್ದಾರೆ. ಈ ಸಂದರ್ಭದಲ್ಲಿ ಅವರನ್ನು, ಮತ್ತೊಮ್ಮೆ ತಮ್ಮನ್ನು ಹಾಗೂ ಹೊಸದಾಗಿ ಆಯ್ಕೆಯಾಗಿ ಬಂದಿರುವಂಥ ನೂತನ ಸದಸ್ಯರನ್ನು ಅಭಿನಂದಿಸಿ, ಸ್ವಾಗತವನ್ನು ಕೋರುತ್ತೇನೆ.

**ಶ್ರೀ ಗೋವಿಂದ ಎಂ.ಕಾರಜೋಳ್ (ಸಣ್ಣ ನೀರಾವರಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಸಚಿವರು):–** ಮಾನ್ಯ ಸಭಾಪತಿಯವರೆ, ಇಂದು ವಿರೋಧ ಪಕ್ಷದ ನಾಯಕರಾಗಿ ಆಯ್ಕೆಗೊಂಡಿರತಕ್ಕಂಥ ಶ್ರೀ ಎಸ್.ಆರ್. ಪಾಟೀಲರು ನನ್ನ ಸ್ವಂತ ಜಿಲ್ಲೆಯವರು. ಕಳೆದ 35 ವರ್ಷಗಳಿಂದ ಅವರನ್ನು

ವೈಯುಕ್ತಿಕವಾಗಿ ನಾನು ಬಲ್ಲವಂಥವನು. ಅವರು ಶ್ರೀಮಂತ ಕೃಷಿಕ ಕುಟುಂಬದಲ್ಲಿ ಹುಟ್ಟಿದವರು. ಅವರು ಬಡವರಲ್ಲ. ಅವರು ಶ್ರೀಮಂತರು ಎಂದು ಏಕೆ ಪ್ರಸ್ತಾಪ ಮಾಡಿದ್ದೇನೆಂದರೆ, ರೈತಾಪಿ ವರ್ಗದ ಮತ್ತು ಬಡವರ ಬಗ್ಗೆ ಅವರಿಗೆ ಸಾಕಷ್ಟು ಸಾಮಾಜಿಕ ಕಳಕಳಿ ಇದೆ. ರೈತರಿಗೆ ಅನುಕೂಲವಾಗುವಂಥ ದೃಷ್ಟಿಯಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಿ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಜನಗಳಿಗೆ ಉದ್ಯೋಗ ಕೊಡುವುದರ ಜೊತೆಯಲ್ಲಿ ರೈತರ ಏಳಿಗೆಗೆ ಕೂಡ ಶ್ರಮಿಸಿದ್ದಾರೆ. ಅಷ್ಟೆ ಅಲ್ಲದೆ ಬಡವರ ಮಕ್ಕಳಿಗೆ ವಿದ್ಯಾದಾನ ಮಾಡಬೇಕೆಂದು ಹೇಳಿ ತಮ್ಮ ಸ್ವಂತ ಖರ್ಚಿನಲ್ಲಿ, ತಮ್ಮ ಸ್ವಂತ ಜಮೀನಿನಲ್ಲಿ ಊರಿಗೆ ಹತ್ತಿರವೇ ಒಂದು ಶಿಕ್ಷಣ ಸಂಸ್ಥೆಯನ್ನು ಸ್ಥಾಪನೆ ಮಾಡಿದ್ದಾರೆ. 1987ರಲ್ಲಿ ಅಖಂಡ ಬಿಜಾಪುರ ಜಿಲ್ಲೆಯಲ್ಲಿ ಶ್ರೀ ರಾಮಕೃಷ್ಣ ಹೆಗಡೆಯವರ ಬಿರುಗಾಳಿಯಲ್ಲಿ ಎಲ್ಲರೂ ಸೋತು ಹೋಗಿದ್ದರು. ಆದರೆ ಶ್ರೀ ಎಸ್.ಆರ್. ಪಾಟೀಲರು ಗೆದ್ದು ವಿರೋಧ ಪಕ್ಷದ ನಾಯಕರಾಗಿ ಕೆಲಸವನ್ನು ಮಾಡಿದ್ದಾರೆ. ಅಂದರೆ ಅಂತಹ ಬಿರುಗಾಳಿಯಲ್ಲೂ ಕೂಡ ಗೆದ್ದುಬಂದಿರುವುದಕ್ಕೆ ಕಾರಣ ಬಡವರ ಬಗ್ಗೆ ಅವರು ಹೊಂದಿರುವಂತಹ ಕಳಕಳಿ ಮತ್ತು ಅನುಕಂಪ. ಇವೊತ್ತು ಅವರು ವಿರೋಧ ಪಕ್ಷದ ನಾಯಕರಾಗಿ ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ನೇಮಕಗೊಂಡಿರತಕ್ಕಂಥದ್ದು ಬಹಳ ಸಂತೋಷದ ಸಂಗತಿ. ಅಷ್ಟೆ ಅಲ್ಲ ಅವರು ರೈತರ ಸಮಸ್ಯೆ, ಬಡವರ ಸಮಸ್ಯೆ, ದೀನದಲಿತರ ಸಮಸ್ಯೆಗಳನ್ನು ಬಹಳ ಮುಕ್ತ ಮನಸ್ಸಿನಿಂದ ಚರ್ಚೆ ಮಾಡಿ ಸರ್ಕಾರದ ಗಮನ ಸೆಳೆಯತಕ್ಕಂಥ ಕೆಲಸ ಮಾಡುತ್ತಾರೆನ್ನುವ ವಿಶ್ವಾಸ ನನಗಿದೆ. ಅವರು ಈ ನಿಟ್ಟಿನಲ್ಲಿ ಸರ್ಕಾರದ ಜೊತೆಗೆ ಸಹಕರಿಸುವುದರ ಜೊತೆಗೆ ಜನರ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತಂದು, ಸರ್ಕಾರದ ನೀತಿ ನಿಯಮಗಳನ್ನು ಪರಿವರ್ತಿಸುವ ನಿಟ್ಟಿನಲ್ಲಿ ಒಳ್ಳೆಯ ಕೆಲಸವನ್ನು ಮಾಡುತ್ತಾರೆನ್ನುವ ವಿಶ್ವಾಸವನ್ನು ಹೊಂದಿದ್ದೇನೆ. ಅವರಿಗೆ ದೇವರು ಒಳ್ಳೆಯದನ್ನು ಮಾಡಲಿ ಎಂದು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ.

**ಸಭಾಪತಿಯವರು:–** ನೂತನವಾಗಿ ನಮ್ಮ ಸದನಕ್ಕೆ, ನೂತನ ಎಂದು ಹೇಳುವ ಪದ ಎಲ್ಲರಿಗೂ ಅನ್ವವಿಸುವುದಿಲ್ಲ. ಕೆಲವರಿಗೆ ಅನ್ವಯಿಸುತ್ತದೆ. ಸದನಕ್ಕೆ ನೂತನವಾಗಿ ಆಯ್ಕೆಯಾಗಿ ಬಂದಿರುವ ಸದಸ್ಯರ ಹೆಸರುಗಳನ್ನು ಓದುತ್ತೇನೆ. ಅವರು ಇದ್ದರೆ ದಯಮಾಡಿ ಎದ್ದುನಿಂತು ಕುಳಿತುಕೊಳ್ಳಬೇಕೆಂದು ಕೋರುತ್ತೇನೆ.

1. **ಶ್ರೀ ಬಿ.ಜೆ.ಪುಟ್ಟಸ್ವಾಮಿ**
2. **ಶ್ರೀ ಡಿ.ಎಸ್.ವೀರಯ್ಯ**
3. **ಶ್ರೀ ಸೋಮಣ್ಣ ಬೇವಿನಮರದ**
4. **ಶ್ರೀ ರಘುನಾಥರಾವ್ ಮಲ್ಕಾಪುರೆ**
5. **ಶ್ರೀ ಭಾನುಪ್ರಕಾಶ್**
6. **ಶ್ರೀಮತಿ ವಿಮಲಾಗೌಡ**
7. **ಕ್ಯಾಪ್ಟನ್ ಗಣೇಶ್ ಕಾರ್ಣಿಕ್**
8. **ಶ್ರೀ ವೈ.ಎ.ನಾರಾಯಣಸ್ವಾಮಿ**
9. **ಶ್ರೀ ಅಮರನಾಥ ಪಾಟೀಲ್**
10. **ಶ್ರೀ ರಾಮಚಂದ್ರಗೌಡ**
11. **ಶ್ರೀ ಎಂ.ಆರ್.ಸೀತಾರಾಂ**
12. **ಶ್ರೀಮತಿ ಮೋಟಮ್ಮ**
13. **ಶ್ರೀ ಕೆ.ಗೋವಿಂದರಾಜು,**
14. **ಶ್ರೀ ಸೈಯದ್ ಮುದೀರ್ ಆಘಾ**
15. **ಶ್ರೀ ಮರಿತಿಬ್ಬೇಗೌಡ**
16. **ಶ್ರೀ ಬಿ.ಎಸ್.ಸುರೇಶ್**

ಹೊಸದಾಗಿ ಬಂದಿರತಕ್ಕಂಥ ಎಲ್ಲಾ ಗೌರವಾನ್ವಿತ ಸದಸ್ಯರುಗಳಿಗೆ ಸದನದ ಪರವಾಗಿ ಸ್ವಾಗತವನ್ನು ಕೋರುತ್ತ ಸದನದಲ್ಲಿ ಈ ರೀತಿ ಹೊಸದಾಗಿ ಬಂದಿರತಕ್ಕಂಥವರ ಬಗ್ಗೆ ಒಂದು ಮಾತನ್ನು ಮಾತ್ರ ನಾನು ಜೋಡಿಸುವುದಕ್ಕೆ ಇಷ್ಟಪಡುತ್ತೇನೆ.

12:30 ಗಂಟೆ

ಈಗಾಗಲೇ ಮಾನ್ಯ ಮುಖ್ಯಮಂತರಿಯವರು ತಿಳಿಸಿರುವಂತೆ ಜುಲೈ 16ನೇ ತಾರೀಖಿನಿಂದ ಮುಂದಿನ ಅಧಿವೇಶನ ಆರಂಭವಾಗಲಿದೆ. ತಾವೆಲ್ಲರೂ ಒಪ್ಪುವುದಾದರೆ ಅಷ್ಟರೊಳಗೆ ಪರ್ಟಿಕ್ಯುಲರ್ ಆಗಿ ಹೊಸದಾಗಿ ಇದೇ ಮೊದಲ ಬಾರಿಗೆ ಆಯ್ಕೆಯಗಿ ಬಂದಿರುವವರಿಗೆ ಅರ್ಧ ದಿನದ ಕಾರ್ಯಾಗಾರವನ್ನು ಆಯೋಜಿಸಬೇಕೆಂದು ಉದ್ದೇಶ ನನ್ನ ಮನಸ್ಸಿನಲ್ಲಿದೆ. ಎಲ್ಲ ಗೌರವಾನ್ವಿತ ಸದಸ್ಯರು ಅದಕ್ಕೆ ಸಹಕರಿಸಬೇಕೆಂದು ಕೇಳಿಕೊಳ್ಳುತ್ತಾ ಈ ಸದನಕ್ಕೆ ಹೊಸದಾಗಿ ಆಯ್ಕೆಯಾಗಿ ಬಂದಿರುವಂತಹ ಎಲ್ಲ ಗೌರವಾನ್ವಿತ ಸದಸ್ಯರಿಗೂ ಮತ್ತೊಮ್ಮೆ ಸ್ವಾಗತವನ್ನು ಕೋರುತ್ತೇನೆ, ಇನ್ನು ನಮ್ಮ ಕಲಾಪವನ್ನು ಮುಂದುವರೆಸೋಣ. ಈಗ ಮಾನ್ಯ ಭಾನುಪ್ರಕಾಶ್‌ರವರು ಮಾತನಾಡಲಿದ್ದಾರೆ.

**ಶ್ರೀ ಭಾನುಪ್ರಕಾಶ್ (ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿ ಯವರೇ, ಈ ಸದನದ ಸಭಾಪತಿಗಳಾಗಿ ತಾವು ಅವಿರೋಧವಾಗಿ ಆಯ್ಕೆಯಾಗಿರುವುದಕ್ಕೆ ತಮ್ಮನ್ನು ಹಾರ್ದಿಕವಾಗಿ ಅಭಿನಂದಿಸುತ್ತೇನೆ. ಅಲ್ಲದೆ ತಮ್ಮನ್ನು ಅವಿರೋಧವಾಗಿ ಆಯ್ಕೆ ಮಾಡಿದಂತಹ ಸದನದ ಎಲ್ಲ ಸದಸ್ಯರಿಗೂ ಸಹ ನಾನು ಹಾರ್ದಿಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ತಮ್ಮನ್ನು ಸಭಾಪತಿಯವರನ್ನಾಗಿ ಚುನಾಯಿಸಬೇಕೆಂಬ ಪ್ರಸ್ತಾವವನ್ನು ಅನುಮೋದಿಸದಂತಹ ಡಾ|| ಎ.ಹೆಚ್. ಶಿವಯೋಗಿಸ್ವಾಮಿಯವರು ತಮ್ಮನ್ನು ಅಭಿನಂದಿಸಿ ಮಾತನಾಡುತ್ತಾ ತಾವು ನಮ್ಮೂರಿನವರು ಎಂದು ಕರೆದರು. ಶ್ರೀಯುತ ಗೋ.ಮಧುಸೂದನ್ ರವರು ಮಾತನಾಡುತ್ತಾ ಮಾನ್ಯ ಡಿ.ಹೆಚ್. ಶಂಕರಮೂರ್ತಿಯವರು ನಮ್ಮ ಮೈಸೂರಿನಲ್ಲಿ ನಾಮಪತ್ರವನ್ನು ಸಲ್ಲಿಸಿದರು ಎಂದು ಹೇಳಿಕೊಂಡರು. ಅವರನ್ನು ನಮ್ಮ ಶಿವಮೊಗ್ಗದವರು ಎಂದು ನಾನು ಕ್ಲೈಮ್ ಮಾಡುವುದಿಲ್ಲ. ಆದರೆ, ತುರ್ತು ಪರಿಸ್ಥಿತಿಯ ದಿನಗಳನ್ನು ಸಹ ಲೆಕ್ಕಿಸದೆ ಪ್ರಜಾಪ್ರಭುತ್ವ ಉಳಿಯಲಿ ಎಂದು ಹೇಳಿ ಶಿವಮೊಗ್ಗದ ಪ್ರತಿಷ್ಠಿತ ಸ್ಥಳವಾದಂತಹ ಗಾಂಧಿಬಜಾರ್‌ನಲ್ಲಿ ಒಬ್ಬರೇ ನಡೆದುಕೊಂಡು ಬಂದು ಅಲ್ಲಿರುವಂತಹ ಮಹಾತ್ಮಾ ಗಾಂಧೀಜಿ

ಯವರ ಪ್ರತಿಮೆಯ ಕೊರಳಿಗೆ ಹಾರವನ್ನು ಹಾಕಿದಂತಹ ಸನ್ಮಾನ್ಯ ಶಂಕರಮೂರ್ತಿಯವರನ್ನು ಶಿವಮೊಗ್ಗ ಬೆಳೆಸಿದೆ ಎನ್ನುವಂತಹ ಮಾತನ್ನು ಮಾತ್ರ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮೊದಲ ಬಾರಿಗೆ ಆಯ್ಕೆಯಾದ ನನಗೆ ಅವಕಾಶ ಮಾಡಿಕೊಟ್ಟಿದಕ್ಕೆ ನಾನು ಅವರಿಗೆ ಕ್ರತಜ್ಞತೆಯನ್ನು ಸಲ್ಲಿಸುತ್ತೇನೆ. ಮುಂದಿನ ಅಧಿವೇಶನಗಳಲ್ಲಿ ಈ ಸದನದಲ್ಲಿ ಹೊಸಬರಿಗೆ ಹೇಗೆ ಅವಕಾಶ ಸಿಗುತ್ತದೆ ಎಂಬುದಕ್ಕೆ ಸಾಕ್ಷಿಯಾಗಿ ಅವರು ಈ ಮೂಲಕ ರಾಜ್ಯದ ಜನತೆಗೆ ಒಂದು ಸಂದೇಶವನ್ನು ಕಳುಹಿಸಿದ್ದಾರೆ ಎಂದು ನಾನಾದರೂ ಭಾವಿಸುತ್ತೇನೆ. 1988ನೇ ಇಸವಿಯ ಅವರ ಮೊದಲನೆಯ ಚುನಾವಣೆಯಿಂದ ಹಿಡಿದು ಈ ಚುನಾವಣೆ ಯವರೆಗೆ ಅವರ ಚುನಾವಣೆಯ ಕೆಲಸವನ್ನು ಮಾಡುವುದಕ್ಕೆ ನನಗೆ ನನ್ನ ಪಕ್ಷ ಅವಕಾಶ ಕೊಟ್ಟಿದ್ದು, ಆ ಎಲ್ಲ ಸಂದರ್ಭಗಳಲ್ಲಿ ನನಗೆ ಅವರ ವ್ಯಕ್ತಿತ್ವದ ಪರಿಚಯವಾಗಿದೆ. ಅವರು ಶಿವಮೊಗ್ಗದಲ್ಲಿ ನಮ್ಮೆಲ್ಲರನ್ನೂ ಬೆಳೆಸಿರುವಂತಹ ರೀತಿ ಏನಿದೆ ಅದನ್ನು ನಾವು ಎಂದಿಗೂ ಮರೆಯುವಂತಿಲ್ಲ. ನಮ್ಮ ಶಿವಮೊಗ್ಗದ ಮಾನ್ಯ ಶಂಕರಮೂರ್ತಿ ಯವರನ್ನು ಇಡೀ ರಾಜ್ಯ, ಅದರಲ್ಲಿಯೂ ಪ್ರತಿಪಕ್ಷದ ಸದಸ್ಯರು ಇಷ್ಟೊಂದು ವಿಶೇಷವಾದಂತಹ ರೀತಿಯಲ್ಲಿ ಅಭಿನಂದಿಸಿ, ಅವರು ಸಭಾಪತಿಗಳಾಗಿ ಮಾಡಿದಂತಹ ಕೆಲಸಗಳನ್ನು ಗುರುತಿಸಿದೆ ಎಂದರೆ ಅದು ನಮ್ಮ ಶಿವಮೊಗ್ಗ ಜಿಲ್ಲೆಗೆ ಹೆಮ್ಮೆಯ ವಿಷಯ ಎಂದು ಭಾವಿಸಿ, ಅವರಿಗೆ ನಾನು ಸಹ ಈ ಸಂದರ್ಭದಲ್ಲಿ ಮತ್ತೊಮ್ಮೆ ಹಾರ್ದಿಕವಾದಂತಹ ಅಭಿನಂದನೆಗಳನ್ನು ಸಲ್ಲಿಸಬಯಸುತ್ತೇನೆ. ಇದೇ ಸಂದರ್ಭದಲ್ಲಿ ಪ್ರತಿಪಕ್ಷದ ನಾಯಕರ ಸ್ಥಾನವನ್ನಲಂಕರಿಸಿರುವಂತಹ ಸನ್ಮಾನ್ಯ ಎಸ್.ಆರ್. ಪಾಟೀಲ್‌ರವರಿಗೂ ಸಹ ನಾನು ಹಾರ್ದಿಕವಾದ ಅಭಿನಂದನೆಗಳನ್ನು ಸಲ್ಲಿಸಿ ಈ ಸಂದರ್ಭದಲ್ಲಿ ಮಾತನಾಡಲು ನನಗೆ ಅವಕಾಶ ನೀಡಿದಂತಹ ಸನ್ಮಾನ್ಯ ಸಭಾಪತಿಯವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಎಂ.ಆರ್. ಹುಲಿನಾಯ್ಕರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮೊಟ್ಟ ಮೊದಲನೆಯದಾಗಿ ಎಲ್ಲ ಪಕ್ಷಗಳ ಮಾನ್ಯ

ಸದಸ್ಯರ ಒಟ್ಟಾರೆ ಅಭಿಪ್ರಾಯದ ಮೇರೆಗೆ ಸಭಾಪತಿಗಳ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆಯಾಗಿರುವ ತಮ್ಮನ್ನು ನಾನು ಅಭಿನಂದನಾ ಪೂರ್ವಕವಾಗಿ ಸ್ವಾಗತಿಸುತ್ತೇನೆ. ಅದೇ ರೀತಿ ಈ ಸದನಕ್ಕೆ ಹೊಸದಾಗಿ ಆಗಮಿಸಿಸುವಂತಹ ಸದಸ್ಯರೆಲ್ಲರಿಗೂ ಅಭಿನಂದನೆಗಳನ್ನು ಸಹ ಸಲ್ಲಿಸುತ್ತೇನೆ. ಜೊತೆಗೆ ತಾವು ಸದನದಲ್ಲಿ ಪ್ರಕಟಿಸಿದಂತೆ ಶ್ರೀಯುತ ಎಸ್.ಆರ್.ಪಾಟೀಲ್‌ರವರು, ವಿರೋಧ ಪಕ್ಷದ ನಾಯಕರಾಗಿ ಇವೊತ್ತು ಅಧಿಕಾರ ಸ್ವೀಕರಿಸಿದ್ದಾರೆ. ಅವರಿಗೂ ಸಹ ನಾನು ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಸಲ್ಲಿಸಬಯಸುತ್ತೇನೆ.

ಕಳೆದ ಅವಧಿಯಲ್ಲಿ ನಾನು ಈ ಸದನದಲ್ಲಿನ ತಮ್ಮ ಕಾರ್ಯವೈಖರಿಯನ್ನು ಬಹಳಷ್ಟು ಗಮನಿಸಿದ್ದೇನೆ. ತಾವು ಹಿರಿಯ ಸದಸ್ಯರಂತೆಯೇ ಹೊಸ ಸದಸ್ಯರಿಗೂ ಸಹ ತಮ್ಮ ಅಭಿಪ್ರಾಯಗಳನ್ನು ಮಂಡಿಸುವುದಕ್ಕೆ ನಿಷ್ಪಕ್ಷಪಾತವಾಗಿ ಅವಕಾಶ ನೀಡುವ ಮೂಲಕ ಅವರಿಗೆ ನೀಡುತ್ತದ್ದಂತಹ ಉತ್ತೇಜನ ಏನಿದೆ ಅದು ನನಗೆ ಬಹಳಷ್ಟು ಮೆಚ್ಚಿಗೆಯಾಯಿತು. ಸದನದಲ್ಲಿ ಪ್ರಸ್ತಾಪವಾದಂತಹ ವಿಷಯಕ್ಕೆ ಕಡಿಮೆ ಸಮಯವಕಾಶವನ್ನು ನಿಗದಿಪಡಿಸಿದಂತಹ ಸಂದರ್ಭದಲ್ಲಿ ಕೂಡ ಈ ಸದನಕ್ಕೆ ಹೊಸದಾಗಿ ಆಯ್ಕೆಯಾಗಿ ಬಂದಂತಹ ನಮ್ಮಂತಹ ಹೊಸ ಸದಸ್ಯರಿಗೂ ಮಾತನಾಡಲು ಮುಕ್ತವಾದಂತಹ ಅವಕಾಶವನ್ನೇನು ನೀಡಲಾಗುತ್ತಿತ್ತು ಇದು ಬಹಳ ಸಂತೋಷದ ವಿಷಯವಾಗಿದೆ.

ಮಾನ್ಯ ಸಭಾಪತಿಯವರೇ, ತಾವು ಸರಳರು ಮತ್ತು ಸಜ್ಜನರು, ಕಳೆದ ಅವಧಿಯಲ್ಲಿ ಶಾಸಕರ ಪ್ರಶಿಕ್ಷಣ ಶಿಬಿರವನ್ನು ಆಯೋಜಿಸಿ ಎಲ್ಲ ಸದಸ್ಯರಿಗೂ iPod ಗಳನ್ನು ವಿತರಿಸುವಂತಹ ವ್ಯವಸ್ಥೆಯನ್ನು ಮಾಡಲಾಗಿತ್ತು. ತಾವು ಸಭಾಪತಿಗಳಾಗಿ ಅಧಿಕಾರವನ್ನು ವಹಿಸಿಕೊಂಡಂತಹ ಸಂದರ್ಭದಲ್ಲಿ ಈ ಸದನ ಹೇಗೆ ನಡೆಯಬೇಕು, ಈ ಸದನಕ್ಕಿರುವ ಗೌರವ ಮತ್ತು ಸದಸ್ಯರ ಅಭಿಮಾನವನ್ನು ಹೆಚ್ಚಿಸುವಂತಹ ಮಾತುಗಳನ್ನು ತಾವೇನು ಮನಬಿಚ್ಚಿ ಹೇಳಿದ್ದಿರಿ, ಆ ಮಾತುಗಳು ಇನ್ನೂ ಸಹ ನಮ್ಮ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿವೆ. ನಾವೆಲ್ಲರೂ ತಮಗೆ ತುಂಬು ಹೃದಯದಿಂದ ಸಹಕಾರ

ನೀಡುತ್ತೇವೆ. ಈ ಸದನ ಯಶಸ್ವಿಯಾಗಿ ನಡೆಯಲಿ, ಮುಂಬರುವ ದಿನಗಳಲ್ಲಿ ಈ ರಾಜ್ಯದ ಮತ್ತು ಈ ದೇಶದ ಅನೇಕ ಸಮಸ್ಯೆಗಳ ಬಗ್ಗೆ ನಾವು ಮುಕ್ತವಾಗಿ ಮಾತನಾಡುವುದಕ್ಕೆ ತಾವು ನಮಗೆಲ್ಲರಿಗೂ ಅವಕಾಶಗಳನ್ನು ಮಾಡಿಕೊಡುತ್ತೀರಿ ಎನ್ನುವ ವಿಶ್ವಾಸದೊಂದಿಗೆ ಮತ್ತೊಮ್ಮೆ ತಮಗೆ ಹೃತ್ಪೂರ್ವಕವಾದ ಅಭಿನಂದನೆಗಳನ್ನ ಸಲ್ಲಿಸಬಯಸುತ್ತೇನೆ.

ಮಾನ್ಯ ಎಸ್.ಆರ್. ಪಾಟೀಲ್‌ರವರು ಸಹ ಇಂದು ವಿರೋಧ ಪಕ್ಷದ ನಾಯಕರಾಗಿ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಅವರು ಉತ್ತಮ ಶಿಕ್ಷಣ ತಜ್ಞರಾಗಿದ್ದು ಅನೇಕ ಶಾಲಾ ಕಾಲೇಜುಗಳನ್ನು ನಡೆಸುತ್ತಿದ್ದಾರೆ. ಹಾಗೆಯೇ ಅವರು ಆರ್ಥಿಕ ತಜ್ಞರು ಎಂದು ಕೂಡ ಹೇಳಬಹುದು. ಅನೇಕ ಬ್ಯಾಂಕ್‌ಗಳನ್ನು ಸ್ಥಾಪನೆ ಮಾಡಿ ಆ ಮೂಲಕವಾಗಿ ಬಹಳಷ್ಟು ಜನರ ಸಾಮಾಜಿಕ ಬದುಕನ್ನು ಹಸನುಗೊಳಿಸುವ ದಿಕ್ಕಿನಲ್ಲಿ ಬಹಳ ಪ್ರಾಮಾಣಿಕತೆಯಿಂದ ದುಡಿಯುತ್ತಿದ್ದಾರೆ. ಅವರು ಈ ಸದನದಲ್ಲಿ ಅನೇಕ ಸಲ ನೀರಾವರಿ ವಿಚಾರವಾಗಿ ಬಹಳ ಕಳಕಳಿಯಿಂದ ಮಾತನಾಡಿದ್ದನ್ನು ನಾನು ಕಂಡಿದ್ದೇನೆ. ರೈತರ ಬಗ್ಗೆ ಅಪಾರವಾದ ಕಾಳಜಿ ಇರುವಂತಹ ಅವರು ವಕೀಲರಾಗಿದ್ದರೂ ಸಹ ನಾನೊಬ್ಬ ರೈತನ ಮಗ ಎನ್ನುವಂತಹ ಮಾತನ್ನು ಬಹಳ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ರೈತಪರ ಚಿಂತನೆಗಳ ಬಗ್ಗೆ ನಾನು ಸದಾ ಸ್ಪಂದಿಸುತ್ತೇನೆ ಎನ್ನುವಂತಹ ಮಾತುಗಳನ್ನು ಅವರು ಈ ಸದನದಲ್ಲಿ ಅನೇಕ ಸಂದರ್ಭಗಳಲ್ಲಿ ವ್ಯಕ್ತಪಡಿಸಿದ್ದಾರೆ. ಆರ್ಥಿಕ ತಜ್ಞರು, ಕೃಷಿಗೆ ಮಹತ್ವ ನೀಡುವಂತಹವರು ಮತ್ತು ಉದ್ಯಮಶೀಲರು ಕೂಡ ಆಗಿರುವ ಅವರು ಎಲ್ಲ ರಂಗಗಳಲ್ಲಿಯೂ ಸ್ಥಾನ ಪಡೆದುಕೊಂಡಂತಹವರು, ಸಾಮಾಜಿಕ ಕಳಕಳಿಯುಳ್ಳವರು ಇವೊತ್ತು ವಿರೋಧ ಪಕ್ಷದ ನಾಯಕರಾಗಿ ಏನು ಆಯ್ಕೆಯಾಗಿದ್ದಾರೆ ಅವರಿಗೂ ಸಹ ನಾನು ಅಭಿನಂದನೆಗಳನ್ನು ಸಲ್ಲಿಸಿ ಮುಂಬರುವ ದಿನಗಳಲ್ಲಿ ಈ ಸದನದ ಮುಖಾಂತರ ಹೆಚ್ಚು ಹೆಚ್ಚು ಜನೋಪಕಾರಿಯಾಗುವಂತಹ ಕೆಲಸಗಳಾಗಲಿ, ಸಾಮಾಜಿಕ ಭದ್ರತೆಯ ದೃಷ್ಟಿಯಿಂದ ಒಳ್ಳೆಯ ಅಭಿವೃದ್ಧಿ ಕಾಣುವಂತಾಗಲಿ, ಅಂತಹ ವಿಷಯಗಳನ್ನು

ಚರ್ಚಿಸುವುದಕ್ಕೆ ಈ ಸದನ ಉತ್ತಮವಾದಂತಹ ಒಂದು ವೇದಿಕೆಯಾಗಲೆಂದು ಹಾರೈಸಿ ಮತ್ತೊಮ್ಮೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಡಾ॥ ದೊಡ್ಡರಂಗೇಗೌಡ (ನಾಮ ನಿರ್ದೇಶನ ಹೊಂದಿದವರು):–** ಸನ್ಮಾನ್ಯ ಸಭಾಪತಿಯವರೇ, ಈ ಸಂದರ್ಭದಲ್ಲಿ ತಾವು ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿರುವುದಕ್ಕಾಗಿ ಮೊದಲಿಗೆ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ. ತಮ್ಮನ್ನು ಅವಿರೋಧವಾಗಿ ಆಯ್ಕೆ ಮಾಡಿರುವುದೇನಿದೆ ಇದು ಈ ಮೇಲ್ಮನೆಯ ಅಭಿರುಚಿಯನ್ನು ಸೂಚಿಸುತ್ತದೆ ಎಂದು ನಾನು ಭಾವಿಸಿದ್ದೇನೆ.

ಮೌಲ್ಯಗಳೆಲ್ಲಾ ಅಪಮೌಲ್ಯಗಳಾಗುತ್ತಿರುವಂತಹ ಈ ವಿಷಮ ಸಂದರ್ಭದಲ್ಲಿ ತಾವು ಸಭಾಪತಿಗಳಾಗಿ ಅವಿರೋಧವಾಗಿ ಆಯ್ಕೆ ಯಾಗಿರುವುದು ನಿಜಕ್ಕೂ ಕೂಡ ಒಂದು ಅಗ್ನಿ ಪರೀಕ್ಷೆ ಎಂದು ನಾನು ಭಾವಿಸುತ್ತೇನೆ. ಮೌಲ್ಯಗಳನ್ನು ಕಾಪಾಡಬೇಕಾದುದು ನಮ್ಮೆಲ್ಲರ ಕರ್ತವ್ಯ. ತಮ್ಮನ್ನು ಈ ಪೀಠದಲ್ಲಿ ನಾನು ಹಿಂದೆ ನೋಡಿದಂತಹ ಅನುಭವದ ಆಧಾರದ ಮೇಲೆ ಹೇಳುವದಾದರೆ, ತಾವು ಸೌಮ್ಯ ಮೂರ್ತಿಗಳು, ಅದಕ್ಕಿಂತ ಹೆಚ್ಚಾಗಿ ಸಮನ್ವಯ ಮೂರ್ತಿಗಳು. ನಿಷ್ಪಕ್ಷಪಾತವಾದಂತಹ ನಿಲುವುಗಳಿಗೆ ಮತ್ತೊಂದು ಹೆಸರು ಡಿ.ಹೆಚ್.ಶಂಕರಮೂರ್ತಿಯವರು ಎಂದರೆ ಅದು ಎಳ್ಳಷ್ಟು ಉತ್ಪ್ರೇಕ್ಷೆಯ ಮಾತಲ್ಲ ಎಂದು ನಾನು ಭಾವಿಸಿದ್ದೇನೆ. ಮಾಗಿದ ಮನಸ್ಸಿನವರಾದ ತಮ್ಮ ಸದ್ವರ್ತನೆಗಳನ್ನು ಗುರುತಿಸಿ, ಗಮನಿಸಿರುವ ನಾನು ನಿಮ್ಮಂತಹ ಉಜ್ವಲ ರಾಷ್ಟ್ರಪ್ರೇಮಿಗಳು ಈ ನಾಡಿಗೆ ಬಹಳ ಅಗತ್ಯ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಸಂವಿಧಾನದ ಒಳತಿರುಳನ್ನು ಬಲ್ಲವರು ತಾವು, ಶಿಸ್ತಿನ ಸಿಪಾಯಿಗಳು, ಎಲ್ಲಕ್ಕಿಂತ ಹೆಚ್ಚಾಗಿ ಸಹೃದಯಿಗಳು. ನಿಮ್ಮಂತಹವರು ಮೇಲ್ಮನೆಯ ಸಭಾಪತಿಗಳು ಎಂಬುದು ನಮ್ಮೆಲ್ಲರಿಗೂ ಆನಂದವನ್ನು ಕೊಡುವಂತಹ ಸಂಗತಿಯಾಗಿದೆ. ನಾನು ಎಷ್ಟೋ ವೇಳೆ ಈ ಸದನದಲ್ಲಿರುವಂತಹ ಎಲ್ಲ ಹಿರಿಯರ ಭಾವಚಿತ್ರಗಳನ್ನು ನೋಡುತ್ತಾ. ನನ್ನ ಬದುಕಿಗೆ role model ಹುಡುಕುವ ಆ ಅನ್ವೇಷಣೆಯ ಕಾರ್ಯದಲ್ಲಿ ನೀವು ಕೂಡ ನಮಗೆ role

model ಆಗಿ ಕಾಣುತ್ತೀರಿ ಎಂದರೆ ನಿಜವಾಗಿಯೂ ಕೂಡ ಅದು ಹೇಳಲೇಬೇಕಾದಂತಹ ಅಂಶ ಎಂದು ನಾನು ಭಾವಿಸಿದ್ದೇನೆ.

**ಶ್ರೀ ಗೋ. ಮಧುಸೂದನ್:–** ಸಭಾಪತಿಗಳು 'rule model', ಅವರು ಕೊಡುವುದೆಲ್ಲಾ ruling ಆಗಿರುವುದರಿಂದ ಅವರು 'rule model' ಎಂದು ಹೇಳಬಹುದು.

**ಡಾ॥ ದೊಡ್ಡರಂಗೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಮಧುಸೂದನ್‌ರವರ ಶ್ಲೇಷೆಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಏಕೆಂದರೆ ಎಷ್ಟೋ ಸಲ ನಾವು ಹೊರಗಡೆ ಎಲ್ಲಾ ಹುಡುಕುತ್ತಿರುತ್ತೇವೆ, ನಮ್ಮ ಬದಿಯಲ್ಲಿರುವವರನ್ನೇ ನಾವು ಸರಿಯಾದಂತಹ ರೀತಿಯಲ್ಲಿ ನೋಡುವ ಸಂದರ್ಭ ಇರುವುದಿಲ್ಲ. ನಾನು ತಮ್ಮಲ್ಲಿ ಅಪೇಕ್ಷಿಸುವುದೇನೆಂದರೆ, ಈ ಆರು ಕೋಟಿ ಕನ್ನಡಿಗರೆಲ್ಲರ ಒಟ್ಟಾರೆ ಅಭಿಪ್ರಾಯದಲ್ಲಿ ತಮ್ಮನ್ನು ಅಭಿನಂದಿಸುವ ಈ ಶುಭ ವೇಳೆಯಲ್ಲಿ ದನಿ ಇಲ್ಲದವರಿಗೆ ದನಿಯಾಗಬೇಕು. ಈ ಮೇಲ್ಮನೆ, ಕರ್ನಾಟಕದಲ್ಲಿನ ಎಲ್ಲ ಜನರ ಬದುಕು ಸುಂದರವಾಗಬೇಕೆಂಬುದು ನನ್ನ ಆಶಯ. ಮಾನ್ಯ ಮಧುಸೂದನ್‌ರವರು ಮತ್ತು ಇನ್ನಿತರ ನಮ್ಮ ಸಭಾಸದಸ್ಯರೆಲ್ಲಾ ಹೇಳಿದರು, ಮಾನ್ಯ ಶಂಕರಮೂರ್ತಿಯವರು ಶಿವಮೊಗ್ಗದವರು, ಅವರು ಮೈಸೂರಿನಿಂದ ತಮ್ಮ ನಾಮಪತ್ರವನ್ನು ಸಲ್ಲಿಸಿದರು, ಇತ್ಯಾದಿ ಅಂಶಗಳನ್ನೆಲ್ಲಾ ಅವರು ಹೇಳಿದರು. ಆದರೆ ನಾನು ಹೇಳುತ್ತೇನೆ, ತಾವು ಭಾರತೀಯರು, ನಮ್ಮ ಕರ್ನಾಟಕದವರು ಎನ್ನುವಂತಹ ಆ ಹೆಮ್ಮೆ ನಮಗಿರಬೇಕು. ತಾವು ಕನ್ನಡಿಗರು ಮತ್ತು ಆದರ್ಶ ಭಾರತೀಯರು ಕೂಡ ಆಗಿದ್ದೀರಿ.

ಒಂದೇ ಒಂದು ಮಾತು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಋಗ್ವೇದದ ಮೊದಲ ಶ್ಲೋಕ ಏನು ಹೇಳುತ್ತದೆ ಎಂದರೆ ಅದರ ಆಶಯ ಬಹಳ ಚನ್ನಾಗಿದೆ.

"ಒಳಿತು ಕಾಣಿಸಲಿ ಕಣ್ಗಳಿಗೆ

ಒಳಿತು ಕೇಳಿಸಲಿ ಕಿವಿಗಳಿಗೆ

ಒಳಿತನುಡಿಯಲಿ ನಮ್ಮ ನಾಲಿಗೆ

ಒಳಿತ ಚಿಂತಿಸಲಿ, ಹೊತ್ತಿಸಲಿ ನಮ್ಮ ಮನವೆಂಬ ದೀವಿಗೆ"

ಅದು ನಮಗೆಲ್ಲರಿಗೂ ಆದರ್ಶವಾಗಬೇಕೆಂದು ಹೇಳುತ್ತಾ, ಈ ಶುಭ ಸಂದರ್ಭದಲ್ಲಿ ಮೇಲ್ಮನೆ ಯವತ್ತು ಆದರ್ಶವಾದುದು, ಮೌಲ್ಯಗಳ ಪ್ರತಿಪಾದನೆಗೆ ಒಂದು ಸಮರ್ಥ ವೇದಿಕೆ ಆದುದು, ನಮ್ಮ ಪ್ರತಿಪಕ್ಷದ ನಾಯಕರಾಗಿ ಸನ್ಮಾನ್ಯ ಎಸ್.ಆರ್.ಪಾಟೀಲ್ ಅವರನ್ನು ಆಯ್ಕೆ ಮಾಡಿದ್ದು ನಿಜವಾಗಿಯೂ ಸಹ ಅಭಿನಂದನಾರ್ಹ ನಾವು ಮುಕ್ತ ಕಂಠದಿಂದ ತಮ್ಮ ಆಯ್ಕೆಯನ್ನು ಪ್ರಶಂಸೆ ಮಾಡುತ್ತೇವೆ. ತಾವು ಸಹೃದಯದವರು, ಕಾನೂನು ಬಲ್ಲವರು, ಶಿಕ್ಷಣ ಪ್ರೇಮಿಗಳು, ಸದ್ವರ್ಥನೆಯವರು ಬಡವರ ಪರವಾಗಿ ಮಾತನಾಡುತ್ತಾ ಸಹಾಯ ಮಾಡುವಂತಹ ಮನಸ್ಸುಳ್ಳವರಾಗಿರುವಂತಹ ಶ್ರೀ ಎಸ್.ಆರ್. ಪಾಟೀಲ್‌ರವರನ್ನೂ ಸಹ ಸ್ವಾಗತ ಮಾಡುತ್ತಾ ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ನಸೀರ್ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಇವತ್ತು ವಿಧಾನ ಪರಿಷತ್ತು ಒಂದು ಇತಿಹಾಸವನ್ನು ಸೃಷ್ಟಿ ಮಾಡಿದೆ ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ, ಒಂದು ಕಡೆ ಒಂದೇ ದಿವಸದಲ್ಲಿ ಅವಿರೋಧವಾಗಿ ತಮ್ಮ ಚುನಾವಣೆ ನಡೆದಿರುವಂಥದ್ದು, ಅದೇ ಸಂದಂರ್ಭದಲ್ಲಿ ಪ್ರತಿಪಕ್ಷದ ನಾಯಕರು ಸಹ ನೇಮಕವಾಗಿರುವುದು ನನಗೆ ತಿಳಿದ ಮಟ್ಟಿಗೆ ವಿಧಾನ ಪರಿಷತ್ತಿನ ಕಾರ್ಯಕಲಾಪಗಳಲ್ಲಿ ಒಂದು ಇತಿಹಾಸವೆಂದು ನಾನು ತಿಳಿದುಕೊಂಡಿದ್ದೇನೆ. ತಾವು ತಮ್ಮ ಮೊದಲನೇ ಇನ್ನಿಂಗ್ಸ್‌ನಲ್ಲಿ ಈ ಸದನದ ಕಾರ್ಯಕ್ರಮದಲ್ಲಿ ಸ್ವಲ್ಪ ಬದಲಾವಣೆಯನ್ನು ತಂದು ಅಂದರೆ ಪ್ರಶ್ನೋತ್ತರ ಒಂದು ಗಂಟೆಯೊಳಗೆ ಮುಗಿಯಬೇಕೆಂದು ಬಹಳ ಪ್ರಯತ್ನ ಮಾಡಿದಿರಿ. ಇನ್ನು ಮುಂದೆಯೂ ಸಹ ಇದನ್ನು ಜಾರಿಗೆ ತರಬೇಕು. ನಿಜವಾಗಿಯೂ ಸಾಕಷ್ಟು ವಿಷಯಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ತಾವು ಅವಕಾಶವನ್ನು ಮಾಡಿಕೊಟ್ಟದ್ದೀರಿ. ತಮ್ಮ ಒಂದು ನೇತೃತ್ವದಲ್ಲಿ ಈ ವಿಧಾನ ಪರಿಷತ್ತಿನಲ್ಲಿ ನಿಜವಾಗಿಯೂ status, stature, ಘನತೆ, ಗೌರವ ನಾವು

ಉಳಿಸಿಕೊಳ್ಳಬೇಕೆಂದು ನಮ್ಮ ಆಸೆ ಆಕಾಂಕ್ಷೆಗಳಾಗಿದೆ. ಅದನ್ನು ತಾವು ಈಡೇರಿಸುತ್ತೀರೆಂದು ನಂಬಿದ್ದೇವೆ. ಜೊತೆಯಲ್ಲಿ ತಾವು ಸೆಕೆಂಡ್ ಇನ್ನಿಂಗ್ಸ್ ಅನ್ನು ಸಹ ತಾವು ಚೆನ್ನಾಗಿ ನಡೆಸಿಕೊಡುತ್ತೀರೆಂದು ನಾವೆಲ್ಲರೂ ನಂಬಿದ್ದೇವೆ. ಈ ಒಂದು ಸಂದರ್ಭದಲ್ಲಿ ನಮ್ಮ ಸ್ನೇಹಿತರಾದಂತಹ ಶ್ರೀ ಎಸ್.ಆರ್. ಪಾಟೀಲ್‌ರವರಿಗೆ ನಾರ್ಥ್ ಕರ್ನಾಟಕದವರಿಗೆ ಒಂದು ರೆಪ್ರಸೆಂಟೇಶನ್ ಕೊಟ್ಟಂತೆ ಒಂದು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಕಾಂಗ್ರೆಸ್ ಅವಕಾಶ ಪಕ್ಷಕ್ಕೆ ಹಾಗೂ ತಮಗೆಲ್ಲರಿಗೂ ವಂದಿಸಿ ಇಷ್ಟು ಸಮಯ ಮಾತನಾಡಲು ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ಪದವೀಧರರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ತಮ್ಮನ್ನು ಅವಿರೋಧವಾಗಿ ಆಯ್ಕೆ ಮಾಡಿ ಆ ಸ್ಥಾನಕ್ಕೆ ಗೌರವವನ್ನು ತಂದು ಕೊಟ್ಟಿದ್ದಕ್ಕಾಗಿ ಮತ್ತು ತಾವು ಅವಿರೋಧವಾಗಿ ಆಯ್ಕೆಯಾಗಿರುವುದರಿಂದ ನಾನು ನನ್ನ ಆತ್ಮೀಯ ಶುಭ ಕಾಮನೆಗಳನ್ನು ತಮಗೆ ಅರ್ಪಣೆ ಮಾಡುತ್ತಿದ್ದೇನೆ. ತಮ್ಮ ವ್ಯಕ್ತಿತ್ವ ತಮ್ಮ ನಡವಳಿಕೆ ತಾವು ಹಿಂದೆ ಈ ಸದನವನ್ನು ನಡೆಸಿದಂತಹ ವೈಖರಿ, ಹಾಗೂ ತಮ್ಮ ಪ್ರಾಮಾಣಿಕತೆಯನ್ನು ಗಮನಿಸಿ ನಮ್ಮ ಪಕ್ಷ ಮತ್ತು ವರಿಷ್ಠರು ತಮ್ಮನ್ನು ಅವಿರೋಧವಾಗಿ ಈ ಸ್ಥಾನಕ್ಕೆ ಚುನಾಯಿಸಿದ್ದಕ್ಕೆ ಅವರಿಗೂ ಸಹ ಈ ಸಂದರ್ಭದಲ್ಲಿ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ. ಅದರ ಜೊತೆಗೆ ಪ್ರತಿಪಕ್ಷದವರೂ ಸಹ ತಮ್ಮ ಸೇವೆಯನ್ನು ಪ್ರಶಂಶಿಸಿ ತಮ್ಮ ಬೆಂಬಲವನ್ನು ಸೂಚಿಸಿದ್ದಾರೆ. ಅವರಿಗೂ ಸಹ ನಾನು ನನ್ನ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ತಾವು ಈ ಹಿಂದೆ ಸದನವನ್ನು ಯಾವ ರೀತಿ ನಡೆಸುತ್ತಿದ್ದಿರಿ ಎಂಬುದನ್ನು ದೂರದರ್ಶನದಲ್ಲಿ ನೋಡುತ್ತಿದ್ದೆ. ನಾನು 1982 ರಿಂದ 1988ರವರೆಗೆ ಈ ಸದನದಲ್ಲಿ ಸದಸ್ಯನಾಗಿದ್ದಾಗ ಬಹುಶ: ಸದನದ ಸದಸ್ಯರುಗಳು ಈ ಸದನವನ್ನು ಬಿಟ್ಟು ಒಂದು ನಿಮಿಷವು ಸಹ ಹೊರಗಡೆ ಹೋಗುತ್ತಿರಲಿಲ್ಲ. ಭಾಷಣಕಾರರು ಯಾವ ಅಂಶವನ್ನು ಮಾತನಾಡುತ್ತಾರೆ, ಅದಕ್ಕೆ ತಮ್ಮ ಉತ್ತರ ಯಾವ ರೀತಿ ಇರಬೇಕು ಎನ್ನುವಂಥದ್ದನ್ನು ಅವಲೋಕನ ಮಾಡುತ್ತಿದ್ದೆವು. ಆದರೆ ಆವತ್ತಿನ ಸಂದರ್ಭಕ್ಕೂ, ಇವತ್ತಿನ

ಸಂದರ್ಭಕ್ಕೂ ಆಡಳಿತದಲ್ಲಿ ಮತ್ತು ನಮ್ಮ ಸದನ ನಡೆಯುವಂತಹ ವಿಚಾರದಲ್ಲಿಯೂ ಸಹ ನನಗೆ ಅಷ್ಟೊಂದು ಸಮಾಧಾನ ತಂದಿರಲಿಲ್ಲ. ಆದರೆ ನಾನು ಈ ಸದನದ ಕಲಾಪಗಳನ್ನು ದೂರದರ್ಶನದಲ್ಲಿ ನೋಡುವಂತಹ ಅಭ್ಯಾಸವನ್ನು ಇಟ್ಟುಕೊಂಡಿದ್ದೆ. ದೂರದರ್ಶನದಲ್ಲಿ ನೋಡುತ್ತಿದ್ದಾಗ ಕ್ಲಿಷ್ಟ ಪರಿಸ್ಥಿತಿಯಲ್ಲಿ ತಾವು ತೆಗೆದುಕೊಳ್ಳುತ್ತಿದ್ದಂತಹ ನಿರ್ಧಾರ, ಹಾಗೂ ತಾವು ಸೂಚಿಸುತ್ತಿದ್ದಂತಹ ಪರಿಹಾರ ಹಾಗೂ ತೀರ್ಪನ್ನು ನೋಡಿ ನನಗೆ ಅಂದಿನಿಂದಲೂ ತಮ್ಮ ಬಗ್ಗೆ ಅತ್ಯಂತ ಗೌರವ ಇತ್ತು. ಕಾರಣ ಏನೆಂದರೆ, ನಮ್ಮ ದೊಡ್ಡರಂಗೇಗೌಡರು ಹೇಳಿದಂತೆ ಕಲಾಪದ ಮೌಲ್ಯಗಳು ಕುಸಿಯುತ್ತಿರುವಂತಹ ಸಂದರ್ಭದಲ್ಲಿ ತಮ್ಮಂಥವರು ಈ ಸ್ಥಾನದಲ್ಲಿ ಕುಳಿತು ಈ ಸದನದ ಗೌರವವನ್ನು ಎತ್ತಿ ಹಿಡಿಯುತ್ತಿರುವಂಥದ್ದಕ್ಕೆ ಬಹಳ ಸಂತೋಷ ಹಾಗೂ ತಮ್ಮ ಬಗ್ಗೆ ಇರುವಂತಹ ಗೌರವ ಇನ್ನೂ ಹೆಚ್ಚಾಗಿದೆ ಎಂದು ಹೇಳುವುದಕ್ಕೆ ಬಹಳ ಸಂತೋಷವಾಗುತ್ತಿದೆ. ಮಾನ್ಯ ಸಭಾಪತಿಯವರೇ, ಈ ಸಂದರ್ಭದಲ್ಲಿ ಒಂದು ಮನವಿಯನ್ನು ಮಾಡುವುದಕ್ಕೆ ಇಷ್ಟಪಡುತ್ತಿದ್ದೇನೆ. ಈ ಸದನ ಮತ್ತು ಕೆಳಮನೆಯ ಸದನ ಹಾಗೂ ಸದಸ್ಯರು ನಾವೆಲ್ಲರೂ ಸಹ ಜನತೆಯ ದು:ಖ ದುಮ್ಮಾನಗಳಿಗೆ ಜವಾಬ್ದಾರರಾಗಿದ್ದೇವೆ. ಆ ಜವಾಬ್ದಾರಿಗೆ ಈ ಸದನವೇ ಜವಾಬ್ದಾರಿಯಾಗಿದೆ. ಆದುದರಿಂದ ನನ್ನ ಸ್ನೇಹಿತರಾದಂತಹ ಶ್ರೀ ವೀರಣ್ಣ ಮತ್ತಿಕಟ್ಟಿಯವರು ಹೇಳಿದಂತೆ ಈ ಸದನದಲ್ಲಿ ಹೆಚ್ಚಿನ ದಿವಸ ಸದನ ನಡೆದಾಗ ಹಲವಾರು ವಿಚಾರಗಳು ಈ ಚರ್ಚೆಗೆ ಬಂದರೆ ಆಡಳಿತ ಪಕ್ಷಕ್ಕೆ ಒಂದು ದಾರಿಯನ್ನು ತೋರಿಸಿದಂತಾಗುತ್ತದೆ, ಮತ್ತು ಜನತೆಯ ಕಷ್ಟ–ಸುಖಗಳಿಗೆ ಪರಿಹಾರವನ್ನು ಸೂಚಿಸುವುದಕ್ಕೆ ಒಳ್ಳೆಯದಾಗುತ್ತದೆ ಎನ್ನುವುದು ನನ್ನ ಭಾವನೆ. ಇವತ್ತಿನ ದಿವಸ ನಾನು ನೋಡಿದ ರೀತಿಯಲ್ಲಿ ಅಧಿಕಾರಿಶಾಹಿಗಳು ಪ್ರಜಾತಂತ್ರ ವ್ಯವಸ್ಥೆಗೆ ಅಷ್ಟೊಂದು ಗೌರವವನ್ನು ಕೊಡುತ್ತಿಲ್ಲ. ಅವರಿಗೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಂಬಿಕೆ ಕಡಿಮೆ ಆಗುತ್ತಿದೆ, ಸಾರ್ವಜನಿಕರ ಹಿತದೃಷ್ಟಿ ಕಡಿಮೆ ಆಗುತ್ತಿದೆ, ಇದರ ಬಗ್ಗೆ ನಾವು ಚುರುಕು ಮುಟ್ಟಿಸಬೇಕೆಂದರೆ ಈ ಸದನದಲ್ಲಿ ಬರತಕ್ಕಂತಹ ಚರ್ಚೆಗಳು, ಈ ಸದನದಲ್ಲಿ ತೀರ್ಮಾನ ಆಗುವಂಥದಕ್ಕೆ ಅವರು ಬೆಲೆ ಕೊಡಬೇಕಾಗುತ್ತದೆ ಮತ್ತು,

ಅವರಿಗೆ ಎಚ್ಚರಿಕೆ ಗಂಟೆಯನ್ನು ಸಹ ಕೊಡಬೇಕಾಗುತ್ತದೆ. ಆ ಒಂದು ದೃಷ್ಟಿಯಲ್ಲಿ ತಾವು ಸಮರ್ಥರಿದ್ದೀರಿ ಈ ಸದನದ ಸದಸ್ಯರ, ಈ ಸದನದ ಹಕ್ಕುಬಾಧ್ಯತೆಗಳನ್ನು ಉಳಿಸುವಂತಹ ದಿಕ್ಕಿನಲ್ಲಿ ಈ ಸದನ ಹೆಚ್ಚಿನ ದಿವಸ ನಡೆಯುವಂಥದ್ದಕ್ಕೆ ಅವಕಾಶವನ್ನು ತಾವು ಮಾಡಿಕೊಡಬೇಕು. ಮೊದಲು ಬಹುಶ: ನಾನು 1982 ರಿಂದ 1988ರಲ್ಲಿ ಇದ್ದಾಗ ನನ್ನ ಹಳೇಯ ಸ್ನೇಹಿತರಾದ ಮಾನ್ಯ ನಾಣಯ್ಯನವರು ಮತ್ತು ಮಾನ್ಯ ಬಸವರಾಜ ಹೊರಟ್ಟಿಯವರು ಇದ್ದರು, ಆವತ್ತಿನ ದಿವಸ ಇದೇ ಸದನ ರಾತ್ರಿ 12 ಗಂಟೆ, ರಾತ್ರಿ 2 ಗಂಟೆಯವರೆಗೂ ನಡೆಯುತ್ತಿತ್ತು. ಸದನ ಬೆಳಿಗ್ಗೆ ಪ್ರಾರಂಭವಾದರೆ ರಾತ್ರಿ ಎರಡು ಗಂಟೆಗೆ ಮುಕ್ತಾಯವಾಗುತ್ತಿತ್ತು. ಆ ಸಮಯದಲ್ಲಿ ಭಾರತೀಯ ಜನತಾ ಪಕ್ಷದಿಂದ ಮಾನ್ಯ ಮಲ್ಲಿಕಾರ್ಜುನಯ್ಯನವರು, ಮಾನ್ಯ ಬಿ.ಬಿ.ಶಿವಪ್ಪನವರು, ಮಾನ್ಯ **ಕರಂಬಳ್ಳಿ ಸಂಜೀವ ಶೆಟ್ಟರು, ಮಾನ್ಯ ಗುಂಡಯ್ಯ ಶೆಟ್ಟರು** ಸಹ ನಮ್ಮ ಜೊತೆಯಲ್ಲಿದ್ದರು. ಆ ಸಮಯದಲ್ಲಿ ಸದನದಲ್ಲಿ ಚರ್ಚೆ ಪ್ರಾರಂಭವಾದರೆ ಯಾವ ಸದಸ್ಯರು ಸಹ ಎದ್ದು ಹೊರಗಡೆ ಹೋಗುತ್ತಿರಲಿಲ್ಲ. ಅಷ್ಟು ಗಂಭೀರವಾಗಿ ಚರ್ಚೆಯಲ್ಲಿ ಭಾಗವಹಿಸುತ್ತಿದ್ದರು. ಹಲವಾರು ವಿಚಾರಗಳು ಆ ಚರ್ಚೆಗೆ ಬಂದಾಗ ಸರ್ಕಾರಕ್ಕೆ ಎಚ್ಚರಿಕೆಯೂ ಆಗುತ್ತಿತ್ತು, ಅಧಿಕಾರಿಶಾಹಿಗಳಿಗೆ ಮೊಟ್ಟಮೊದಲನೆಯ ಪಾಠವನ್ನು ಈ ಸದನ ಕಲಿಸಿದೆ ಎನ್ನುವುದು ನನ್ನ ಅನುಭವಕ್ಕೆ ಬಂದಿದೆ. ಆದುದರಿಂದ ತಾವು ಹೆಚ್ಚಿನ ಅವಕಾಶವನ್ನು ಮಾಡಿಕೊಡುವಂತಹ ದಕ್ಷತೆ ಮತ್ತು ಚಾಣಕ್ಷತೆ ತಮ್ಮಲ್ಲಿದೆ. ಸದನವನ್ನು ಹೆಚ್ಚು ದಿವಸ ನಡೆಸಿದರೆ ಪ್ರಜಾತಂತ್ರ ವ್ಯವಸ್ಥೆಗೆ ಹೆಚ್ಚು ಗೌರವವನ್ನು ಕೊಟ್ಟಂತಾಗುತ್ತದೆ ಎಂದು ನಾನು ಸರ್ಕಾರದ ಪರವಾಗಿಯೂ ಹೇಳುತ್ತಿದ್ದೇನೆ ಮತ್ತು ಪ್ರತಿಪಕ್ಷದ ಪರವಾಗಿಯೂ ಸಹ ಹೇಳುತ್ತಿದ್ದೇನೆ. ನಮ್ಮ ಆದರ್ಶ ರಾಜಕಾರಿಣಿಗಳಾದಂತಹ ಸನ್ಮಾನ್ಯ ಶ್ರೀ ಎಂ.ವಿ.ರಾಜಶೇಖರನ್‌ರವರು ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದರು. ನಾನು ಅವರ ಭಾಷಣವನ್ನು, ಅವರ ನಡೆ–ನುಡಿಯನ್ನು ಬಹಳವಾಗಿ ಮೆಚ್ಚಿರುವಂಥವನು. ಸಂಸತ್ತಿನ ವ್ಯವಸ್ಥೆಯಲ್ಲಿ ನಾವು ಕೆಲಸ ಮಾಡುವಂತಹ ಕಾಲದಲ್ಲಿ ತಮ್ಮ ಸಹಕಾರ ಮತ್ತು ತಮ್ಮ ಸ್ಥಾನದ ಗೌರವ ಅತ್ಯವಶ್ಯಕವಾಗಿದೆ. ತಾವು ಎರಡೂ

ಕಡೆಯ ಸದಸ್ಯರ ಗೌರವವನ್ನು ಕಾಪಾಡುವುದರಲ್ಲಿ ಶಕ್ತಿವಂತರಾಗಿದ್ದೀರಿ. ಮುಂದಿನ ದಿನಗಳಲ್ಲಿ ಈ ಸದನವನ್ನು ಒಳ್ಳೆಯ ಸತ್ಸಂಪ್ರದಾಯದಲ್ಲಿ ನಡೆಸುವುದಕ್ಕೆ ದೇವರು ತಮಗೆ ಹೆಚ್ಚಿನ ಆರೋಗ್ಯ ಹಾಗೂ ಆಯಸ್ಸನ್ನು ಕೊಟ್ಟು ಇಡೀ ದೇಶದಲ್ಲಿ ಒಂದು ಒಳ್ಳೆಯ ಗೌರವವನ್ನು ತಂದು ಕೊಡಲಿ ಎಂದು ದೇವರಲ್ಲಿ ನಾನು ಪ್ರಾರ್ಥನೆಯನ್ನು ಮಾಡುತ್ತೇನೆ.

ಈ ಸಂದರ್ಭದಲ್ಲಿ ಮತ್ತೊಂದು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ, ಏನೆಂದರೆ ಸದನದಲ್ಲಿ ಪ್ರತಿಪಕ್ಷದ ನಾಯಕರ ಅವಶ್ಯಕತೆ ಬಹಳ ಮುಖ್ಯ. ಏಕೆಂದರೆ ಸದನವನ್ನು ನಡೆಸುವಂಥದ್ದು, ಸದನದಲ್ಲಿ ತಂದಂತಹ ಚರ್ಚೆಯಲ್ಲಿ ಭಾಗವಹಿಸುವಂಥದ್ದು, ಪ್ರತಿಪಕ್ಷದವರ ಮೇಲೆ ಹೆಚ್ಚಿನ ಅವಲಂಬಿತವಾಗಿರುತ್ತದೆ. ಈ ಸದನದಲ್ಲಿ ನಾವೇ ಮಾಡಿಕೊಂಡಂತಹ ಕಾನೂನಿನ ಅಡಿಯಲ್ಲಿ ದೀರ್ಘವಾಗಿ ಚರ್ಚೆಯನ್ನು ಮಾಡಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವಂಥದ್ದು ಪ್ರತಿಪಕ್ಷದ ಒಂದು ಕರ್ತವ್ಯ.

ಅದನ್ನು ಬಿಟ್ಟು ನಮ್ಮ ನಿಯಮಗಳ ಪ್ರಕಾರ ಯಾವ ವಿಚಾರಗಳು ಚರ್ಚೆಗೆ ಬರುವುದಿಲ್ಲವೋ ಅಂತಹ ವಿಚಾರಗಳನ್ನು ಪ್ರಸ್ತಾಪಿಸುವುದರ ಮೂಲಕ ಸದನದ ವೇಳೆಯನ್ನು ಮೊಟಕುಗೊಳಿಸುವುದು, ಸದನದಿಂದ ಹೊರಗಡೆ ಹೋಗಿ ಸದನವನ್ನು ನಡೆಸದ ಹಾಗೆ ಸದನದ ಕಲಾಪಗಳಿಗೆ ಅಡ್ಡ ಬರುವುದರಿಂದ ಒಂದು ಒಳ್ಳೆಯ ವಿರೋಧ ಪಕ್ಷ ಆಗುವುದಕ್ಕೆ ಸಾಧ್ಯವಿಲ್ಲ. ಆದರೆ ವಿರೋಧ ಪಕ್ಷದ ನಾಯಕರಾಗಿ ಆಯ್ಕೆ ಆಗಿರುವ ಶ್ರೀ ಎಸ್.ಆರ್.ಪಾಟೀಲ್‌ರವರು ಸಂಭಾವಿತರು, ವಿದ್ಯಾವಂತರು ಮತ್ತು ವಿಚಾರವನ್ನು ಅರ್ಥ ಮಾಡಿಕೊಳ್ಳುವಂತವರಾಗಿದ್ದಾರೆ. ಈ ಸಂದರ್ಭದಲ್ಲಿ ನಮ್ಮ ಸದನಕ್ಕೆ ಒಬ್ಬ ಒಳ್ಳೆಯ ಅಧ್ಯಕ್ಷರು ಮತ್ತು ವಿರೋಧ ಪಕ್ಷದ ನಾಯಕರು ಆಯ್ಕೆಯಾಗಿದ್ದಾರೆ. ತಮಗೂ ಸಹ ಈ ಸಂದರ್ಭದಲ್ಲಿ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಸದನದ ಗೌರವವನ್ನು ಎತ್ತಿ ಹಿಡಿಯುವುದರಲ್ಲಿ ಮತ್ತು ಉತ್ತಮ ಮಟ್ಟದಲ್ಲಿ ಈ ಸದನದಲ್ಲಿ ವಿಚಾರಗಳನ್ನು ಮಂಥನ ಮಾಡುವುದಕ್ಕೆ ತಮ್ಮಿಂದ ನಮಗೆ ಸಹಕಾರ ಇರುತ್ತದೆ ಎನ್ನುವ ಭಾವನೆಯಿಂದ ನಾನು ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

ಶ್ರೀ ವೀರಣ್ಣ ಮತ್ತಿಕಟ್ಟಿ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಗಳೇ, ಸದಸನದ ಇತಿಹಾಸದಲ್ಲಿಯೇ ಇದು ಅತ್ಯಂತ ಪ್ರಮುಖವಾದ ದಿನ. ಇವತ್ತು ಮಾನ್ಯ ಸಭಾಪತಿಯವರನ್ನು ನಾವೆಲ್ಲರೂ ಅವಿರೋಧವಾಗಿ ಆಯ್ಕೆಯನ್ನು ಮಾಡಿದ್ದೇವೆ. ಸಭಾಪತಿಗಳು ನಮ್ಮೆಲ್ಲರ ಗೌರವದ ಸಂಕೇತ. ಆದರೆ ಒಂದು ವಿಚಾರವನ್ನು ನಾನು ಈ ಸಂದರ್ಭದಲ್ಲಿ ಅತ್ಯಂತ ನೋವಿನಿಂದ ಹೇಳುತ್ತೇನೆ. ಇವತ್ತು ಈ ಸರ್ಕಾರದ ಪ್ರತಿನಿಧಿಗಳು ಯಾರು ಸದನದಲ್ಲಿ ಇರಬೇಕಾಗಿತ್ತೋ ಅವರುಗಳು ಇಲ್ಲ. ಮುಖ್ಯಮಂತ್ರಿಗಳು ಯಾವುದೋ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಹೋಗಿದ್ದಾರೆ, ಹೋಗಲಿ.

(ಗೊಂದಲ)

ಸಭಾಪತಿಯವರು:- ಮಧ್ಯೆ ಯಾರು ಮಾತನಾಡಬೇಡಿ, ಮಾನ್ಯ ಸದಸ್ಯರು ಅವರ ಅಭಿಪ್ರಾಯವನ್ನು ವ್ಯಕ್ತ ಮಾಡುತ್ತಿದ್ದಾರೆ. ಅದಕ್ಕೆ ಅವಕಾಶವನ್ನು ಕೊಡಿ.

ಶ್ರೀ ವೀರಣ್ಣ ಮತ್ತಿಕಟ್ಟಿ:- ನಾನಿಲ್ಲಿ ಯಾವುದೇ ಪಕ್ಷದ ಪರವಾಗಿ ಮಾತನಾಡುತ್ತಿಲ್ಲ. ಈ ಸದನದಲ್ಲಿ ಸಭಾಪತಿಯವರ ಚುನಾವಣೆಯ ದಿವಸ ಈ ಸದನಕ್ಕೆ ಇಷ್ಟು ಅಗೌರವವಾಗಿ ನಡೆದುಕೊಂಡರೆ ಮುಂದೆ ಹೇಗೆ? ಆದ್ದರಿಂದ ಈ ವಿಚಾರದಲ್ಲಿ ತಾವು ಸರ್ಕಾರಕ್ಕೆ ಆದೇಶವನ್ನು ಮಾಡಬೇಕು. ಯಾವುದಾದರೂ ಕೆಲಸ ಕಾರ್ಯಗಳು ಅಥವಾ ಸಮಾರಂಭಗಳಿದ್ದರೆ ಹೋಗಲಿ.

ಶ್ರೀ ಬಸವರಾಜ ಹೊರಟ್ಟಿ:- ಮಾನ್ಯ ಸಭಾಪತಿಗಳೇ, ಈಗ ಸದನದಲ್ಲಿ ಸರ್ಕಾರದ ಪರವಾಗಿ ಶೋಭಾರವರು ಒಬ್ಬರು ಮಾತ್ರ ಇದ್ದಾರೆ. ಅವರು ಸಹ ಆಸನದಿಂದ ಹೊರಕ್ಕೆ ಹೋದಲ್ಲಿ ಸರಿಯಾಗುತ್ತದೆ.

ಶ್ರೀ ವೀರಣ್ಣ ಮತ್ತಿಕಟ್ಟಿ:- ಇದು ನನ್ನ ಒಬ್ಬನ ಪ್ರಶ್ನೆಯಲ್ಲ. ಇದು ನಮ್ಮೆಲ್ಲರ ಹಾಗೂ ಈ ಸದನದ ಗೌರವದ ಪ್ರಶ್ನೆ. ಆಡಳಿತ ಮತ್ತು ವಿರೋಧ ಪಕ್ಷಗಳವರೆಲ್ಲರೂ ಸೇರಿ ಇದೊಂದು ಶ್ರೇಷ್ಠವಾದ ದಿನ, ಏಕೆಂದರೆ ನಮ್ಮ

ಸದನಕ್ಕೆ ಅತ್ಯಂತ ಶ್ರೇಷ್ಠ, ಸಜ್ಜನ ರಾಜಕಾರಣಿ ಒಬ್ಬರನ್ನು ಸಭಾಪತಿಗಳನ್ನಾಗಿ ಆಯ್ಕೆ ಮಾಡಿದ್ದೇವೆ. ಸಭಾಪತಿ ಎಂದರೆ ನಮ್ಮೆಲ್ಲರ ಗೌರವದ ಸಂಕೇತ ಆಗಿದ್ದಾರೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಿಗೆ ಮಧ್ಯಾಹ್ನ 12 ಗಂಟೆ 15 ನಿಮಿಷಕ್ಕೆ ಯಾವುದೋ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾದ ಹಿನ್ನಲೆಯಲ್ಲಿ ಹೋಗಬೇಕಾಗಿದೆ ಎನ್ನುವ ವಿಚಾರವನ್ನು ತಾವೇ ಹೇಳಿದಿರಿ. ಅವರು ಹೋಗಲಿ, ಆದರೆ ಉಳಿದವರು ಇಲ್ಲಿ ಇರಬೇಕಲ್ಲವೇ? ಶೋಭಾರವರನ್ನು ಬಿಟ್ಟರೆ ಬೇರೆ ಯಾವ ಸಚಿವರು ಕೂಡ ಈಗ ಸದನದಲ್ಲಿ ಇಲ್ಲ. ಯಾವ ಹಿರಿಯ ಸದಸ್ಯರು ಸಹ ಇಲ್ಲ. ಇದು ನಮ್ಮ ಸದನಕ್ಕೆ ಗೌರವ ತರತಕ್ಕ ವಿಚಾರವಲ್ಲ. ಇದೇ ವಿಚಾರವನ್ನು ನಾನು ಹಿಂದೆಯೂ ಕೂಡ ಹಲವಾರು ಸಲ ಪ್ರಸ್ತಾಪ ಮಾಡಿದ್ದೇನೆ. ತಾವುಗಳು ಸಹ ಇದರ ಬಗ್ಗೆ ನೇರವಾಗಿ ಸರ್ಕಾರಕ್ಕೆ ಆದೇಶವನ್ನು ಮಾಡಿದ್ದೀರಿ. ನಾನು ಕೂಡ ಸಭಾಪತಿಯಾಗಿದ್ದ ಕಾಲದಲ್ಲಿ ಈ ರೀತಿ ಆಗಬಾರದು ಎನ್ನುವ ಮಾತನ್ನು ಸಹ ಸದನದಲ್ಲಿ ಹೇಳಿದ್ದೇನೆ.

ಶ್ರೀಮತಿ ವಿಮಲಾಗೌಡ:- ಮಾನ್ಯ ಸಭಾಪತಿಗಳೇ, ಹೆಣ್ಣಮಕ್ಕಳಿಗೆ ಜವಾಬ್ದಾರಿಯನ್ನು ನೀಡಿದರೆ ಅವರು ಸಮರ್ಥವಾಗಿ ನಿರ್ವಹಣೆ ಮಾಡುತ್ತಾರೆ ಎನ್ನುವುದಕ್ಕೆ ಶೋಭಾರವರೆ ಸಾಕ್ಷಿ.

ಶ್ರೀ ವೀರಣ್ಣ ಮತ್ತಿಕಟ್ಟಿ:- ಮಾನ್ಯ ಸಭಾಪತಿಗಳೇ, ಇದು ಬಹಳ ಹಗುರವಾಗಿ ತಿಳಿದುಕೊಳ್ಳತಕ್ಕ ವಿಚಾರವಲ್ಲ. ಮಾನ್ಯ ಕಾರ್ಣಿಕ್‌ರವರು ಹೊಸ ವ್ಯವಸ್ಥೆಯನ್ನು ನಿರ್ಮಾಣ ಮಾಡುವ ಮೂಲಕ ಸಮೃದ್ಧ ಕರ್ನಾಟಕವನ್ನು ಕಟ್ಟಬೇಕೆನ್ನುವ ಮಾತುಗಳನ್ನು ಹೇಳುತ್ತಾರೆ. ಅಂತಹದ್ದರಲ್ಲಿ ನಿಮ್ಮ ಸರ್ಕಾರದ ಪ್ರತಿನಿಧಿಗಳು ಈ ರೀತಿ ನಡೆದುಕೊಂಡರೆ ಹೇಗೆ? ಮಾನ್ಯ ಸದಸ್ಯರು ಹೆಣ್ಣುಮಕ್ಕಳ ಬಗ್ಗೆ ಹೇಳಿದರು ಪೀಠಾಸೀನ ಸದಸ್ಯರ ಪಟ್ಟಿಯನ್ನು ಮಾಡಬೇಕಾದಾಗ ಒಬ್ಬ ಹೆಣ್ಣುಮಗಳು, ಹಿರಿಯರಾದ ಬಸವರಾಜ ಹೊರಟ್ಟಿಯವರನ್ನು, ಒಬ್ಬ ದಲಿತ ಮತ್ತು ಮೈನಾರಿಟಿ ವರ್ಗಕ್ಕೆ ಬರತಕ್ಕ ಸದಸ್ಯರನ್ನು ನೇಮಿಸಿದ್ದೆನು. ನಾನು ಇರುವವರೆವುಗೂ ವಿಮಲಾಗೌಡರನ್ನು ಸದಸ್ಯರನ್ನಾಗಿ ಮಾಡಿದ್ದೇನು. ಏಕೆಂದರೆ ನಾವು, ಈ ಸದನಕ್ಕೆ ಮಾತ್ರವಲ್ಲದೇ

ಈ ನಾಡಿನ ಜನತೆಗೆ ಆದರ್ಶವಾಗಿದ್ದು, ಈ ಸದನ ಎಲ್ಲಾ ಜನಾಂಗದ್ದು, ಎಲ್ಲರ ಗೌರವದ ಸಂಕೇತ ಎನ್ನುವುದನ್ನು ನಾವು ಹೇಳಬೇಕಾಗುತ್ತದೆ. ಈ ಸಂದೇಶಕ್ಕೆ ಇವತ್ತು ಮುಕ್ಕು ಬಂದಿದೆ. ಆದ್ದರಿಂದ ತಾವು ಈ ವಿಚಾರವನ್ನು ಸರ್ಕಾರದ ಗಮನಕ್ಕೆ ನೇರವಾಗಿ ತರಬೇಕೆಂದು ನಾನು ಕೋರುತ್ತೇನೆ.

ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):- ಮಾನ್ಯ ಸಭಾಪತಿಗಳೇ, ಮಾನ್ಯ ಹಿರಿಯ ನಾಯಕರಾದ ವೀರಣ್ಣ ಮತ್ತಿಕಟ್ಟಿ ಮಾತಿಗೆ ಧ್ವನಿಗೂಡಿಸುತ್ತಾ, ಇದು ಚರಿತ್ರಾರ್ಹ ಮತ್ತು ಐತಿಹಾಸಿಕ ದಿನ ಎನ್ನುವ ಮಾತನ್ನು ಎಲ್ಲರೂ ಹೇಳಿದರು. ಸಭಾಪತಿಗಳಾಗಿ ಆಯ್ಕೆ ಆದ ನಂತರ ತಾವುಗಳು ಸದಸನವನ್ನು ಉದ್ದೇಶಿಸಿ ಹೇಳತಕ್ಕ ಮಾತುಗಳನ್ನು ಎಲ್ಲರೂ ಕೇಳಬೇಕೆನ್ನುವ ಅಭಿಪ್ರಾಯ ಸರ್ಕಾರಕ್ಕೆ ಮತ್ತು ಸರ್ಕಾರದಲ್ಲಿರುವ ಹಿರಿಯ ನಾಯಕರುಗಳಿಗೆ ಸಚಿವರುಗಳಿಗೆ ಇರಬೇಕಾಗುತ್ತದೆ. ತಮ್ಮ ಆಯ್ಕೆ ಆದ ಮೇಲೆ ತಮ್ಮ ಭಾಷಣಗಳನ್ನು ಮಾಡಿ ಹೊರಗೆ ಹೋಗಿದ್ದಾರೆ. ತಾವೇ ಹಲವಾರು ಸಲ ತಮ್ಮ ಭಾಷಣಗಳು ಆದ ಮೇಲೆ ಹೊರಗೆ ಹೋಗಬಾರದು, ಸದನದಲ್ಲಿದ್ದುಕೊಂಡು ಬೇರೆ ಸದಸ್ಯರು ಭಾಷಣವನ್ನು ಕೇಳಬೇಕೆಂದು ಅನೇಕ ಸಲ ನಮಗೆ ನಿರ್ದೇಶನವನ್ನು ನೀಡಿದ್ದೀರಿ. ನಮ್ಮ ಭಾಷಣವನ್ನು ಕೇಳುವುದಿರಲಿ, ತಮ್ಮ ಮಾತುಗಳನ್ನು ಕೇಳುವ ವ್ಯವಧಾನ ಯಾರಿಗೂ ಇಲ್ಲ ಎಂದಲ್ಲಿ ಇದು ಬಹಳ ನೋವಿನ ಸಂಗತಿ. ಆದರೆ ಮೊದಲನೇ ದಿವಸವೇ ನಾನೇನು ಹೆಚ್ಚಿಗೆ ಮಾತನಾಡಲು ಹೋಗುವುದಿಲ್ಲ. ತಮ್ಮ ವಿಚಾರಗಳನ್ನು ಮಾತ್ರ ಇಲ್ಲಿ ಪ್ರತಿಪಾದನೆ ಮಾಡುತ್ತಿದ್ದೇನೆ. ಆದರೆ ತಮ್ಮ ಮಾತುಗಳನ್ನು ಕೇಳುವ ವ್ಯವಧಾನ ಯಾರಿಗೂ ಇಲ್ಲ ಎಂದಲ್ಲಿ ಇದು ಬಹಳ ನೋವಿನ ಸಂಗತಿ.

ಶ್ರೀ ಅಮರನಾಥ ಪಾಟೀಲ್ (ಪದವೀಧರ ಕ್ಷೇತ್ರ):- ಮಾನ್ಯ ಸಭಾಪತಿಗಳೇ, ಈ ಮನೆಯ ಎಲ್ಲಾ ಸದಸ್ಯರು ಮಾತನಾಡತಕ್ಕ ಸಂದರ್ಭದಲ್ಲಿ ಇದೊಂದು ಐತಿಹಾಸಿಕ ದಿವಸ, ಮೇಲ್ಮನೆಯ ಇತಿಹಾಸದಲ್ಲಿಯೇ ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದ ದಿನ ಎನ್ನುವ ಮಾತುಗಳನ್ನು ಎಲ್ಲರೂ ಹೇಳಿದ್ದಾರೆ. ಅದು ದಾಖಲೆಗೂ ಸಹ ಹೋಗಿದೆ. ತಾವೇನೂ ಇವತ್ತು ಶ್ರೇಷ್ಠ

ಸಂಸದೀಯ ಎನ್ನುವ ಹೆಗ್ಗಳಿಕೆಗೆ ಪಾತ್ರರಾಗಿದ್ದು ಇಂದು ನಮ್ಮ ಸದನಕ್ಕೆ ಸಭಾಪತಿಗಳಾಗಿ ಅವಿರೋಧವಾಗಿ ಆಯ್ಕೆ ಆಗಿದ್ದೀರಿ. ಹಾಗೆಯೇ ನಮ್ಮ ಸದನದ ವಿರೋಧ ಪಕ್ಷದ ನಾಯಕರಾಗಿ ಶ್ರೀ ಎಸ್.ಆರ್.ಪಾಟೀಲ್‌ರವರು ಆಯ್ಕೆಯಾಗಿರುವುದು ಒಂದೇ ದಿವಸವಾಗಿರುವುದು ಕಾಕತಾಳೀಯವಾಗಿದೆ. ಇವರ ಜೊತೆಯಲ್ಲಿ ಇಂದು ಒಬ್ಬ ಹೊಸ ಮತ್ತು ಕಿರಿಯ ಸದಸ್ಯನಾಗಿ ದಾಖಲೆಗೆ ಹೋಗತಕ್ಕ ದಿವಸದಂದು ತಮ್ಮಂತಹ ಹಿರಿಯರ ಸಮ್ಮುಖದಲ್ಲಿ ಪ್ರಮಾಣ ವಚನವನ್ನು ಸ್ವೀಕರಿಸಿರುವುದು ನನ್ನ ಸೌಭಾಗ್ಯ ಎಂದು ನಾನು ಭಾವಿಸುತ್ತೇನೆ. ಈ ಸಂದರ್ಭದಲ್ಲಿ ಹಿರಿಯ ರಾಜಕೀಯ ಮುತ್ಸದ್ಧಿ ಶ್ರೀ ಎಂ.ವಿ. ರಾಜಶೇಖರ್‌ರವರ ಈ ಸದನವನ್ನು ಉದ್ದೇಶಿಸಿ ಭೋದಿಸುವುದರ ಜೊತೆಗೆ ನನಗೆ ಆಶೀರ್ವಾದವನ್ನು ಕೂಡ ಮಾಡಿದರು. ನಮ್ಮ ಕುಟುಂಬದ ನಾಲ್ಕನೆಯ ಸದಸ್ಯನಾಗಿ ನೀನು ಈ ಮನೆಯನ್ನು ಪ್ರವೇಶ ಮಾಡಿದ್ದೀಯಾ 1952ನೇ ಇಸವಿಯಲ್ಲಿ ನಮ್ಮ ದೊಡ್ಡಪ್ಪನವರಾದ ದಿ:ಚಂದ್ರಶೇಖರ್ ಪಾಟೀಲ್‌ರವರು ಈ ಸದನದ ಸದಸ್ಯರಾಗಿ ಆಯ್ಕೆಯಾಗಿದ್ದರು. ಇಂತಹ ಸುಸಂದರ್ಭ ಒದಗಿ ಬಂದಿರುವ ಹಿನ್ನಲೆಯಲ್ಲಿ ನನ್ನ ಪಕ್ಷದ ಎಲ್ಲಾ ವರಿಷ್ಠ ನಾಯಕರಿಗೂ ಮತ್ತು ಕಾರ್ಯಕರ್ತರಿಗೂ ಮತ್ತು ನನ್ನ ಕ್ಷೇತ್ರದ ಎಲ್ಲಾ ಮತದಾರರಿಗೂ ಸಹ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮುಂದೆ ಒಂದು ದಿವಸ ಇವತ್ತಿನ ದಿನವನ್ನು ತಮ್ಮ ಆಯ್ಕೆಯನ್ನು ನಮ್ಮ ಪ್ರತಿಪಕ್ಷಗಳು ನೆನಪಿಸಿಕೊಂಡಾಗ ನನ್ನ ಆಯ್ಕೆಯೂ ನೆನಪಾಗುತ್ತದೆ. ಹಾಗೂ ಹಿರಿಯ ರಾಜಕೀಯ ಧುರೀಣರಾದ ನಾಣಯ್ಯನವರು, ಮೋಟಮ್ಮನವರನ್ನು ನಾನು ಭೇಟಿ ಮಾಡಿದಂತಹ ಸಂದರ್ಭದಲ್ಲಿ ಅವರು ನೀಡಿದ ಹಿತವಚನ ಒಬ್ಬ ಕಿರಿಯ ಸದಸ್ಯನಿಗೆ ಹಿರಿಯರು ನೀಡಿದ ಧೈರ್ಯ ಎಂದು ನಾನು ಭಾವಿಸಿದ್ದೇನೆ. ಮುಂಬರುವ ದಿವಸಗಳಲ್ಲಿ ಇವರೆಲ್ಲರ ಮಾರ್ಗದರ್ಶನದಿಂದ ಈ ಸದನವನ್ನು ಇನ್ನು ಉತ್ತಮ ರೀತಿಯಲ್ಲಿ ಅರಿತುಕೊಂಡು ಹೋಗುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ.ಎಸ್.ವೀರಯ್ಯ(ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಗಳೇ, ತಾವು ಇಂದು ಎರಡನೇ ಬಾರಿಗೆ ಈ ಸದನದ ಸಭಾಪತಿಗಳಾಗಿ ಆಯ್ಕೆಯಾಗಿ ಸಭಾಪತಿಗಳ ಸ್ಥಾನವನ್ನು ಅಲಂಕರಿಸಿರುವುದಕ್ಕೆ ಹೃದಯಪೂರ್ವಕವಾಗಿ ತಮ್ಮನ್ನು ನಾನು ಅಭಿನಂದಿಸುತ್ತೇನೆ. ಇವರನ್ನು ಅವಿರೋಧವಾಗಿ ಆಯ್ಕೆ ಮಾಡಿರತಕ್ಕ ಪ್ರತಿಪಕ್ಷಗಳಿಗೂ ಸಹ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ತಾವು ಒಬ್ಬ ಅನುಭವಿ ವ್ಯಕ್ತಿ, ಹೆಚ್ಚು ಸಂಭಾವಿತರು, ಸಂವೇದನಾ ಶೀಲರು, ಬಹುಶ: ಪಕ್ಷಾತೀತವಾಗಿ ಸದಸನವನ್ನು ನಡೆಸುವುದಕ್ಕೆ ಮೊತ್ತೊಂದು ಹೆಸರು ಶಂಕರಮೂರ್ತಿಯವರದ್ದು ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಹಿಂದೆ ಇಂತಹ ಸಂದರ್ಭದಲ್ಲಿಯೂ ಸಹ ಸದನದ ಗಾಂಭೀರ್ಯತೆಯನ್ನು ಕಾಪಾಡಿಕೊಂಡು ಸದನವನ್ನು ಬಹಳ ಅರ್ಥಪೂರ್ಣವಾಗಿ ನಡೆಸಿಕೊಂಡು ಬಂದಿದ್ದೀರಿ, ಕೆಲವು ಸಲ ಈ ಸದನವನ್ನು ಬಹಳ ಗಂಭೀರವಾಗಿ ಮತ್ತು ಕೆಲವು ಸಲ ಸದನವನ್ನು ನಗೆಗಡಲಿನಲ್ಲಿ ಮುಳುಗಿಸಿ ಕೆಲವು ಸಲ ಹಲವಾರು ಗಟ್ಟಿ ನಿರ್ಧಾರಗಳನ್ನು ಸಹ ತೆಗೆದುಕೊಂಡಿದ್ದೀರಿ. ಮತ್ತೊಂದು ಸಲ ಈ ಸ್ಥಾನಕ್ಕೆ ತಮ್ಮ ಆಯ್ಕೆ ಅತ್ಯಂತ ಸೂಕ್ತ, ಸಮಯೋಜಿತ, ಅರ್ಥಪೂರ್ಣ ಮತ್ತ ಮಹತ್ವವಾದ ಆಯ್ಕೆ ಎಂದು ನಾನು ತಮ್ಮನ್ನು ಅಭಿನಂದಿಸಲು ಇಚ್ಛೆಪಡುತ್ತೇನೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಪ್ರಜೆಗಳನ್ನು ನಾಯಕರನ್ನಾಗಿ ಮಾಡಿದಂತಹ ಸಂವಿಧಾನ ನಮ್ಮದು. ನಮ್ಮ ಸಂವಿಧಾನದಲ್ಲಿ ಕೇವಲ ಆಡಳಿತ ಮತ್ತು ಅಧಿಕಾರಕ್ಕಾಗಿ ಕಾನೂನನ್ನು ರಚನೆ ಮಾಡುವುದಿಲ್ಲ. ನಮ್ಮ ಸಂವಿಧಾನದ ಆಶಯಗಳು ಈಡೇರಬೇಕು. ಜನರ ಆಶೋತ್ತರಗಳಿಗೆ ಸರ್ಕಾರ ಮತ್ತು ಜನಪ್ರತಿನಿಧಿಗಳು ಸ್ಪಂದಿಸಬೇಕು. ಹೆಚ್ಚಾಗಿ ಬಡವರ ಮೂಲಭೂತ ಸೌಕರ್ಯಗಳ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡಬೇಕು. ಸಮಸ್ಯೆಗಳಲ್ಲಿ ರಜಕೀಯವನ್ನು ಮಿಶ್ರಣ ಮಾಡಿದರೆ ಬಹುಶ: ಸಂವಿಧಾನದ ಆಶೋತ್ತರಗಳು ಈಡೇರುವುದಿಲ್ಲ.

ಇವತ್ತು ಜನರು ಸರ್ಕಾರದ ಮೇಲೆ ಬಹಳ ನಿರೀಕ್ಷೆಯನ್ನು ಇಟ್ಟುಕೊಂಡಿದ್ದಾರೆ. 70% ಬಹಸಂಖ್ಯಾತರು ಇವತ್ತು ಬಡವರಾಗಿದ್ದಾರೆ. ಅವರ ಬಗ್ಗೆ ಚರ್ಚೆ ಮಾಡಲು ಸದನದಲ್ಲಿ ಹೆಚ್ಚು ವೇಳೆಯನ್ನು ಮೀಸಲಾಗಿಡಬೇಕು.

"ಪ್ರಜೆಗಳಿಂದ, ಪ್ರಜೆಗಳಿಗೋಸ್ಕರ, ಪ್ರಜೆಗಳ" ಸರ್ಕಾರ ಎನ್ನುವ ಅರ್ಥದಲ್ಲಿ ನಮ್ಮ ಸಂವಿಧಾನ ಅಸ್ತಿತ್ವಕ್ಕೆ ಬಂದಿದೆ. ಅದರ ಅರ್ಥ ಪೂರ್ಣವಾಗಬೇಕು ಎನ್ನುವುದು ನಮ್ಮಗಳ ಇಚ್ಛೆ ಮತ್ತು ಜನರ ಇಚ್ಛೆ. ಆ ಇಚ್ಛೆ ಅನುಸ್ಠಾನಕ್ಕೆ ಬರಬೇಕಾಗಿದೆ. ನಮ್ಮ ನಿಕಟಪೂರ್ವ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಯಡಿಯುರಪ್ಪನವರು ಬಡವರ ಪರವಾಗಿ ಅನೇಕ ಕಾರ್ಯಕ್ರಮಗಳನ್ನು ಈ ರಾಜ್ಯಕ್ಕೆ ಕೊಟ್ಟಿದ್ದಾರೆ. ಈಗಿನ ಮುಖ್ಯಮಂತ್ರಿಗಳು ಕೂಡ ಒಂದು ಒಳ್ಳೆಯ ಬಜೆಟ್‌ನ್ನು ಕೊಟ್ಟಿದ್ದಾರೆ. ಮಹಿಳೆಯರ, ಮಕ್ಕಳ,, ನಿರಾಶ್ರಿತರ ಅಭ್ಯುದಯದ ಕಾರ್ಯಕ್ರಮ ಅದರಲ್ಲಿ ಅಡಗಿದೆ. ಅವುಗಳ ಅನುಷ್ಠಾನದ ಬಗ್ಗೆ, ಅವುಗಳ ಜಾರಿ ಬಗ್ಗೆ ಯೋಚನೆ ಮಾಡಬೇಕಾಗಿದೆ. ಈಗಾಗಲೇ ನಾವು ನಾಲ್ಕು ವರ್ಷಗಳನ್ನು ಕಳೆದಿದ್ದೇವೆ, ಉಳಿದ ಒಂದು ವರ್ಷದಲ್ಲಾದರೂ ಆ ಕಾರ್ಯಕ್ರಮಗಳ ಮಹತ್ವವನ್ನು ಅರಿತುಕೊಂಡು ಅದರ ಬಗ್ಗೆ ಚರ್ಚೆ ಮಾಡಿ, ಅವುಗಳನ್ನು ಜಾರಿಗೆ ತಂದು ಕಟ್ಟಕಡೆಯ ಮನುಷ್ಯನ ಕಣ್ಣೀರನ್ನು ಒರೆಸುವ ಕೆಲಸ ಮಾಡಬೇಕು. ಪಂಡೀತ ದೀನದಯಾಳ ಉಪಾಧ್ಯಾಯರವರ, ಅಂಬೇಡ್ಕರ್‌ರವರ, ಬಸವಣ್ಣನವರ ಆಶಯಗಳು ಏನು ಇದ್ದವು ಅವೆಲ್ಲವನ್ನು ಈಡೇರಿಸುವಂತಹ ಕೆಲಸವನ್ನು ಈ ಸದನ ಮಾಡಬೇಕಾಗಿದೆ. ಮಾನ್ಯ ರಾಜಶೇಖರನ್ ನವರಂತಹ ಹಿರಿಯರ ಮಾರ್ಗದರ್ಶನ ಈ ಸದನಕ್ಕೆ ಇದೆ. ಮಾನ್ಯ ನಾಣಯ್ಯನವರ ಅನುಭವದ ವಾಗ್ಮಿತನ ಈ ಸದನಕ್ಕೆ ಇದೆ. ಸಮತಾವಾದಿಗಳಾದ ಮಾನ್ಯ ವೀರಣ್ಣ ಮತ್ತಿಕಟ್ಟಿಯವರಿದ್ದಾರೆ. ನಾವು ಕೆಲವು ಕ್ಷಣಗಳಾದರೂ ಆ ಸ್ಥಾನದಲ್ಲಿ ಹಂಗಾಮಿಯಾಗಿ ಕುಳಿತುಕೊಳ್ಳುವಂತಹ ಅವಕಾಶವನ್ನು ಅವರು ನಮಗೆ ಮಾಡಿಕೊಟ್ಟಿದ್ದರು. ಒಂದು ರೀತಿಯ ಅನಭುವ ಮಂಟಪ ಇದ್ದ ಹಾಗೆ ಇತ್ತು, ಎಲ್ಲಾ ಜಾತಿ-ವರ್ಗವನ್ನು ಸಮಾನವಾಗಿ ತೆಗೆದುಕೊಂಡು ಹೋಗುವಂತಹ ಕೆಲಸವನ್ನು ಅವರು ಮಾಡಿದರು. ಇಲ್ಲಿ ಎಲ್ಲರ ಅನುಭವಗಳನ್ನು ಹಂಚಿಕೊಂಡು, ಬಹಳ ಮುಖ್ಯವಾಗಿ ಬಹಳ ಆಶೋತ್ತರಗಳನ್ನು ಈಡೇರಿಸುವಂತಹ, ಸಂವಿಧಾನದ ಆಶೋತ್ತರಗಳನ್ನು ಈಡೇಸುವಂತ, ಸಂವಿಧಾನದ ಮೂಲ ಉದ್ದೇಶ ಏನು ಇದೆ ಅವುಗಳನ್ನು ಈಡೇರಿಸುವಂತಹ ಚರ್ಚೆಗಳು ಇಲ್ಲಿ ಆಗಬೇಕು. ಅದು

ಬಿಟ್ಟು ಕೇವಲ ಪಕ್ಷದ ಪರವಾಗಿ ಅಥವಾ ಎಲ್ಲಾ ಸಮಸ್ಯೆಗಳಲ್ಲಿ ರಾಜಕೀಯವನ್ನು ಮಿಕ್ಸ್ ಮಾಡಿ ಸದನದ ಸಮಯವನ್ನು ಹಾಳು ಮಾಡುವಂತಹ ಕೆಲಸವಾಗದೆ, ತಮ್ಮ ಸ್ಥಾನದ ಮೂಲಕ ಈ ಪ್ರಜೆಗಳ ಆಶೋತ್ತರಗಳು ಈಡೇರಲಿ. ಚಿಂತಕರ ಚಾವಡಿ ಎಂದು ಈ ಮೇಲ್ಮನೆಯನ್ನು ಏನು ಕರೆಯುತ್ತೇವೆ ಅದು ನಿಜವಾದ ಅರ್ಥದಲ್ಲಿ ತಮ್ಮ ಸಮಯದಲ್ಲಿ ಆಗಲಿ ಎಂದು ಹೇಳಬಯಸುತ್ತೇನೆ.

ಪ್ರತಿಪಕ್ಷದ ನಾಯಕರಾಗಿ ಮಾನ್ಯ ಎಸ್.ಆರ್. ಪಾಟೀಲ್‌ರವರು ಆಯ್ಕೆಯಾಗಿದ್ದಾರೆ. ಅವರು ಅನುಭವಿ ನಾಯಕರು. ಈ ಸಮಯದಲ್ಲಿ ಅವರ ಆಯ್ಕೆ ಸಮಯೋಚಿತ ಎಂದು ಹೇಳಿ ಅವರಿಗೂ ಕೂಡ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಎರಡನೆ ಅವಧಿಗೆ ತಮ್ಮ ಜೊತೆಯಲ್ಲಿ ಇನ್ನಷ್ಟು ಕೆಲಸಗಳನ್ನು ಮಾಡುವಂತಹ ಅವಕಾಶವನ್ನು ಮಾಡಿಕೊಟ್ಟಂತಹ ನನ್ನ ಎಲ್ಲ ಮುಖಂಡರಿಗೆ ವಂದಿಸುತ್ತಾ, ಮತ್ತೋಮ್ಮೆ ತಮಗೆ ಶುಭ ಕೋರುತ, ಆ ಸ್ಥಾನದಿಂದ ಸಾಮಾಜಿಕ ನ್ಯಾಯ, ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎನ್ನುವಂತಹ ಸಂವಿಧಾನದ ಆಶಯವನ್ನು ತಾವು ಈಟೇರಿಸುತ್ತೀರಿ ಎನ್ನುವ ಭರವಸೆಯೊಂದಿಗೆ, ಹೊಸದಾಗಿ ಆಯ್ಕೆಯಾಗಿ ಬಂದಂತಹ ಸದಸ್ಯರನ್ನು ಸ್ವಾಗತಿಸುತ್ತಾ ಮತ್ತೋಮ್ಮೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀ ಶಿವರಾಜ ಸಜ್ಜನರ್ (ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾದವರು):–** ಮಾನ್ಯ ಸಭಾಪತಿಗಳೆ, ಎರಡನೆ ಬಾರಿಗೆ ಈ ಸದನದ ಸಭಾಪತಿಯಾಗಿ ಅವಿರೋಧವಾಗಿ ಆಯ್ಕೆಯಾದ ತಮಗೆ ಅತ್ಯಂತ ತುಂಬುಹೃದಯದ ಅಭಿನಂದನೆಗಳನ್ನು ಸಲ್ಲಿಸ ಬಯಸುತ್ತೇನೆ. ಈ ಅವಧಿಯಲ್ಲಿ ತಾವು ಸಜ್ಜನರಿಗೆ ಹೆಚ್ಚು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಡುತ್ತಿರೆಂದು ನನ್ನ ಭಾವನೆಯಾಗಿದೆ. ಏಕೆಂದರೆ ಇಷ್ಟು ದಿನ ಸಜ್ಜನರಿಗೆ ಕೊನೆಯಲ್ಲಿ ಅವಕಾಶವನ್ನು ಕೊಡಲಾಗುತ್ತಿತ್ತು. ಮುಂದಿನ ದಿನಗಳಲ್ಲಿ ಹೆಚ್ಚು ಅವಕಾಶವನ್ನು

ನೀಡಬೇಕೆಂದು ನಾನು ಎಲ್ಲ ಮಾನ್ಯ ಸದಸ್ಯರ ಪರವಾಗಿ ವಿನಂತಿ ಮಾಡುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಸಜ್ಜನರಿಗೆ ಅವಕಾಶವನ್ನಿ ಕೊಟ್ಟು ಪ್ರತಿಪಕ್ಷದ ನಾಯಕರನ್ನಾಗಿ ಮಾಡಿದ್ದಾರೆ. ನೀವು ಸಜ್ಜನರಿಗೆ ಅವಕಾಶವಿಲ್ಲ ಎಂದು ಹೇಳುತ್ತಿರಲಿಲ್ಲ.?

**ಶ್ರೀ ವೀರಣ್ಣ ಮತ್ತಿಕಟ್ಟಿ:-** 'ಸಜ್ಜನರ್' ಎಂದು ಹೆಸರು ಇರುವವರಿಗೆ ಅಲ್ಲ, ಸಜ್ಜನರಿಗೆ ಅವಕಾಶವನ್ನು ಕೊಟ್ಟೇಕೊಡುತ್ತಾರೆ.

**ಶ್ರೀ ಶಿವರಾಜ ಸಜ್ಜನರ್:-** ನನಗೆ ಹೆಚ್ಚು ಅವಕಾಶ ಸಿಕ್ಕಿರುವುದಿಲ್ಲ ಅದಕ್ಕೆ ಹೇಳುತ್ತಿದ್ದೇನೆ. ತಮಗೆ ಧನ್ಯವಾದಗಳು ಮತ್ತು ಅಭಿನಂದನೆಗಳು.

ಮಾನ್ಯ ಎಸ್.ಆರ್. ಪಾಟೀಲ್‌ರವರು ವಿರೋಧ ಪಕ್ಷದ ನಾಯಕರಾಗಿ ಆಯ್ಕೆಯಾಗಿದ್ದಾರೆ. ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾಗಿರುವ ಒಬ್ಬ ಪ್ರತಿನಿಧಿಗೆ ವಿರೋಧ ಪಕ್ಷದ ನಾಯಕರಾಗಿ ಸೇವೆ ಸಲ್ಲಿಸುವಂತಹ ಅವಕಾಶ ಸಿಕ್ಕಿರುವುದು ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾಗಿರುವಂತಹ ನಮಗೆಲ್ಲರಿಗೂ ಬಹಳ ಖುಷಿಯಾಗಿದೆ. ಅದರ ಅವಧಿಯಲ್ಲಿ ಸ್ಥಳೀಯ ಸಂಸ್ಥೆಗಳನ್ನು ಸಬಲೀಕರಣ ಮಾಡಲು ಹೆಚ್ಚು ಒತ್ತನ್ನು ನೀಡಬೇಕು. ಅವರ ಜೊತೆಯಲ್ಲಿ ನಾವು ಕೂಡ ಕೈ ಜೋಡಿಸಿ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ಯಗಳ ಸಬಲೀಕರಣಕ್ಕೆ ನಾವು ಎಲ್ಲರು ಹೆಚ್ಚು ಒತ್ತನ್ನು ನೀಡೋಣ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತೊಮ್ಮೆ ವಿರೋಧ ಪಕ್ಷದ ನಾಯಕರಿಗೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀ ವೈ.ಎ. ನಾರಾಯಣ ಸ್ವಾಮಿ (ಶಿಕ್ಷಕರ ಕ್ಷೇತ್ರ_:-** ಮಾನ್ಯ ಸಭಾಪತಿಗಳೆ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಹಿರಿಯರ ಸದನ, ಚಿಂತಕರ ಚಾವಡಿ ಸಂಸ್ಕಾರಕ್ಕೆ ಮಾದರಿಯಾಗಿರಬೇಕು ಎನ್ನುವುದು ನಮ್ಮ ಆಶಯ. ಸಮಾಜಕ್ಕೆ ಸಂಸ್ಕಾರವನ್ನು ಕೊಡುವ ಈ ಸದನಕ್ಕೆ ಸಂಸ್ಕಾರದ ಪ್ರತೀಕವಾಗಿರುವ ತಾವು

ಈ ಪೀಠವನ್ನು ಅಲಂಕರಿಸಿರುವುದಕ್ಕೆ ನಮ್ಮಗೆಲ್ಲರಿಗೂ ತುಂಬಾ ಸಂತೋಷವಾಗಿದೆ. ಲಕ್ಷ್ಮಣ ರೇಖೇಯನ್ನು ಬಹಳ ಕಟ್ಟುನಿಟ್ಟಿನಿಂದ ಪಾಲಿಸುವವರು ಯಾರಾದರೂ ಇದ್ದರೆ ಅದರಲ್ಲಿ ತಾವು ಅಗ್ರಗಣ್ಯರು ಎಂದು ಹೇಳಬಯಸುತ್ತೇನೆ. ಆಚಾರ–ವಿಚಾರಗಳಲ್ಲಿ, ಪ್ರತಿಭೆಯಲ್ಲಿ, ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯುವುದರಲ್ಲಿ ಅಗ್ರಮಾನ್ಯರಾದ ತಾವು ಈ ಸದನದ ಪೀಠ ಅಲಂಕರಿಸಿರುವುದು ಈ ಸದನಕ್ಕೆ ಶೋಭೆ ತರುವಂತಹ ವಿಚಾರ. ತಾವು ಈ ಪೀಠವನ್ನು ಅಲಂಕರಿಸಿದ ಮೇಲೆ ಆ ಪೀಠಕ್ಕೆ ತನ್ನದೆ ಆದ ಮಹತ್ವ ಬಂದಿದೆ. ಅದರ ಮುಖಾಂತರ ಈ ಸದನಕ್ಕೆ ವಿಶೇಷವಾದ ಗೌರವ ಬಂದಿದೆ ಎಂದು ಹೇಳಿದರೆ ತಪ್ಪಾಗಲಾರದು. ನನಗಂತೂ ಬಹಳ ಹೆಮ್ಮೆ ಮತ್ತು ಖುಷಿಯಾಗುತ್ತಿದೆ, ಪದವಿ ಕ್ಷೇತ್ರದಿಂದ ಐದು ಬಾರಿ ಚುನಾವಣೆಯಲ್ಲಿ ಗೆದ್ದು, ಎರಡನೆ ಬಾರಿಗೆ ಈ ಪೀಠವನ್ನು ಅಲಂಕರಿಸಿದ್ದೀರಿ. ಹೆಡ್ ಮಾಸ್ಟರ್ ಆಗಿ ಕಾರ್ಯನಿರ್ವಹಿಸಲು ತಾವು ಒಳ್ಳೆಯ ಸೂಕ್ತವಾದ ಪ್ರತಿಭೆ ಎಂದು ನಮ್ಮ ಗಣೇಶ್ ಕಾರ್ಣಿಕ್‌ರವರು ಹೇಳಿದರು. ನಿರಂತರವಾಗಿ ಎರಡು ವರ್ಷಗಳ ಕಾಲ ತಾವು ಈ ಸನದವನ್ನು ತಾವು ಬಹಳ ಅಚ್ಚುಕಟ್ಟಾಗಿ ನಿಯಂತ್ರಣದಲ್ಲಿ ಇಟ್ಟು, ಎಲ್ಲರಿಗೂ ಮಾರ್ಗದರ್ಶನ ನೀಡುವ ಹಾಗೆ ನಡೆಸಿಕೊಂಡು ಬಂದಿದ್ದೀರಿ. ಈ ಅವಧಿಗೂ ಸಹ ಈ ಸದನದಲ್ಲಿ ವಿಚಾರಗಳ ಮಂಡನೆಯಾಗಬೇಕು, ಸಮಾಜದ ಬಗ್ಗೆ ಚರ್ಚೆಯಾಗಬೇಕು. ಬಡವರ ಕಣ್ಣೀರನ್ನು ಒರೆಸುವಂತಹ ಪ್ರಾಮಾಣಿಕ ಪ್ರಯತ್ನ, ಈ ಸರ್ಕಾರದಿಂದ ಕೆಲಸ ಮಾಡಿಸುವಂತಹ ಪ್ರಯತ್ನ ಆಗಬೇಕು. ಆ ನಿಟ್ಟಿನಲ್ಲಿ ತಾವು ಪ್ರಾಮಾಣಿಕ ಪ್ರಯತ್ನ ಮತ್ತು ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತೀರಿ ಎನ್ನುವ ಭಾವನೆ ಮತ್ತು ವಿಶ್ವಾಸ ನಮಗೆಲ್ಲರಿಗೂ ಇದೆ. ಸಭಾಪತಿಯವರ ಸ್ಥಾನ ಖಾಲಿ ಇರಬಾರದು ಎನ್ನುವ ವ್ಯವಸ್ಥೆಗೆ ನಮ್ಮ ಸರ್ಕಾರ ಅತಿ ಶೀಘ್ರವಾಗಿ, ಅತಿ ವೇಗವಾಗಿ ಈ ಸ್ಥಾನವನ್ನು ತುಂಬುವಂತಹ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದೆ. ಈ ಸದನದ ಮುಖಾಂತರ ನಮ್ಮ ಪಕ್ಷದ ಮುಖ್ಯಂತ್ರಿಯಾದಿಯಾಗಿ ಎಲ್ಲ ಹಿರಿಯ ನಾಯಕರಿಗೆ, ಸದನದ ಎಲ್ಲ ಸದಸ್ಯರಿಗೂ ವಿಶೇಷವಾದ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಈ ಸದನಕ್ಕೆ ಸುಮಾರು 20 ಜನ ಹೊಸ ಸದಸ್ಯರ ಪ್ರವೇಶವಾಗಿದೆ. ಇಲ್ಲಿಗೆ ಬರಬೇಕಾದರೆ ನಾವು ಪ್ರತಿಸಾರಿ ರೂಲ್ಸ್ ಬುಕ್‌ನ್ನು ಓದಿಕೊಂಡು ಬರಬೇಕಾಗುತ್ತದೆ. ಸಂವಿಧಾನದ ಆಶಯವನ್ನು ಎತ್ತಿ ಹಿಡಿಯಲು, ಸಂವಿಧಾನವನ್ನು ಓದಿಕೊಂಡು ಸಹ ಬರಬೇಕಾಗುತ್ತದೆ. ನಾವು ಇಲ್ಲಿ ಪ್ರಮಾಣ ವಚನವನ್ನು ಸ್ವೀಕಾರ ಮಾಡುವಾಗ ನಮಗೆ ಒಂದು ಸೂಟ್‌ಕೇಸ್‌ನ್ನು ಕೊಡಲಾಗುತ್ತದೆ. ಆ ಸೂಟ್‌ಕೇಸ್‌ನಲ್ಲಿ ಮೂರು ಅಂಶಗಳು ಇವೆ, ಒಂದು ರೂಲ್ಸ್ ಬುಕ್, ಎರಡನೆಯದು ಸಂವಿಧಾನ. ಸಂವಿಧಾನದ ವ್ಯವಸ್ಥೆಯಲ್ಲಿ ಇರುವ ಆಶಯವನ್ನು ಎತ್ತಿ ಹಿಡಿಯಲು ಹೊಸ ಸದಸ್ಯರು ಸಹ ಚರ್ಚೆ ಮಾಡಲು, ಅವರ ಪ್ರತಿಭೆಯನ್ನು ಪ್ರದರ್ಶನ ಮಾಡಲು ತಾವು ವಿಶೇಷವಾದ ಕಾಳಜಿಯನ್ನು ವಹಿಸಬೇಕೆನ್ನುವ ಮನವಿಯನ್ನು ಅವರ ಪರವಾಗಿ ಮಾಡುತ್ತೇನೆ. ಈ ಸದನದಲ್ಲಿ ಪ್ರಶ್ನೋತ್ತರವಿರಬಹುದು, ಏನೇ ಕಲಾಪ ಇರಬಹುದು, ತಾವು ಪೀಠವನ್ನು ಅಲಂಕರಿಸಿದ ಮೇಲೆ ಎರಡು ವರ್ಷಗಳಿಂದ ಸದನ ತುಂಬಾ ಚೆನ್ನಾಗಿ ನಡೆಯುತ್ತಿದೆ. ಯಾವುದೇ ರೀತಿಯ ತಾರತಮ್ಯವನ್ನು ತಾವು ಮಾಡದೆ ಬಹಳ ಚೆನ್ನಾಗಿ ನಡೆಸಿಕೊಂಡು ಹೋಗುತ್ತಿದ್ದೀರಿ. ಇದರಿಂದ ನಮಗೆ ಬಹಳ ಖುಷಿಯಾಗಿದೆ. ತಾವು ಈ ಪೀಠವನ್ನು ಅಲಂಕರಿಸಿರುವುದರಲ್ಲಿ ಇರುವ ವಿಶೇಷತೆ ಏನು ಎಂದರೆ, ತಾವು ಅವಿರೋಧವಾಗಿ ಆಯ್ಕೆಯಾಗಿರುವುದು. ನಮ್ಮ ಪ್ರತಿಪಕ್ಷದ ಎಲ್ಲಾ ಸದಸ್ಯರು ಈ ಸದನದ ಗೌರವ, ಪ್ರತಿಷ್ಠೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಅವಿರೋಧವಾಗಿ ತಮ್ಮನ್ನು ಆಯ್ಕೆ ಮಾಡಿದ್ದಾರೆ. ಆದ್ದರಿಂದ ಈ ಸಂದರ್ಭದಲ್ಲಿ ಪ್ರತಿ ಪಕ್ಷದ ಎಲ್ಲ ಸದಸ್ಯರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ತಾವು ನಮಗೆ ಮಾರ್ಗದರ್ಶನ ಮಾಡುತ್ತ, ಹಿತನುಡಿಗಳನ್ನು ಆಡುತ್ತ ಸರ್ಕಾರದ ಮುಖಾಂತರ ಸಮಾಜಕ್ಕೆ ಏನು ಒಳ್ಳೆಯ ಕೆಲಸವಾಗಬೇಕಾಗಿದೆ ಆ ಕೆಲಸವನ್ನು ಮಾಡುವುದರ ಜೊತೆಗೆ, ಈ ಸದನ ಇನ್ನು ಮೇಲ್ಪಂಕ್ತಿಗೆ ಹೋಗಬೇಕು. ಬೇರೆ-ಬೇರೆ ರಾಜ್ಯದಲ್ಲಿ ಎಲ್ಲಿ ವಿಧಾನಪರಿಷತ್ತು ಇದೆ, ಅವೆಲ್ಲಕ್ಕಿಂತ ಕರ್ನಾಟಕದ ವಿಧಾನಪರಿಷತ್ತು ಅತ್ಯಂತ ಉತ್ಕೃಷ್ಟವಾದುದು, ಉನ್ನತವಾದುದ್ದು, ಶ್ರೇಷ್ಠವಾದುದು ಎನ್ನುವ ಹೆಗ್ಗಳಿಕೆಗೆ ಪಾತ್ರವಾಗುವಂತೆ ತಾವು ಸದನವನ್ನು

ನಡೆಸಿಕೊಂಡು ಹೋಗಬೇಕು ಎನ್ನುವ ಮನವಿಯನ್ನು ತಮ್ಮಲ್ಲಿ ನಿವೇದನೆ ಮಾಡಿಕೊಳ್ಳುತ್ತ, ತಮಗೆ ವಿಶೇಷವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಇನ್ನು ಶ್ರೀಯುತ ಎಸ್.ಆರ್. ಪಾಟೀಲ್ ರವರು ಪ್ರತಿಪಕ್ಷದ ನಾಯಕರಾಗಿ ಆಯ್ಕೆಯಾಗಿದ್ದು, ನಾವು ಮತ್ತು ಅವರು ಅರ್ಜಿಗಳ ಸಮಿತಿಯಲ್ಲಿ ಕೆಲಸ ಮಾಡಿದ ಅನುಭವವನ್ನು ಹೊಂದಿದ್ದು, ಅವರು ಬಹಳ ತೀಕ್ಷ್ಣಮತಿಗಳು, ಕಾನೂನು ಪದವೀಧರರು ಮತ್ತು ಎಲ್ಲ ವಿಷಯವನ್ನು ಚೆನ್ನಾಗಿ ಬಲ್ಲವರಾಗಿದ್ದು, ಅಂತಹವರನ್ನು ಅವರ ಪಕ್ಷ ಆಯ್ಕೆ ಮಾಡಿ ಸಮಾಜದ ಧ್ವನಿಯಾಗಿ ಕೆಲಸ ಮಾಡಲು ಅವಕಾಶ ಮಾಡಿಕೊಟ್ಟಿದೆ. ಅವರಿಗೂ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅಲ್ಲದೇ ಪ್ರತಿಪಕ್ಷದ ನಾಯಕರಾಗಿ ಶ್ರೀಮತಿ ಮೋಟಮ್ಮನವರು, ಶ್ರೀ ವೀರಣ್ಣ ಮತ್ತಿಕಟ್ಟಿಯವರು ಬಹಳ ಒಳ್ಳೆಯ ಕೆಲಸ ಮಾಡಿದ್ದು, ಅವರ ಸಾಲಿಗೆ ಮಾನ್ಯ ಎಸ್.ಆರ್.ಪಾಟೀಲ್‌ರು ಸೇರಿ, ಅವರ ಪ್ರತಿಭೆಯನ್ನು ಪ್ರದರ್ಶನ ಮಾಡಿ ಜನ ಸಾಮಾನ್ಯರ ವಿಷಯಗಳನ್ನು ಚರ್ಚೆ ಮಾಡಿ ಒಳ್ಳೆಯ ಸಾಂಪ್ರದಾಯವನ್ನು ಹುಟ್ಟುಹಾಕಲಿ ಎಂಬ ವಿಶ್ವಾಸಪೂರ್ಣ ಆಶಯವನ್ನು ವ್ಯಕ್ತಮಾಡುತ್ತೇನೆ. ಸಭಾಪತಿಯವರಾದ ತಮಗೆ ನಮ್ಮೆಲ್ಲರನ್ನಿ ನಿಭಾಯಿಸಲು ವಿಶೇಷವಾದ ಶಕ್ತಿಯ ಅಗತ್ಯವಿದ್ದು, ಆ ಶಕ್ತಿಯನ್ನು ದೇವರು ನಮಗೆ ಕೊಡಲಿ, ಸಾವಧಾನ ಮತ್ತು ವ್ಯವಧಾನವನ್ನು ಇನ್ನೂ ಹೆಚ್ಚಿಗೆ ಪ್ರದರ್ಶನ ಮಾಡಿ ನಮಗೆಲ್ಲರಿಗೂ ಆದರ್ಶಪ್ರಾಯವಾಗಿರಬೇಕೆಂಬ ಮಾತನ್ನು ಹೇಳಿ, ತಮಗೆ ವಿಶೇಷವಾದ ಅಭಿನಂದನೆ ಸಲ್ಲಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ನಾರಾಯಣ ಸಾ. ಭಾಂಡಗೆ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಪತಿಯವರೇ, ಇವತ್ತು ತಮ್ಮನ್ನು ಎಲ್ಲ ಸದಸ್ಯರು ಅವಿರೋಧವಾಗಿ ಸಭಾಪತಿಯವರನ್ನಾಗಿ ಆಯ್ಕೆ ಮಾಡಿರುವುದರಲ್ಲಿ ತಮ್ಮ ಮೇಲಿರುವ ಪ್ರೀತಿ, ವಿಶ್ವಾಸ ಮತ್ತು ಅಭಿಮಾನವನ್ನು ತೋರಿಸುತ್ತಿದೆ. ತಾವು ಅಜಾತಶತ್ರುವಾಗಿ ಸದನದಲ್ಲಿ ನಮಗೆಲ್ಲರಿಗೂ ಮಾರ್ಗದರ್ಶನ ಮಾಡುತ್ತಿದ್ದೀರಿ. ಪ್ರಾಯಶ: ಎರಡು ವರ್ಷಗಳಿಂದ ತಾವು ಸದನವನ್ನು ನಡೆಸಿಕೊಂಡು ಬಂದ ರೀತಿ ಮತ್ತು ಎಲ್ಲರಿಗೂ ಕೊಟ್ಟ ಅವಕಾಶಗಳನ್ನು ನೋಡಿದಾಗ ನನಗೆ ಕಡಿಮೆ

ಅವಕಾಶ ಕೊಟ್ಟಿರಬಹುದು. ಆ ಮಾತು ಬೇರೆ. ಆದಾಗ್ಯೂ ಸಹ ಆಡಳಿತ ಪಕ್ಷ ಮತ್ತು ಪ್ರತಿಪಕ್ಷ ಎಂಬ ಭೇಧಭಾವ ಇಲ್ಲದೇ ಪಕ್ಷಾತೀತವಾಗಿ ನಡೆದುಕೊಂಡಿರುವುದಕ್ಕೆ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ಕಳೆದ 25–30 ವರ್ಷಗಳಿಂದ ತಮ್ಮ ಮಾರ್ಗದರ್ಶನದಲ್ಲಿ ಕೆಲಸ ಮಾಡಿದ್ದೇನೆ. ಇವತ್ತಿಗೂ ನೆನಪಿರುವಂತೆ 80ರ ದಶಕದಲ್ಲಿ ಶ್ರೀ ಅಟಲ್ ಬಿಹಾರಿ ವಾಜಪೇಯಿಯವರು ನಮ್ಮ ಉತ್ತರ ಕರ್ನಾಟಕಕ್ಕೆ ಬಂದಾಗ ಅವರು ಹೇಳಿದ ಭಾಷಣದ ಭಾಷಾಂತರವನ್ನು ತಾವು ಮಾಡುತ್ತಿದ್ದಿರಿ. ಒಂದೇ ಅಂಬಾಸಿಡರ್ ಕಾರಿನಲ್ಲಿ ಮುಂದೆ ಅಟಲ್‌ಜಿಯವರು ಹಾಗೂ ಹಿಂದೆ ತಾವು ಮತ್ತು ನಾನು ಇದ್ದೆವು. ಈ ರೀತಿ ಅಂದಿನ ದಿನಗಳಿಂದ ಹಿಡಿದು ಇವತ್ತಿನವರೆಗೂ ತಮ್ಮ ರಾಜಕೀಯ ಮಾರ್ಗದರ್ಶನದಲ್ಲಿ ಬೆಳೆದು ಬಂದಿದ್ದೇವೆ. ಮುಂದೆ ಸಹ ಸದನದಲ್ಲಿ ಎರಡನೇ ಬಾರಿಯಾದರೂ ನನಗೆ ಹೆಚ್ಚಿನ ಅವಕಾಶ ಕೊಡುತ್ತೀರಿ ಎಂಬ ಸಂಪೂರ್ಣ ಭರವಸೆ ಇದೆ.

**ಶ್ರೀ ಗೋ.ಮಧುಸೂದನ್:–** ಸಭಾಪತಿಯವರು ಪಕ್ಷಾತೀತವಾಗಿದ್ದು, ತಾವು ಪುನ: ಹಿಂದೆ ಮಾಡಿದಂತೆ ಮಾರ್ಗದರ್ಶನ ಮಾಡಿ ಎಂದರೆ ಹೇಗೆ?

**ಶ್ರೀ ನಾರಾಯಣ ಸಾ. ಭಾಂಡಗೆ:–** ಆ ರೀತಿ ಇಲ್ಲ, ಅದಕ್ಕಾಗಿ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ.

ಇನ್ನು ಎರಡನೆಯದಾಗಿ ಶ್ರೀ ಶಂಕರಮೂರ್ತಿಯವರು ನನಗೆ ಮಾರ್ಗದರ್ಶಕರು ಹಾಗೂ ಹಿರಯರಾದರೆ ಶ್ರೀ ಎಸ್.ಆರ್.ಪಾಟೀಲ್‌ರವರು ನನಗೆ ಅತ್ಯಂತ ಸಮೀಪ ಇರುವವರು, ಏಕೆಂದರೆ ಅವರು ನಮ್ಮ ಊರಿನವರು. ನಮ್ಮ ಭಾಗದಲ್ಲಿ ಎಸ್.ಆರ್.ಪಾಟೀಲ್‌ರವರನ್ನು ಕಾಂಗ್ರೆಸ್ ಪಕ್ಷದ ನಾಯಕ ಎನ್ನುವುದಕ್ಕಿಂತ ಪಕ್ಷಾತೀತ ನಾಯಕ ಎನ್ನುವ ಚರಿಷ್ಮಾವನ್ನು ಹೊಂದಿದ್ದಾರೆ. ಏಕೆಂದರೆ ಅವರು ಯಾವತ್ತಿಗೂ ಯಾವುದು ಸರಿಯಾಗಿ ಕಂಡಿದೆ. ಯಾವುದು ತಪ್ಪು, ಅದು ಪಕ್ಷ ತೆಗೆದುಕೊಂಡ ನಿರ್ಣಯವಾಗಿಯೂ ಮಾತನಾಡುವ ದಾರ್ಷ್ಯತೆಯನ್ನು ಅನೇಕ ಸಾರಿ ತೋರಿದ್ದಾರೆ. ಅದಕ್ಕಾಗಿ

ಪಕ್ಷಾತೀತ ನಾಯಕ ಎಂದು ಹೇಳಿದೆ. ನಮ್ಮ ಸಂಘ–ಪರಿವಾರದ ಅನೇಕ ಕಾರ್ಯಕ್ರಮಗಳಿಗೆ ಮೌನ ಸಮ್ಮತಿಯನ್ನು ಕೊಟ್ಟಿದ್ದಾರೆ.

**ಶ್ರೀ ಎ.ಎಚ್. ಶಿವಯೋಗಿಸ್ವಾಮಿ:–** ಇಂತಹ ಸ್ನೇಹಿತರೆಂದು ಅವರಿಗೆ ದುಶ್ಮನ್ ಇಲ್ಲ. ಅವರ ಪ್ಲಾನ್ ಏನೋ ಇದೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:–** ಇದು ವಿಶ್ವಾಸದ ಮಾತಲ್ಲ.

**ಶ್ರೀ ನಾರಾಯಣ ಸಾ. ಭಾಂಡಗೆ:–** ನನ್ನ ಉದ್ದೇಶ ಏನೆಂದರೆ ಒಳ್ಳೆಯದಿರುವುದೆಲ್ಲದ್ದಕ್ಕೂ ಸಮ್ಮತಿ ಕೊಟ್ಟಿದ್ದಾರೆ ಎಂದು ಹೇಳಿದೆ.

**ಸಭಾಪತಿಯವರು:–** ಈಗ ಸರಿ ಹೋಯಿತು.

**ಶ್ರೀ ನಾರಾಯಣ ಸಾ. ಭಾಂಡಗೆ:–** ಅದಕ್ಕಾಗಿ ಶ್ರೀ ಪಾಟೀಲರು ನಮ್ಮವರು ಹಾಗೂ ಪ್ರತಿಪಕ್ಷದ ನಾಯಕರಾಗಿರುವುದರಿಂದ ಸದನವನ್ನು ಒಳ್ಳೆಯ ರೀತಿಯಲ್ಲಿ ನಡೆಸಲು ಅವಕಾಶ ಮಾಡಿಕೊಡುತ್ತಾರೆ ಎನ್ನುವ ಭರವಸೆ ಇದೆ.

**ಶ್ರೀ ಬಸವರಾಜ ಹೊರಟ್ಟಿ:–** ಅಪರೂಪಕ್ಕೆ ವಿರೋಧ ಪಕ್ಷದ ನಾಯಕರಾಗಿದ್ದಾರೆ. ಅವರಿಗೆ ಮತ್ತೇನು ಮಾಡಬೇಕು ಎಂದು ಮಾಡಿದ್ದಾರೆ?

**ಶ್ರೀ ನಾರಾಯಣ ಸಾ. ಭಾಂಡಗೆ:–** ಅವರಿಗೆ ಅಭಿನಂದನೆಯನ್ನು ಸಲ್ಲಿಸಿ, ಸಭಾಪತಿಯವರಾದ ತಮಗೂ ಭಗವಂತ ಆಯುರಾರೋಗ್ಯ ಕೊಟ್ಟು ನಮಗೆಲ್ಲರಿಗೂ ಮಾರ್ಗದರ್ಶನ ಮಾಡಲು ಶಕ್ತಿ ಸಾಮರ್ಥ್ಯ ಬರಲಿ ಎಂದು ಹಾರೈಸುತ್ತೇನೆ.

**ಶ್ರೀಮತಿ ಭಾರತಿ ಶೆಟ್ಟಿ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನೂತನವಾಗಿ ತಾವು ಎರಡನೆ ಬಾರಿ ಸಭಾಪತಿಯವರ ಸ್ಥಾನವನ್ನು ಅಲಂಕರಿಸಿದ್ದೀರಿ, ತಮಗೆ ಹೃತ್ಪೂರ್ಕವಾದ ಅಭಿನಂದನೆಯನ್ನು ಸಲ್ಲಿಸುತ್ತಾ, ನಾನು ತಮ್ಮ ಜಿಲ್ಲೆಯವಳು ಎಂದು ಹೇಳಿಕೊಳ್ಳುವುದಕ್ಕೆ ಹೆಮ್ಮೆ ಇದೆ, ಅದೇ ರೀತಿ ನನ್ನ 25 ವರ್ಷದ ರಾಜಕೀಯ ಜೀವನದಲ್ಲಿ ತಮ್ಮ ಜೊತೆ

ಅನೇಕ ಪ್ರವಾಸಗಳನ್ನು ಮಾಡಿದ್ದೇನೆ. ಆಗ ನಾನು ನಿಮ್ಮನ್ನು ನೋಡಿದಾಗ ನಾವು ಸಣ್ಣವರಿದ್ದಾಗ ಶಾಲೆಯಲ್ಲಿ ಒಂದು ಹಾಡು ನೆನಪಿಗೆ ಬರುತ್ತದೆ.

**"ನಾವು ಎಳೆಯರು, ನಾವು ಗೆಳೆಯರು,**

**ನಮ್ಮ ಕನಸದು ಸುಂದರ,**

**ನಾಳೆ ನಾವೇ ನಾಡ ಹಿರಿಯರು,**

**ನಮ್ಮ ಕನಸದು ಸುಂದರ"**

ಎಂಬ ಹಾಡಿಗೆ ನೆನಪಿಗೆ ಬರುತ್ತದೆ. ಆ ಹಾಡನ್ನು ಹೇಳುವಾಗ ನಾಳೆ ಈ ನಾಡಿನ ಹಿರಿಯರಾಗುತ್ತೇವೆ ಎಂದು ಎಣಿಸಿಕೊಳ್ಳುತ್ತಿದ್ದೇನು. ತಮ್ಮ ಜೊತೆ ಒಡನಾಟ ಮಾಡಿದಾಗ ನನಗೆ ಶಾಲೆಯ ನೆನಪಾಗುತ್ತದೆ, ತಾವು ನಮ್ಮ ಪಕ್ಷದ ಒಳಗಿನ ಸಭೆ ನಡೆಸುವುದು ಇರಬಹುದು ಅಥವಾ ಸಾರ್ವಜನಿಕ ಸಭೆಯನ್ನು ನಡೆಸುವಾಗ ಅಲ್ಲಿನ ಎಲ್ಲಾ ಜನರನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳುವ ಒಂದು ಅಭೂತಪೂರ್ವವಾದ ಚಾತುರ್ಯ ಅಥವಾ ಕಲೆ ತಮ್ಮಲ್ಲಿದೆ ಎಂದು ಹೇಳುವುದಕ್ಕೆ ಸಂತೋಷವಾಗುತ್ತದೆ. ಇವತ್ತು ಈ ಮನೆಯ ಹೆಡ್ ಮಾಸ್ಟರ್ ಸ್ಥಾನದಲ್ಲಿ ತಾವು ಕುಳಿತಿದ್ದು, ನಾನು ಹಿಂದೆ ತಾವು ಸದನ ನಡೆಸುವುದನ್ನು ನೋಡಿದಂತೆ ತಾವು ಎಲ್ಲರನ್ನು ಒಂದೇ ರೀತಿಯಲ್ಲಿ ನೋಡುತ್ತಾ ನಡೆಸುತ್ತಿದ್ದಿರಿ. ನಮ್ಮ ಶ್ರೀಮತಿ ಮೋಟಮ್ಮನವರು ಪ್ರಶ್ನೆಗೆ ಇಂತಿಷ್ಟೇ ಸಮಯವನ್ನು ಕೊಡುತ್ತಿದ್ದಿರಿ ಎಂಬ ವಿಷಯವನ್ನು ಹೇಳಿದ್ದಾರೆ. ಆದರೆ ತಮಗೆ ಕೆಲವರ ಬಗ್ಗೆ ಪ್ರೀತಿ ಸ್ವಲ್ಪ ಜಾಸ್ತಿ ಇದೆ. ಏಕೆಂದರೆ ಅವರು ಬಲಬದಿಗೆ ಮಾತ್ರ ನೋಡುತ್ತಾರೆ, ಎಡಬದಿಗೆ ನೋಡುವುದಿಲ್ಲ ಎಂದು ಹೇಳುತ್ತಾರೆ. ತಾವು ಸಹ ಮಾನ್ಯ ನಾಣಯ್ಯನವರು ಎದ್ದಾಗ ಸ್ವಲ್ಪ ಪ್ರೀತಿ ಜಾಸ್ತಿಯಾಗಿ ಹೆಚ್ಚು ಮಾತನಾಡಲು ಅವಕಾಶ ಕೊಡುತ್ತೀರಿ. ನಾವು ಮಾತನಾಡಲು ಹೋದಾಗ ಒಂದೆರಡೇ ನಿಮಿಷಗಳು ಎಂದು ಹೇಳುತ್ತೀರಿ.

**ಶ್ರೀ ಬಸವರಾಜ ಹೊರಟ್ಟಿ:-** ತಾವು ತುಂಟ ವಿದ್ಯಾರ್ಥಿನಿಯಾಗಿದ್ದರಿಂದ ಅವಕಾಶ ಕಡಿಮೆ ಇದೆ.

**ಶ್ರೀಮತಿ ಭಾರತಿ ಶೆಟ್ಟಿ:-** ತಮ್ಮಿಂದ ಎಲ್ಲರಿಗೂ ಸಮಾನವಾದ ಅವಕಾಶ ಹರಿದುಬರಲಿ ಎಂದು ಹಾರೈಸುತ್ತಾ, ಈ ಸ್ಥಾನದಲ್ಲಿ ಉತ್ತಮ ಆವಿಷ್ಕಾರ ಬಂದು, ಸುವರ್ಣಾಕ್ಷರದಲ್ಲಿ ಬರೆಯುವಂತಾಗಲೀ, ‘ ವಂದೇ ಮಾತರಂ’ ರಾಷ್ಟ್ರಭಕ್ತಿ ಗೀತೆಯ ಬಗ್ಗೆ ಕೆಲವರು ಉಲ್ಲೇಖ ಮಾಡಿದ್ದಾರೆ. ಅದೇ ರೀತಿ ರಾಷ್ಟ್ರೀಯ ನಾಯಕರುಗಳ ಭಾವಚಿತ್ರವನ್ನು ಅನಾವರಣ ಮಾಡಿ ಸುವರ್ಣಾಕ್ಷರದಲ್ಲಿ ಬರೆಯುವಂತಹ ಘಟನೆಯನ್ನು ಸದನದಲ್ಲಿ ನಡೆಸಿದ್ದೀರಿ. ಹಾಗೆ ಈ ಅಭಿನಂದನಾ ಸಭೆಯಲ್ಲಿ ನನಗೆ ಸ್ವಲ್ಪ ದು:ಖ ಆಗುತ್ತಿದೆ. ಏಕೆಂದರೆ ಮಾನ್ಯ ಪಾಟೀಲ್‌ರವರು ವಿರೋಧ ಪಕ್ಷ ನಾಯಕರಾಗಿ ಆಯ್ಕೆಯಾಗಿದ್ದು, ಒಬ್ಬ ಮಹಿಳೆಯನ್ನು ಆ ಸ್ಥಾನದಲ್ಲಿ ಇಳಿಸಿ ಪುರುಷರಿಗೆ ಅವಕಾಶ ಮಾಡಿಕೊಟ್ಟಿರುವ ವ್ಯವಸ್ಥೆ ಬಗ್ಗೆ ಬೇಸರ. ನೂತನವಾಗಿ ಆಯ್ಕೆಯಾಗಿರುವ ವಿರೋಧ ಪಕ್ಷದ ನಾಯಕರ ಬಗ್ಗೆ ಬೇಸರ ಇಲ್ಲ. ಒಬ್ಬ ಮಹಿಳೆಯನ್ನು ತುಳಿಯುವಂತೆ ಆ ವ್ಯವಸ್ಥೆ ಬಗ್ಗೆ ಬೇಸರ ಇದೆ. ಇದು ಸಮಾಜದ ಎಲ್ಲ ಹಂತಗಳಲ್ಲಿ ನಡೆಯುತ್ತಿದೆ ಎನ್ನುವುದಕ್ಕೆ ಇದೊಂದು ಉದಾಹರಣೆ ಎಂದು ಹೇಳುತ್ತಾ, ವಿರೋಧ ಪಕ್ಷದ ನಾಯಕರಾಗಿ ಆಯ್ಕೆಯಾಗಿರುವವರು ತೆಳ್ಳಗಿದ್ದರೂ ಬಹಳ ತೂಕದ ವ್ಯಕ್ತಿಯಾಗಿದ್ದು, ಆ ತೂಕದ ರೀತಿಯಲ್ಲಿಯೇ ಸದನ ನಡೆಯುತ್ತದೆ ಎಂಬ ಆಶಯ ವ್ಯಕ್ತಪಡಿಸುತ್ತಾ, ನೂತನವಾಗಿ ಆಯ್ಕೆಯಾಗಿರುವ ಎಲ್ಲಾ ಮಾನ್ಯ ಸದಸ್ಯರುಗಳಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

**ಶ್ರೀಮತಿ ಮೋಟಮ್ಮ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮ ಸ್ನೇಹಿತರು ನನಗೆ ಹೆಚ್ಚು ಗೌರವ ಕೊಟ್ಟು ಮಾತನಾಡಿರಬಹುದು, ಆದರೆ ಮಹಿಳೆಯರನ್ನು ತುಳಿಯುವ ಕೆಲಸ ಖಂಡಿತ ಮಾಡಿಲ್ಲ, ನಮ್ಮ ಪಕ್ಷದಲ್ಲಿ ಮಹಿಳೆಯರಿಗೆ ಹೆಚ್ಚು ಗೌರವ ಇದೆ. ನಾನು ಒಂದು ಮಾತನ್ನು ಹೇಳುವುದೇನೆಂದರೆ, ನಾನು ಚುನಾವಣೆ ಸ್ಪರ್ಧೆ ಮಾಡುವಾಗ ನಮ್ಮ ನಾಯಕಿಯವರಿಗೆ ಪಕ್ಷದಲ್ಲಿ ಯಾವುದೇ ಸಾಮಾಜಿಕ ವರ್ಗಗಳ ವ್ಯತ್ಯಾಸ ಕಂಡುಬಂದಾಗ ಅವರನ್ನು ಸಮಾಧಾನ ಮಾಡಲು ನನ್ನ

ಹುದ್ದೆಯನ್ನು ಅವರಿಗೆ ಕೊಡಬೇಕೆಂದು ಹಾಗೂ ಇದಕ್ಕೆ ನನ್ನ ಆಕ್ಷೇಪಣೆ ಇಲ್ಲ ಎಂದು ಲಿಖಿತವಾಗಿ ಬರೆದುಕೊಟ್ಟಿದ್ದೇನೆ.

ಇದರ ಬಗ್ಗೆ ನನ್ನ ಅಭ್ಯಂತರವೇನೂ ಇಲ್ಲವೆಂದು ನಾನು ಬರೆದು ಕೊಟ್ಟಿದ್ದೇನೆ. ಇಲ್ಲಿ ಮಹಿಳೆಯರನ್ನು ತುಳಿಯುವ ಪ್ರಶ್ನೆಯೇ ಇಲ್ಲ. ನನ್ನ ಅಭಿಪ್ರಾಯದ ರೀತಿಯಲ್ಲಿಯೇ ಅವರನ್ನು ನೇಮಕ ಮಾಡಿದ್ದಾರೆ. ಶ್ರೀಮತಿ ಭಾರತಿ ಶೆಟ್ಟಿಯವರು ನನ್ನ ಪರವಾಗಿ ಮಾತನಾಡಿದ್ದಕ್ಕೆ ನಾನು ಅವರಿಗೆ ಧನ್ಯವಾದಗಳು ಸಲ್ಲಿಸುವುದಕ್ಕೆ ಬಯಸುತ್ತಿದ್ದೇನೆ.

ಕ್ಯಾಪ್ಟನ್ ಗಣೇಶ್ ಕಾರ್ಣಿಕ್:- ಸನ್ಮಾನ್ಯ ಸಭಾಪತಿಯವರೇ, ಎಲ್ಲರೂ ತಮಗೆ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ಆದರೆ, ತಮ್ಮ ವಸ್ತ್ರ ವಿನ್ಯಾಸದ ಬಗ್ಗೆ ಹಗೂ ತಮ್ಮ ಸೂಟ್‌ನ ಬಗ್ಗೆ ಯಾರೂ ಮಾತನಾಡಲಿಲ್ಲ, ತಾವು ಇವತ್ತು ಬಹಳ ವಿಶೇಷವಾಗಿರುವಂತಹ ಡ್ರೆಸ್‌ನಲ್ಲಿ ಬಂದಿದ್ದೀರಿ, ಬಹಳ ವಿಶೇಷವಾಗಿ ಕಾಣುತ್ತಿದ್ದೀರಿ. ಇದು ನಮಗೆ ಖುಷಿಯನ್ನು ಕೊಡುತ್ತಿದೆ. ಅದಕ್ಕಾಗಿ ತಮ್ಮನ್ನು ಅಭಿನಂದಿಸುತ್ತಿದ್ದೇನೆ. ಮಾನ್ಯ ನಾಣಯ್ಯನವರು ಸಹ ಸೂಟ್ ಧರಿಸಿ ವಿಶೇಷವಾದ ರೀತಿಯಲ್ಲಿ ಡ್ರೆಸ್ ಮಾಡಿಕೊಂಡು ತಮಗೆ ಪ್ರತಿಸ್ಪರ್ಧಿ ರೀತಿಯಲ್ಲಿ ಬಂದಿದ್ದಾರೆ.

ಶ್ರೀ ವೀರಣ್ಣ ಮತ್ತಿಕಟ್ಟಿ:- ಸನ್ಮಾನ್ಯ ಸಭಾಪತಿಯವರೇ, ಶ್ರೀಮತಿ ಭಾರತಿ ಶೆಟ್ಟಿಯವರಲ್ಲಿ ಆಗಿರುವಂತಹ ಬದಲಾವಣೆಯನ್ನು ನೋಡಿ ನನಗೆ ಬಹಳ ಸಂತೋಷವಾಗಿದೆ. ಶ್ರೀಮತಿ ಮೋಟಮ್ಮನವರು ವಿರೋಧ ಪಕ್ಷದ ನಾಯಕಿಯಾಗಿದ್ದ ಸಂದರ್ಭದಲ್ಲಿ ಅವರು ಮಾತನಾಡುವಂತಹ ಸಂದರ್ಭದಲ್ಲಿ ಇವರು ಸಹ ಎದ್ದು ನಿಂತು ಮಾತನಾಡುತ್ತಿದ್ದರು. ಈಗ ಅವರ ಬಗ್ಗೆ ಭಾರತಿ ಶೆಟ್ಟಿಯವರು ಹೇಳಿದಂತಹ ಮಾತುಗಳನ್ನು ಕೇಳಿ ನನಗೆ ಸಂತೋಷವಾಯಿತು. ದೇವರು ಅವರಿಗೆ ಒಳ್ಳೆಯ ಬುದ್ಧಿಯನ್ನು ಕೊಟ್ಟಿದ್ದಾನೆ. ಅದಕ್ಕಾಗಿ ಧನ್ಯವಾದಗಳು ಅರ್ಪಿಸುತ್ತಿದ್ದೇನೆ.

ಶ್ರೀ ಯಂ.ಸಿ. ನಾಣಯ್ಯ:- ಸನ್ಮಾನ್ಯ ಸಭಾಪತಿಯವರೇ, ಶ್ರೀಮತಿ ಮೋಟಮ್ಮನವರ ವಿಚಾರವನ್ನು ಶ್ರೀಮತಿ ಭಾರತಿ ಶೆಟ್ಟಿಯವರು

ಉದಾಹರಣೆಯನ್ನಾಗಿ ತೆಗೆದುಕೊಂಡಿದ್ದಾರೆ ಅಷ್ಟೆ. ಅವರ ಚಿಂತನೆಯಲ್ಲಿ ಇರುವ ವಿಚಾರವೇನೆಂದರೆ, ರಾಷ್ಟ್ರ ಮಟ್ಟದಲ್ಲಿ ಮಹಿಳಾ ನಾಯಕಿಯಾಗಿ ಶ್ರೀಮತಿ ಸುಷ್ಮಾ ಸ್ವರಾಜ್‌ರವರು ಇದ್ದಾರೆ ಅವರನ್ನು ಕೆಳಗೆ ಹಾಕಿ ಬೇರೆಯವರನ್ನು ತರುವಂತಹ ಪ್ರಯತ್ನವನ್ನು ಆ ಪಕ್ಷದಲ್ಲಿ ಮಾಡುತ್ತಿರುವುದನ್ನು ಒಂದು ಮಟ್ಟದಲ್ಲಿ ಚುಚ್ಚಿ ಹೇಳುವುದಕ್ಕೋಸ್ಕರ ಶ್ರೀಮತಿ ಮೋಟಮ್ಮನವರ ಹೆಸರನ್ನು ಬಳಸಿಕೊಂಡಿದ್ದಾರೆ. ಶೋಭಾರವರ ವಿಚಾರವನ್ನು ಹೇಳುವುದಕ್ಕೆ ಶ್ರೀಮತಿ ಭಾರತಿ ಶೆಟ್ಟಿಯವರು ಮರೆತಿದ್ದಾರೆ. ಕುಮಾರಿ ಶೋಭಾರವರು ಮುಖ್ಯಮಂತ್ರಿ ಸ್ಥಾನ ಬೇಡವೆಂದು ಹೇಳಿದರೂ ಸಹ ಯಾರಿಗಾದರೂ ಆ ಹುದ್ದೆಯ ಆಕಾಂಕ್ಷೆ ಮನಸ್ಸಿನಲ್ಲಿ ಇದ್ದೇ ಇರುತ್ತದೆ. ಯಾರು ಬೇಡವೆಂದು ಹೇಳುವುದಿಲ್ಲ. ನಾಲ್ಕು ಜನರ ನಂತರ ಕುಮಾರಿ ಶೋಭಾರವರ ಹೆಸರು ಐದನೇ ಸ್ಥಾನದಲ್ಲಿ ಇದೆ. ನೋಡಬೇಕು ಯಾರು ಮುಖ್ಯಮಂತ್ರಿಗಳಾಗುತ್ತಾರೆಂದು.

ಶ್ರೀಮತಿ ಭಾರತಿ ಶೆಟ್ಟಿ:- ಸನ್ಮಾನ್ಯ ಸಭಾಪತಿಯವರೇ, ಅದು ರಾಜ್ಯಮಟ್ಟದಲ್ಲಿ ಆಗಿರಬಹುದು ಅಥವಾ ರಾಷ್ಟ್ರಮಟ್ಟದಲ್ಲಿ ಆಗಿರಬಹುದು ನಾನು ವ್ಯವಸ್ಥೆಯ ಬಗ್ಗೆ ಮಾತನಾಡುತ್ತಿದ್ದೇನೆ. ಉದಾಹರಣೆಗೆ ಹೇಳಬೇಕಾದರೆ, ಕ್ರೀಡಾ ಕ್ಷೇತ್ರದಲ್ಲಿಯೂ ಸಹ ಇದೇ ರೀತಿ ಆಗುತ್ತಿದೆ. ಸಾನಿಯಾ ಮಿರ್ಜಾ ಡಬ್ಬಲ್ಸ್‌ನಲ್ಲಿ ಆಡುವುದಿಲ್ಲ ಎಂದು ಹೇಳಿದ್ದರೂ ಸಹ ಅವಳ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಳ್ಳದೇ ಬೇರೆಯವರು ಬೇಡವೆಂದು ಬಿಟ್ಟವರನ್ನು ಅವಳ ಜೊತೆಗೆ ಡಬಲ್ಸ್‌ನಲ್ಲಿ ಆಡುವುದಕ್ಕೆ ಹಾಕಿದ್ದಾರೆ. ಮಹಿಳೆ ಎಂದ ತಕ್ಷಣ ಈ ವ್ಯವಸ್ಥೆ. ಇದು ಈ ಸಮಾಜದಲ್ಲಿ ಮಾತ್ರವಲ್ಲ ಎಲ್ಲ ಕಡೆಗಳಲ್ಲಿ ಇದೇ ರೀತಿ ಆಗುತ್ತಿದೆ ಎಂದು ಹೇಳುವುದಕ್ಕೆ ನಾನು ಈ ಉದಾಹರಣೆಯನ್ನು ಹೇಳಿದೆ.

ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು):- ಸನ್ಮಾನ್ಯ ಸಭಾಪತಿಯವರೇ, ನಾನು ವಿರೋದ ಪಕ್ಷದ ಉಪ ನಾಯಕನಾಗಿ ತಮ್ಮ ಆಯ್ಕೆಯ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸಿದೆ. ಈಗ ಪ್ರತಿಪಕ್ಷದ ನಾಯಕನಾಗಿ ಮತ್ತೊಮ್ಮೆ ತಮಗೆ ನನ್ನ ತುಂಬು ಹೃದಯದ ಶುಭ

ಕಾಮನೆಗಳನ್ನು ಈ ಸಂದರ್ಭದಲ್ಲಿ ಸಲ್ಲಿಸುವುದಕ್ಕೆ ಇಚ್ಛಿಸುತ್ತಿದ್ದೇನೆ. ಭಗವಂತ ತಮಗೆ ಆರೋಗ್ಯ ಸುಖ–ಸಂಪತ್ತು ಮತ್ತು ಸಮೃದ್ಧಿಯನ್ನು ಕಲ್ಪಿಸುವುದರ ಜೊತೆಗೆ ಶತಮಾನದ ಇತಿಹಾಸವನ್ನು ಹೊಂದಿರುವಂತಹ ಈ ಸದನದ ಕಾರ್ಯಕಲಾಪಗಳನ್ನು ಬಹಳಷ್ಟು ಅಚ್ಚುಕಟ್ಟುತನದಿಂದ ನಡೆಸಿಕೊಂಡು ಬಂದು ಇಡೀ ರಾಷ್ಟ್ರದಲ್ಲಿಯೇ ತಾವು ಆದರ್ಶ ಸಭಾಪತಿಗಳಾಗಿ ಪ್ರಸಿದ್ಧಿ ಗಳಿಸಲಿ ಎನ್ನುವ ಶುಭ ಹಾರೈಕೆಯನ್ನು ಈ ಸಂದರ್ಭದಲ್ಲಿ ಸಲ್ಲಿಸುತ್ತಾ, ಹೊಸದಾಗಿ ಆಯ್ಕೆ ಆಗಿ ಈ ಸದನವನ್ನು ಪ್ರವೇಶ ಮಾಡಿರುವಂತಹ ಎಲ್ಲ ಗೌರವಾನ್ವಿತ ಸದಸ್ಯರಿಗೂ ನನ್ನ ಪಕ್ಷದ ಪರವಾಗಿ ತುಂಬು ಹೃದಯದ ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ ಇಷ್ಟಪಡುತ್ತಿದ್ದೇನೆ. ನೂತನವಾಗಿ ಈ ಸದನವನ್ನು ಪ್ರವೇಶಿಸಿರುವಂತಹ ಮತ್ತು ಪುನರ್ ಆಯ್ಕೆಗೊಂಡು ಈ ಸದನವನ್ನು ಪುನ: ಪ್ರವೇಶ ಮಾಡಿರುವಂತಹ ಎಲ್ಲ ಸದಸ್ಯರು ಅತ್ಯುತ್ತಮ ಸಂಸದೀಯ ಪಟುಗಳಾಗಿ ಈ ನಾಡಿನಲ್ಲಿ ಮತ್ತು ಈ ರಾಷ್ಟ್ರದಲ್ಲಿ ಮಿಂಚಲಿ ಎಂದು ತಮ್ಮ ಮೂಲಕ ಹಾರೈಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ನನ್ನನ್ನು ವಿರೋಧ ಪಕ್ಷದ ನಾಯಕನೆಂದು ತಾವು ಘೋಷಣೆ ಮಾಡಿದ ಕೂಡಲೇ ಗೌರವಾನ್ವಿತ ಮುಖ್ಯಮಂತ್ರಿಗಳು ಮತ್ತು ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರಾದಂತಹ ಶ್ರೀ ಗೋವಿಂದ ಕಾರಜೋಳರವರು ಹಾಗೂ ಶ್ರೀಯುತರುಗಳಾದ ಭಾನುಪ್ರಕಾಶ್‌ರವರು, ಹುಲಿನಾಯ್ಕರ್‌ರವರು, ಪ್ರೋ:ದೊಡ್ಡರಂಗೇಗೌಡರು, ನಜೀರ್ ಅಹಮದ್‌ರವರು, ಪುಟ್ಟಸ್ವಾಮಿಯವರು, ಅಮರನಾಥ್ ಪಾಟೀಲ್‌ರವರು ವೀರಯ್ಯನವರು ಶಿವರಾಜ್ ಸಜ್ಜನ್‌ರವರು, ನಾರಾಯಣ ಸಾ ಬಾಂಡಗೆಯವರು ಮತ್ತು ಶ್ರೀಮತಿ ಭಾರತಿ ಶೆಟ್ಟಿಯವರು ನನಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ ತಮ್ಮ ಮೆಚ್ಚುಗೆಯನ್ನು ಸಹ ವ್ಯಕ್ತಪಡಿಸಿದ್ದಾರೆ ಅವರೆಲ್ಲರಿಗೂ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತಿದ್ದೇನೆ. ಮಾನ್ಯ ಶಿವರಾಜ್ ಸಜ್ಜನ್ ಅವರು ಮಾತನಾಡುತ್ತಾ 25 ಸದಸ್ಯರ ಬಲವನ್ನು ಹೊಂದಿರುವಂತಹ ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾಗಿ ಪ್ರತಿಪಕ್ಷದ ನಾಯಕನಾಗಿರುವಂತಹ ನನ್ನ ಮೇಲೆ ಇನ್ನು ಹೆಚ್ಚಿನ ಜವಾಬ್ದಾರಿ ಇದೆ. ಸ್ಥಳೀಯ ಸಂಸ್ಥೆಗಳ

ಬಲವರ್ಧನೆ ಮಾಡುವಂತಹ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತನಾಗಬೇಕೆನ್ನುವ ಸೂಚನೆಯನ್ನು ನೀಡಿದ್ದಾರೆ. ಅವರ ಆ ಮಾತುಗಳನ್ನು ನಾನು ಪಾಲನೆ ಮಾಡುತ್ತೇನೆ ಎನ್ನುವಂತಹ ಮಾತುಗಳನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾರಾಯಣ ಸಾ ಭಾಂಡಗೆಯವರು ನನ್ನ ಊರಿನವರು, ನನ್ನ ಜಿಲ್ಲೆಯವರು ಮತ್ತು ಬಹಳ ವರ್ಷಗಳ ಸ್ನೇಹ ನಮ್ಮಿಬ್ಬರ ಮಧ್ಯೆ ಇದೆ. ಅವರು ಮಾತನಾಡುತ್ತಾ, ನಾನೊಬ್ಬ 'ಪಕ್ಷಾತೀತ ನಾಯಕ' ಎಂದು ಹೇಳಿದರು. ಎದುರಾಳಿಗಳು ಯಾರೇ ಆಗಿರಲಿ ಅವರು ಅತ್ಯುತ್ತಮವಾಗಿರುವಂತಹ ಕೆಲಸವನ್ನು ಮಾಡಿದರೆ ಅವರಿಗೆ ಮೊದಲು ಹೋಗಿ ಹಾರ ಹಾಕಿ ಅಭಿನಂದನೆಯನ್ನು ಸಲ್ಲಿಸುವಂತಹ ಕೆಲಸವನ್ನು ಮಾಡುವ ಸ್ವಾಭಾವ ನನ್ನದು. ವಿರೋಧ ಪಕ್ಷದವರು ಎಂದರೆ ಒಳ್ಳೆಯದು ಮಾಡಿದರೂ ಟೀಕೆ ಮಾಡುವುದೇ ನಮ್ಮ ಕೆಲಸವಾಗಬಾರದು. ಅವರ ಪಕ್ಷದಿಂದ ಒಳ್ಳೆಯ ಕೆಲಸ ಮಾಡಿದರೆ, ಒಳ್ಳೆಯ ಕೆಲಸ ಮಾಡಿದ್ದಾರೆ ಎಂದು ಶಹಭಾಷ್‌ಗಿರಿಯನ್ನು ಕೊಡಬೇಕಾಗುತ್ತದೆ. ನಾವೆಲ್ಲರೂ ಜನಪರ ಕೆಲಸಕ್ಕೆ ಬೆಂಬಲವನ್ನು ಕೊಡಬೇಕಾಗುತ್ತದೆ. ಗೌರವಾನ್ವಿತ ಮುಖ್ಯಮಂತ್ರಿಗಳು, 'ಆಳುವ ಪಕ್ಷ ಮತ್ತು ವಿರೋಧ ಪಕ್ಷಗಳು ರಥದ ಎರಡು ಚಕ್ರಗಳಂತೆ. ಮತ್ತು ಒಂದು ನಾಣ್ಯದ ಎರಡು ಮುಖಗಳಂತೆ. ಒಂದು ಮುಖ ಸವಕಳಿ ಆದರೆ, ಆ ನಾಣ್ಯ ಚಲಾವಣೆ ಆಗುವುದಿಲ್ಲ ಅಥವಾ ರಥದ ಗಾಲಿಗಳಲ್ಲಿ ಏನಾದರೂ ಏರುಪೇರುಗಳಾದರೆ ಆ ರಥ ಮುಂದೆ ಹೋಗುವುದಿಲ್ಲ. ಆ ದೃಷ್ಟಿಯಿಂದ ಜನರ ಕಲ್ಯಾಣದ ವಿಚಾರವಾಗಿ ಆಳುವ ಪಕ್ಷದ ಮೇಲೆ ಎಷ್ಟು ಜವಾಬ್ದಾರಿ ಇದೆಯೋ ಅಷ್ಟೇ ಜವಾಬ್ದಾರಿಯನ್ನು ವಿರೋಧ ಪಕ್ಷಗಳು ಹೊಂದಿವೆ' ಎನ್ನುವಂತಹ ಅರ್ಥಪೂರ್ಣವಾದ ಮಾತುಗಳನ್ನು ಹೇಳಿದ್ದಾರೆ. ಆಡಳಿತ ಪಕ್ಷದವರು ಚೆನ್ನಾಗಿ ಕೆಲಸ ಮಾಡಿ ಜನರ ಮೆಚ್ಚುಗೆಯನ್ನು ಗಳಿಸಿದಾಗಲೂ 'ಮೊಸರಿನಲ್ಲಿ ಕಲ್ಲು ಹುಡುಕುವ' ಪ್ರವೃತ್ತಿ ನನ್ನಲ್ಲಿ ಇಲ್ಲ. ಈ ಮಾತನ್ನು ಖಡಾಖಂಡಿತವಾಗಿ ಹೇಳುತ್ತಿದ್ದೇನೆ. ತಪ್ಪು ಮಾಡಿದಾಗ, ಜನವಿರೋಧಿ ಕೆಲಸಗಳನ್ನು ಮಾಡಿದಾಗ ಅದನ್ನು ಚುಚ್ಚಿ, ಅವರನ್ನು ಎಚ್ಚರಿಸಿ ಜನಪರ ಕೆಲಸ ಮಾಡುವುದಕ್ಕೆ ಪ್ರೇರಣೆ ನೀಡುವಂತಹ ವ್ಯಕ್ತಿ ನಾನು. ಆದ್ದರಿಂದ

ನಾರಾಯಣ ಸಾ ಬಾಂಡಗೆ ಅವರು, ನನ್ನನ್ನು ಪಕ್ಷತೀತ ನಾಯಕನೆಂದು ಕರೆದಿದ್ದಾರೆ ಮತ್ತು ಸಂಘ ಪರಿಹಾರದ ಕೆಲಸಗಳಿಗೆ ಮೌನವಾಗಿ ಸಮ್ಮತಿಯನ್ನು ವ್ಯಕ್ತಪಡಿಸಿದ್ದೇನೆ ಎನ್ನುವಂತಹ ಮಾತುಗಳನ್ನು ಹೇಳಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ ಸೇರುವಂತಹ ಸಮಯದಲ್ಲಿ ನನ್ನದೇ ಆಗಿರುವಂತಹ ರಾಜಕೀಯ ಸಿದ್ಧಾಂತಗಳು ಮತ್ತು ಬದ್ಧತೆಗಳು ಇದ್ದವು. ರಾಷ್ಟ್ರಕ್ಕೆ ಸ್ವಾತಂತ್ರ್ಯವನ್ನು ತಂದು ಕೊಟ್ಟಂಥ ಬಹು ದೊಡ್ಡ ಸಾಧನೆಯನ್ನು ಮಾಡಿರುವಂತಹ ಜಾತ್ಯಾತೀತ ಪಕ್ಷವಾಗಿರುವಂತಹ ಕಾಂಗ್ರೆಸ್ ಪಕ್ಷದಲ್ಲಿ ನಾನಿರುವಾಗ ಆ ಪಕ್ಷದ ಪ್ರಣಾಳಿಕೆ ಮತ್ತು ಸಿದ್ಧಾಂತಗಳಲ್ಲಿ ವಿಶ್ವಾಸವನ್ನು ಇಟ್ಟು ಆ ಪಕ್ಷಕ್ಕೆ ಅನುಗುಣವಾಗಿ ನಡೆಯುವಂತಹ ಸ್ವಾಭಾವ ನನ್ನದು. ನನಗೆ ಜಾತ್ಯಾತೀತ ಸಿದ್ಧಾಂತದಲ್ಲಿ ಅಚಲವಾಗಿರುವಂತಹ ನಂಬಿಕೆ ಮತ್ತು ವಿಶ್ವಾಸಗಳಿವೆ. ಆದ್ದರಿಂದ ಪಕ್ಷದ ನಿಯಮ ಸಿದ್ಧಾಂತಗಳು ನನಗೆ ಮುಖ್ಯ. ನನ್ನ ಕಡು ವೈರಿ ಉತ್ತಮವಾಗಿರುವಂತಹ ಕೆಲಸವನ್ನು ಮಾಡಿದರೆ ಅವನ ಮನೆಗೆ ಹೋಗಿ ಹಾರವನ್ನು ಹಾಕಿ, 'ಒಳ್ಳೆಯ ಕೆಲಸ ಮಾಡಿದ್ದಿಯಾ' ಎಂದು ಹೇಳುವಂತಹ ಪ್ರವೃತ್ತಿ ನನ್ನದಾಗಿದೆ. ನಾರಾಯಣ ಸಾ ಭಾಂಡಗೆಯವರು ನನ್ನ ಊರಿನವರೇ ಆಗಿರುವುದರಿಂದ ಅವರಿಗೆ ನನ್ನ ಬಗ್ಗೆ ಬಹಳ ಅಭಿಮಾನವಿದೆ.

ಸನ್ಮಾನ್ಯ ಸಭಾಪತಿಯವರೇ, ಶ್ರೀಮತಿ ಭಾರತಿ ಶೆಟ್ಟಿಯವರು ಹೇಳಿದಂತಹ ಮಾತುಗಳಿಗೆ ಹಿಂದಿನ ವಿರೋಧ ಪಕ್ಷದ ನಾಯಕರು ಅತ್ಯಂತ ಸಮರ್ಥವಾಗಿ ಉತ್ತರವನ್ನು ಕೊಟ್ಟಿದ್ದಾರೆ.

ಆದ್ದರಿಂದ ನಾನು ಅ ಗೊಡವೆಗೆ ಹೋಗುವುದಿಲ್ಲ. ಶ್ರೀಮತಿ ಮೋಟಮ್ಮನವರು ಅಖಿಲ ಭಾರತ ಕಾಂಗ್ರೆಸ್ ಪಕ್ಷದ ಅಧ್ಯಕ್ಷಣಿಯವರಿಗೆ, 'ನಾನು ಈ ಬಾರಿ ಸದಸ್ಯಳಾಗಿ ಆಯ್ಕೆ ಹೊಂದಿದರು ಸಹ ಬೇರೆಯವರಿಗೆ ಅವಕಾಶ ಸಿಕ್ಕಿದರೆ ಅವರಿಗೆ ವಿರೋಧ ಪಕ್ಷದ ನಾಯಕರ ಸ್ಥಾನವನ್ನು ನೀಡಿ' ಎಂದು ತುಂಬು ಹೃದಯದಿಂದ ನಮ್ಮ ಪರಮೋಚ್ಛ ನಾಯಕಿಯವರಿಗೆ ಹೇಳಿದ್ದರು. ಆದ್ದರಿಂದ 'ಒಬ್ಬ ಮಹಿಳೆಯನ್ನು ಆ ಸ್ಥಾನದಿಂದ ಸರಿಸಿ ಎಸ್.ಆರ್.ಪಾಟೀಲ್ ಅವರನ್ನು ಆಯ್ಕೆ ಮಾಡಿದ್ದಾರೆ' ಎನ್ನುವಂತಹ ತಪ್ಪು

ಸಂದೇಶ ಹೋಗಬಾರದು ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಶ್ರೀಮತಿ ಮೋಟಮ್ಮನವರು ವಿರೋಧ ಪಕ್ಷದ ನಾಯಕಿಯಾಗಿದ್ದಂತಹ ಸಂದರ್ಭದಲ್ಲಿ ನನ್ನನ್ನು ವಿರೋಧ ಪಕ್ಷದ ಉಪ ನಾಯಕನ ಸ್ಥಾನವನ್ನು ಕೊಟ್ಟಿದ್ದರಿಂದ ಸುಲಭವಾಗಿ ನಾನು ಈ ಸ್ಥಾನಕ್ಕೆ ಬರಲು ಸಾಧ್ಯವಾಯಿತು. ಆದ್ದರಿಂದ ಈಗಿನ ನನ್ನ ಆಯ್ಕೆಯಲ್ಲಿ ಅವರದು ಸಿಂಹ ಪಾಲಿದೆ ಎಂದರೆ ಅತಿಶಯೋಕ್ತಿ ಆಗಲಾರದು. ಅದಕ್ಕಾಗಿ ನಾನು ಅವರಿಗೆ ಕೃತಜ್ಞನಾಗಿದ್ದೇನೆ. ಕಳೆದ ಎರಡು ವರ್ಷಗಳಲ್ಲಿ ಯಾವ ನಾಯಕರನ್ನೂ ನಾನು ಈ ಬಗ್ಗೆ ಭೇಟಿ ಮಾಡುವುದಕ್ಕೆ ಹೋಗಿಲ್ಲ. ಪಕ್ಷದ ವರಿಷ್ಠರು ತೆಗೆದುಕೊಂಡ ನಿರ್ಣಯವನ್ನು ಕಾಯಾ ವಾಚಾ ಮನಸಾ ಮಾಡುವುದಷ್ಟೇ ನನ್ನ ಕರ್ತವ್ಯವಾಗಿದೆ. ಶಿಸ್ತಿನ ಸಿಪಾಯಿಯಾಗಿ ನಾನು ಕೆಲಸ ಮಾಡಬೇಕಾಗಿದೆ. ಅವಕಾಶ ಸಿಕ್ಕಿದರೆ ಕೆಲಸ ಮಾಡುವುದು ಇಲ್ಲದಿದ್ದರೆ ನಾನು ಯಾವ ಸ್ಥಾನದಲ್ಲಿ ಇದ್ದೇನೆ ಅಲ್ಲಿಂದಲೇ ನಿಷ್ಠೆಯಿಂದ, ಪ್ರಾಮಾಣಿಕತೆಯಿಂದ ಮತ್ತು ದಕ್ಷತೆಯಿಂದ ಕೆಲಸ ಮಾಡಬೇಕೆನ್ನುವ ಮನೋಭಾವದಿಂದ ಈ ಸ್ಥಾನವನ್ನು ಅಲಂಕರಿಸುತ್ತಿದ್ದೇನೆ.

ಅದರಲ್ಲಿ ಪ್ರಮುಖವಾಗಿ ನಮ್ಮ ಕಾಂಗ್ರೆಸ್ ಪಕ್ಷದ ಪರಮೋಚ್ಛ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧ್ಯಕ್ಷಣಿಯಾದಂತಹ ಮತ್ತು ಪಕ್ಷದ ಪರಮೋಚ್ಛ ನಾಯಕಿಯಾದಂತಹ ಶ್ರೀಮತಿ ಸೋನಿಯಾ ಗಾಂಧಿಯವರು ಹಾಗೂ ನಮ್ಮ ರಾಜ್ಯದ ಕೇಂದ್ರದಲ್ಲಿ ಮಂತ್ರಿಗಳಿರುವಂತಹ ವಿದೇಶಾಂಗ ಸಚಿವರಾದಂತಹ ಶ್ರೀಮಾನ್ ಎಸ್.ಎಂ. ಕೃಷ್ಣರವರು ಮತ್ತು ಕಂಪನಿ ವ್ಯವಹಾರಗಳನ್ನು ನೋಡಿಕೊಳ್ಳುವಂತಹ ಕೇಂದ್ರ ಸಚಿವರಾದಂತಹ ಶ್ರೀಮಾನ್ ವೀರಪ್ಪ ಮೊಯ್ಲಿಯವರು ಮತ್ತು ಕಾರ್ಮಿಕ ಸಚಿವರಾದಂತಹ ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆ ಯವರು ಮತ್ತು ರೈಲ್ವೆ ಉಸ್ತುವಾರಿಯನ್ನು ನೋಡಿಕೊಳ್ಳುವಂತಹ ಶ್ರೀಮಾನ್ ಮುನಿಯಪ್ಪನವರು, ಇವರಲ್ಲದೆ ನಮ್ಮ ಪಕ್ಷದ ಇನ್‌ಚಾರ್ಜ್ ಇದ್ದಂತಹ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಗಳಾದಂತಹ ಶ್ರೀಮಾನ್ ಮಿಸ್ತ್ರಿಯವರು ಮತ್ತು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳಾದಂತಹ ಶ್ರೀಮಾನ್ ಹನುಮಂತರಾವ್‌ರವರು, ಶ್ರೀಮಾನ್ ಶಾಂತಾರಾಮ್ ನಾಯಕ್‌ರವರು, ಅದರ

ಜೊತೆಗೆ ನಮ್ಮ ರಾಜ್ಯದ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರದಂತಹ ಡಾ॥ ಪರಮೇಶ್ವರ್‌ರವರು, ಶಾಸಕಾಂಗ ಪಕ್ಷದ ನಾಯಕರಾದಂತಹ ಶ್ರೀಮಾನ್ ಸಿದ್ದರಾಮಯ್ಯನವರು ಮತ್ತು ನನ್ನ ಪಕ್ಷದ ಎಲ್ಲಾ ಸದಸ್ಯರು, ವಿಶೇಷವಾಗಿ ನಮ್ಮ ಪಕ್ಷದ ಹಿಂದಿನ ಪ್ರತಿಪಕ್ಷ ನಾಯಕರಾದ ಮೊಟಮ್ಮನವರ ಸಹಕಾರದಿಂದ ಇವತ್ತು ನಾನು ವಿರೋಧ ಪಕ್ಷದ ನಾಯಕನಾಗಿದ್ದೇನೆ ಎನ್ನುವ ಮಾತನ್ನು ಕೂಡ ಈ ಸಂದರ್ಭದಲ್ಲಿ ವ್ಯಕ್ತ ಮಾಡುವುದಕ್ಕೆ ನನಗೆ ಬಹಳ ಸಂತೋಷವಾಗುತ್ತಿದೆ. ನಾನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಪ್ರತಿಪಕ್ಷ ನಾಯಕನ ಸ್ಥಾನ ಸರಳವಾದಂತಹ ಕೆಲಸವಲ್ಲ. ಈ ರಾಜ್ಯದ ಮುಖ್ಯಮಂತ್ರಿಯಾಗಿ ಆರಾಮದಿಂದ ಕೆಲಸ ನಿರ್ವಹಿಸಬಹುದು ಅಥವಾ ಅದಕ್ಕಿಂತ ಸುಲಭವಾಗಿರುವುದೆಂದರೆ ಮಂತ್ರಿಯಾಗಿ ಕೆಲಸ ನಿರ್ವಹಿಸುವುದು. ಆದರೆ, ಪ್ರತಿಪಕ್ಷ ನಾಯಕನ ಹುದ್ದೆ ಬಹಳ ಗುರುತರವಾದ ಮತ್ತು ಬಹಳ ಹೊಣೆಗಾರಿಕೆಯನ್ನು ಹೊಂದಿದ್ದಂತಹ ಒಂದು ಮಹತ್ವದ ಹುದ್ದೆ ಎಂದು ನಾನು ಭಾವಿಸಿದ್ದೇನೆ. ನನ್ನ ಜವಾಬ್ದಾರಿಯನ್ನು ಎಷ್ಟರ ಮಟ್ಟಿಗೆ ನಿರ್ವಹಿಸುತ್ತೇನೆ ಎಂಬುದು ಮುಂದಿನ ದಿನಮಾನಗಳಲ್ಲಿ ತಾವೆಲ್ಲರೂ ನೋಡಬಹುದು. I have to prove my mettle. I have to work hard, work day and night. ಆದರೆ, ಪ್ರತಿಪಕ್ಷದಲ್ಲಿದ್ದುಕೊಂಡು ಬರೀ ಆಡಳಿತ ಪಕ್ಷವನ್ನು ಟೀಕೆ ಮಾಡುವಂತಹ ಪ್ರವೃತ್ತಿ ನಮಗಿಲ್ಲವೆಂದು ನಾನು ಈಗಾಗಲೇ ಹೇಳಿದ್ದೇನೆ. ನಮ್ಮ ಎಲ್ಲಾ ಟೀಕೆಗಳು ಈ ರಾಜ್ಯದ ಜನತೆಯ ಕಲ್ಯಾಣದತ್ತ ಕೇಂದ್ರೀಕೃತವಾಗಿರಬೇಕು. ಎಲ್ಲಿ ಆಡಳಿತ ಪಕ್ಷದವರು ತಪ್ಪು ಮಾಡುತ್ತಾರೆ ಆ ತಪ್ಪನ್ನು ಎತ್ತಿ ತೋರಿಸಿ ಅವರನ್ನು ಸರಿ ದಾರಿಗೆ ತಂದು ನಮ್ಮ ರಾಜ್ಯದ ಜನತೆಗೆ ಕಲ್ಯಾಣವಾಗುವಂತಹ ಕೆಲಸದಲ್ಲಿ ಅವರನ್ನು ಮತ್ತೊಮ್ಮೆ ತೊಡಗಿಸುವ ಕೆಲಸವನ್ನು ಪ್ರತಿಪಕ್ಷ ಮಾಡುವಂತಹ ಮಹತ್ತರವಾದ ಒಂದು ಕೆಲಸವೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆ ದೃಷ್ಟಿಯಿಂದ ನಾನು ಒಂದು ಮಾತಿನಲ್ಲಿ ಹೇಳುವುದಾದರೆ ಆಳುವ ಪಕ್ಷವೆಂದರೆ ಮಹಾಪೂರ ಬಂದಂತಹ ನದಿ ಇದ್ದ ಹಾಗೆ. ಮಹಾಪೂರ ಬಂದಾಗ ಹೊಳೆ ತುಂಬಿ ಹರಿಯುತ್ತದೆ. ನಮ್ಮ ಕಡೆ ಹುಚ್ಚು ಹೊಳೆ ಎಂದು ಹೇಳುತ್ತೇವೆ. ಆ ಹೊಳೆ ಜನರನ್ನು

ಕೊಚ್ಚಿಕೊಂಡು ಹೋಗಬಹುದು, ಆಸ್ತಿಗಳನ್ನು ಕೊಚ್ಚಿಕೊಂಡು ಹೋಗಬಹುದು. ಆಳುವ ಪಕ್ಷವೆಂದರೆ ಅಷ್ಟು ಪ್ರಬಲವಾಗಿ ಮುನ್ನಡೆಯುವಂತಹ ಒಂದು ಮಹಾಪೂರ ಬಂದಂತಹ ನದಿ ಇದ್ದ ಹಾಗೆ. We have to put embankments. ಹೊಳೆಗೆ embankments, ಅಡೆ–ತಡೆಗಳನ್ನು ಹಾಕಿದರೆ ಅದು ಹುಚ್ಚು ಹುಚ್ಚಾಗಿ ಹರಿಯಲಾರದೆ ವ್ಯವಸ್ಥಿತವಾಗಿ ಸರಿ ದಾರಿಯಲ್ಲಿ ಮುನ್ನಡೆಯುತ್ತದೆ. ಪ್ರಾಣ ಹಾನಿ, ಆಸ್ತಿ ಹಾನಿ ಆಗಲಾರದ ಹಾಗೆ ಮಾಡುವಂತಹ ಜವಾಬ್ದಾರಿ ಪ್ರತಿಪಕ್ಷಗಳ ಮೇಲೆ ಮತ್ತು ನನ್ನ ಮೇಲೆ ಇದೆ ಎನ್ನುವುದನ್ನು ನೆನಪಿಸುಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ಮತ್ತೊಂದು ಮಾತಿನಲ್ಲಿ ಹೇಳುವುದೇನೆಂದರೆ ಆಡಳಿತ ಪಕ್ಷ ಮದ ಬಂದ ಆನೆ ಇದ್ದ ಹಾಗೆ. ಪ್ರತಿಪಕ್ಷದ ಕೆಲಸ ಏನೆಂದರೆ, ಮಾವುತನ ಕೆಲಸ. ಮಾವುತ ಅಂಕುಶ ಹಿಡಿದುಕೊಂಡು ಆನೆಯನ್ನು ಸರಿ ದಾರಿಗೆ ಮುನ್ನೆಡೆಸುವಂತಹ ಕೆಲಸವನ್ನು ಮಾಡುತ್ತಾನೆ. ಅದೇ ರೀತಿಯ ಕೆಲಸವನ್ನು ಇವತ್ತು ಪ್ರತಿಪಕ್ಷಗಳು, ಪ್ರತಿಪಕ್ಷದ ನಾಯಕರು, ಪ್ರತಿಪಕ್ಷದ ಎಲ್ಲಾ ಸದಸ್ಯರು ಮಾಡಬೇಕೆನ್ನುವುದನ್ನು ನಾವು ಅರ್ಥ ಮಾಡಿಕೊಂಡು ಆ ದಿಸೆಯಲ್ಲಿ ನಾವು ಕೆಲಸ ಕಾರ್ಯಗಳನ್ನು ಮಾಡಬೇಕು. ಇವತ್ತು ಆಳುವ ಪಕ್ಷದಲ್ಲಿ ನೀವಿರಬಹುದು, ನಾಳೆ ನಾವಿರಬಹುದು. ಆದ್ದರಿಂದ, ಆಳುವ ಪಕ್ಷಕ್ಕೆ ನಾನೇನು ವ್ಯಾಖ್ಯಾನ ಮಾಡಿದ್ದೇನೆ ಅದು ನಿಮಗೆ ನೇರವಾಗಿ ಹೇಳುತ್ತಿದ್ದೇನೆಂದು ತಿಳಿದುಕೊಳ್ಳಬೇಡಿ. ಆಳುವ ಪಕ್ಷದ ಬಗ್ಗೆ ನನ್ನ ವ್ಯಾಖ್ಯಾನ ಮಾಡಿದ್ದೇನೆ. ಅಧಿಕಾರದಲ್ಲಿ ನಮ್ಮ ಪಕ್ಷ ಬಂದರೆ ಆಗ ಈ ವ್ಯಾಖ್ಯಾನ ನಮಗೂ ಅನ್ವಯವಾಗುತ್ತದೆ. ಆ ದೃಷ್ಟಿಯಿಂದ ಅಂತಹ ಒಂದು ಮಹತ್ತರವಾದಂತಹ ಕೆಲಸ ಇವತ್ತು ನಾವು ಮಾಡಬೇಕಾಗಿದೆ. ಒಂದು ಮಾತು ಏನೆಂದರೆ, ಕುರ್ಚಿಯಲ್ಲಿ ಕುಳಿತಿರುವಂತಹ ವ್ಯಕ್ತಿ ಕುರ್ಚಿಗಿಂತ ಕುಬ್ಜನಾಗಬಾರದು. ಕುರ್ಚಿಯಿಂದ ನಮಗೆ ಗೌರವ ಬರಬಾರದು. ಎಸ್.ಆರ್. ಪಾಟೀಲ್ ಪ್ರತಿಪಕ್ಷದ ನಾಯಕ ಅಂದ ಕೂಡಲೇ ಎಸ್.ಆರ್. ಪಾಟೀಲ್‌ಗೆ ಗೌರವ ಬರುತ್ತದೆ ಎಂದರೆ ನಾನು ಅರ್ಹನಲ್ಲ ಎಂದು ಭಾವಿಸುತ್ತೇನೆ. ಕುರ್ಚಿಗಿಂತ ಎತ್ತರವಾಗಿ ನಾವು ಇರಬೇಕಾಗುತ್ತದೆ. ಕುರ್ಚಿಯಲ್ಲಿ ನಾವು ಕುಬ್ಜರಾಗಿ ಕುಳಿತು ಉತ್ಸವ

ಮೂರ್ತಿಗಳಾಗಿದ್ದರೆ ಆ ಕುರ್ಚಿಗೆ ಗೌರವ ಇರುವುದ್ದಿಲ್ಲ. ಯಾವ ವ್ಯಕ್ತಿ ಆ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಾನೆ, ಆ ವ್ಯಕ್ತಿಯ ವ್ಯಕ್ತಿತ್ವದಿಂದ ಆ ಕುರ್ಚಿಗೆ ಗೌರವ ಬರಬೇಕೇ ಹೊರತು ಆ ಕುರ್ಚಿಯ ಸ್ಥಾನದಿಂದ ವ್ಯಕ್ತಿಗೆ ಗೌರವ ಬರುವಂತಹದು ಆದರೆ ಆ ವ್ಯಕ್ತಿ ಸರಿಯಾಗಿ ನಿಭಾಯಿಸುತ್ತಾನೆ ಎಂದು ತಾವು ಭಾವಿಸಬಾರದು. ಆ ದಿಸೆಯಲ್ಲಿ ಪ್ರಾಮಾಣಿಕವಾದಂತಹ ಪ್ರಯತ್ನ ಮಾಡಿ ಕುರ್ಚಿಗಿಂತ ಎತ್ತರವಾಗಿ ಕೆಲಸ ಮಾಡುವಂತಹ ಕಾರ್ಯವನ್ನು ನಾನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈಗಾಗಲೇ ನಾನು ಹೇಳಿದ ಹಾಗೆ ಪ್ರತಿಪಕ್ಷ ನಾಯಕನಾಗಿ ರಚನಾತ್ಮಕ ಟೀಕೆಗಳನ್ನು ಮಾಡುತ್ತೇನೆಯೇ ಹೊರತು ಟೀಕೆಗಾಗಿ ಟೀಕೆ ಮಾಡುವುದಿಲ್ಲ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಜೊತೆಗೆ, ಜನಪರ ಕಲ್ಯಾಣದತ್ತ ಲಕ್ಷ್ಯ ವಹಿಸಿ ನಾಡಿನ ಜನತೆಯ ಒಳಿತಿಗಾಗಿ, ಉನ್ನತಿಗಾಗಿ, ಶ್ರೇಯೋಭಿವೃದ್ಧಿಗಾಗಿ ಪ್ರತಿಪಕ್ಷದ ನಾಯಕನ ಜವಾಬ್ದಾರಿಯನ್ನು ಏನು ವಹಿಸಿಕೊಂಡಿದ್ದೇನೆ, ಆ ಜವಾಬ್ದಾರಿಯನ್ನು ಕಾಯಾ, ವಾಚಾ, ಮನಸಾ, ಮಾಡುತ್ತೇನೆ ಎನ್ನುವಂತಹ ವಿಚಾರವನ್ನು ಕೂಡ ಈ ಸಂದರ್ಭದಲ್ಲಿ ನಾನು ವ್ಯಕ್ತ ಮಾಡುತ್ತೇನೆ. ಶತಮಾನದ ಇತಿಹಾಸವನ್ನು ಹೊಂದಿದ್ದಂತಹ ಈ ಸದನದ ಘನತೆ, ಗೌರವವನ್ನು ಕೂಡಾ ಇನ್ನಷ್ಟು ಎತ್ತರಿಸುವುದಕ್ಕೆ ಪ್ರತಿಪಕ್ಷದವರು ಪ್ರಾಮಾಣಿಕವಾದ ಕೊಡುಗೆಯನ್ನು ನೀಡುತ್ತೇವೆ ಎನ್ನುವಂತಹ ಮಾತನ್ನು ಕೂಡ ಈ ಸಂದರ್ಭದಲ್ಲಿ ನಾನು ವ್ಯಕ್ತ ಮಾಡುತ್ತೇನೆ. ಯಾವ ವ್ಯಕ್ತಿಯ ಬಗ್ಗೆಯೇ ಆಗಲಿ, ಮುಖ್ಯಮಂತ್ರಿ ಇರಬಹುದು, ಮಂತ್ರಿ ಇರಬಹುದು, ಯಾವುದೇ ರಾಗ, ದ್ವೇಷ ಇಟ್ಟುಕೊಳ್ಳದೆ, ಪೂರ್ವಾಗ್ರಹ ಪೀಡಿತನಾಗದೆ ಮತ್ತು ಯಾವುದೇ ಆಸೆ ಆಮಿಷಗಳಿಗೆ ಒಳಗಾಗದೆ ಅತ್ಯಂತ ಪ್ರಾಮಾಣಿಕತೆಯಿಂದ, ನಿಷ್ಠೆಯಿಂದ, ದಕ್ಷತೆಯಿಂದ, ಸೇವಾ ಮನೋಭಾವದಿಂದ, ಕರ್ತರ್ವ್ಯ ಪ್ರಜ್ಞೆಯಿಂದ, ಕರ್ತವ್ಯವೇ ದೇವರು ಎಂಬ ಭಾವನೆಯಿಂದ ಈ ಕೆಲಸ–ಕಾರ್ಯಗಳನ್ನು ನಿರ್ವಹಿಸುವಂತಹ ಸಂಕಲ್ಪ ಮಾಡಿದ್ದೇನೆ ಎಂದು ಹೇಳಬಯಸುತ್ತೇನೆ. ಆ ದಿಸೆಯಲ್ಲಿ ಮುನ್ನೆಡೆಯುತ್ತೇನೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಈ ಒಂದು ಅತ್ಯಂತ ಗುರುತರವಾದಂತಹ ಮತ್ತು ಜವಾಬ್ದಾರಿಯುತವಾದ

ಸ್ಥಾನವನ್ನು ನಿಭಾಯಿಸುವುದಕ್ಕೆ ತಮ್ಮ ಸಹಕಾರವನ್ನು ಕೂಡ ನಾನು ಅಪೇಕ್ಷೆ ಮಾಡುತ್ತಿದ್ದೇನೆ. ಪ್ರತಿಪಕ್ಷ ನಾಯಕನಿಗೆ ಸಾಕಷ್ಟು ಪ್ರಿವಿಲೇಜೆಸ್ ಇರುತ್ತದೆ. ನಾನು ನೋಡಿದ್ದೇನೆ, ನಮ್ಮ ಹಿಂದಿನ ಪ್ರತಿಪಕ್ಷ ನಾಯಕಿಯಾಗಿದಂತಹ ಶ್ರೀಮತಿ ಮೋಟಮ್ಮನವರಿಗೆ ತಾವು ಸಾಕಷ್ಟು ಸಹಾಯ, ಸಹಕಾರವನ್ನು ನೀಡಿದ್ದೀರಿ. ಮುಂದಿನ ದಿನಮಾನಗಳಲ್ಲಿಯೂ ಅದೇ ರೀತಿಯ ಸಹಕಾರ ನೀಡಬೇಕೆಂದು ಕೋರುತ್ತೇನೆ. ನಾನು ಪ್ರಥಮ ಬಾರಿಗೆ ಪ್ರತಿಪಕ್ಷ ನಾಯಕನಾಗಿರುವಂಥವನು. ಮೊದಲು ಮಂತ್ರಿಯಾಗಿಯೂ ಕೂಡ ಕೆಲಸ ಮಾಡಿಲ್ಲ. ಆದರೆ, ನನಗೊಂದು ಇತಿಹಾಸವಿದೆ. ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆ ಈ ರಾಜ್ಯದಲ್ಲಿ ಪ್ರಥಮ ಬಾರಿಗೆ ಬಂದಂತಹ ಸಂದರ್ಭದಲ್ಲಿ ಅಖಂಡ ಬಿಜಾಪುರ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ತಿನ ಪ್ರತಿಪಕ್ಷದ ನಾಯಕನಾಗಿ ಕೆಲಸ ನಿರ್ವಹಿಸಿದ್ದೇನೆ. ಆಗ ನಾನು ಮಾಡಿದಂತಹ ಕೆಲಸ ನನಗೆ ಸಾಕಷ್ಟು ತೃಪ್ತಿ ತಂದು ಕೊಟ್ಟಿದೆ. ಈಗಿನಕ್ಕಿಂತಲೂ ಹೆಚ್ಚಿನ ತೃಪ್ತಿಯನ್ನು ತಂದುಕೊಟ್ಟಿದೆ ಎನ್ನುವಂತಹ ಮಾತನ್ನು ಹೇಳುತ್ತೇನೆ. ನ್ಯಾಯವಾದಿಯಾಗಿ ಕೂಡ ಹದಿನೈದು ವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿದ್ದೇನೆ. ಇವೆಲ್ಲವುಗಳ ಅನುಭವದ ಆಧಾರದ ಮೇಲೆ ಪ್ರಾಮಾಣಿಕವಾಗಿ ಈ ಹುದ್ದೆಯನ್ನು ಯಾವುದೇ ರಾಗ, ದ್ವೇಷಗಳಿಲ್ಲದೆ, ನಿಷ್ಠೆ, ಪ್ರಾಮಾಣಿಕತೆ, ಮತ್ತು ದಕ್ಷತೆಯಿಂದ ಕೆಲಸ ಮಾಡುವಂತಹ ಸಂಕಲ್ಪವನ್ನು ಹೊಂದಿದ್ದೇನೆ. ಆ ದಿಸೆಯಲ್ಲಿ ನಾನು ಕಾರ್ಯೋನ್ಮುಖವಾಗುತ್ತೇನೆ. ನಮ್ಮೆಲ್ಲ ಸದಸ್ಯರು ನನ್ನ ಜೊತೆಯಲ್ಲಿದ್ದಾರೆ. ಎರಡನೇ ಸಾಲಿನಲ್ಲಿರುವಂತಹ ಜೆಡಿ(ಎಸ್) ಸದಸ್ಯರು ಇದ್ದಾರೆ. ಅವರ ನೈತಿಕ ಬೆಂಬಲದಿಂದ, ನಿಮ್ಮೆಲ್ಲರ ಸಹಾಯ, ಸಹಕಾರದಿಂದ ಅತ್ಯಂತ ಮಹತ್ತರವಾದ ಜವಾಬ್ದಾರಿಯನ್ನು ನಾನು ದಕ್ಷತೆಯಿಂದ, ನಿಷ್ಠೆಯಿಂದ ನಿರ್ವಹಿಸುತ್ತೇನೆ. ಜನಪರ ಕಾರ್ಯದಲ್ಲಿ ತೊಡಗಿದಾಗ ಟೀಕೆಗಳನ್ನು ನಾವು ಮಾಡಬೇಕಾಗುತ್ತದೆ. ನಾವು ಹೆಚ್ಚು ಟೀಕೆಗಳನ್ನು ಮಾಡಿದರೆ ನಮಗೇನೂ ಖುಷಿ ಅನಿಸುವುದಿಲ್ಲ. ಬಹಳಷ್ಟು ಟೀಕೆ ಮಾಡಿದರೆ ನಮಗೂ ಕೂಡ ಮನಸ್ಸಿಗೆ ಬಹಳ ನೋವಾಗುತ್ತದೆ. ನಮ್ಮಿಂದ ಟೀಕೆ ಮಾಡಿಕೊಳ್ಳುವಂತಹ, ಹೆಚ್ಚು ಚುಚ್ಚಿಸುಕೊಳ್ಳುವಂತಹ ಕೆಲಸ ಆಡಳಿತ ಪಕ್ಷ ಮಾಡುವುದಿಲ್ಲ ಎಂದು ನಾನು

ನಿರೀಕ್ಷೆ ಮಾಡುತ್ತೇನೆ. ಮುಖ್ಯಮಂತ್ರಿಗಳು ಹೇಳಿದ ಹಾಗೆ ನಾವು ರಥದ ಎರಡು ಗಾಲಿಗಳಾಗಿ ಕೆಲಸ ಮಾಡೋಣ. ಈ ರಾಜ್ಯದ ಜನತೆಗೆ ಒಳ್ಳೆಯ ಸಂದೇಶವನ್ನು ಮುಟ್ಟಿಸೋಣ ಎನ್ನುವಂತಹ ಮಾತನ್ನು ಹೇಳಿ ನನಗೆ ಈ ಅವಕಾಶ ಕೊಟ್ಟಿದಕ್ಕಾಗಿ ಎಲ್ಲಾ ಮಹನೀಯರುಗಳಿಗೆ, ಈ ಸದನದ ಎಲ್ಲಾ ಸದಸ್ಯರುಗಳಿಗೆ ಗೌರವ ಪೂರ್ವಕವಾದ ವಂದನೆಗಳನ್ನು ಸಲ್ಲಿಸುವುದರ ಜೊತೆಗೆ ತಮಗೆ ಮತ್ತೊಮ್ಮೆ ಶುಭ ಕಾಮನೆಗಳನ್ನು ಸಲ್ಲಿಸಿ ತಮ್ಮಿಂದ ಹೆಚ್ಚಿನ ಸಹಕಾರವನ್ನು ನಿರೀಕ್ಷಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

ಸಭಾಪತಿಯವರು:- ಸರ್ವಾನುಮತದಿಂದ ಈ ಒಂದು ಅತ್ಯಂತ ಗೌರವಾನ್ವಿತ ಸ್ಥಾನದಲ್ಲಿ ನನ್ನನ್ನು ಪುನ: ಕೂರಿಸುವುದಕ್ಕೆ ಸಹಕರಿಸಿದಂತಹ ಗೌರವಾನ್ವಿತ ಎಲ್ಲಾ ಸದಸ್ಯರುಗಳಿಗೆ ನನ್ನ ಹೃದಯ ಪೂರ್ವಕ ವಂದನೆಗಳನ್ನು ನಾನು ಮೊದಲಿಗೆ ಅರ್ಪಿಸುವುದಕ್ಕೆ ಇಷ್ಟಪಟುತ್ತೇನೆ. ಇವತ್ತು ಸ್ವಾಭಾವಿಕವಾಗಿ ನನ್ನ ಮನಸ್ಸಿನಲ್ಲಿ ವಿವಿಧ ರೀತಿಯ ಭಾವನೆಗಳು ಬರುತ್ತಿವೆ. ಎಲ್ಲಾ ಸದಸ್ಯರು ಮಾತನಾಡಿದಂತಹ ಸಂದರ್ಭದಲ್ಲಿ ಈ ಭಾವನೆಗಳ ಕಾರ್ಯ ರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡಬೇಕೆಂದು ನನಗನಿಸುತ್ತದೆ. ಹೆಚ್ಚಿನ ದಿನ ಸಭೆ ನಡೆಯಬೇಕು. ಎಲ್ಲರಿಗೂ ಅವಕಾಶ ಸಿಗಬೇಕು, ಭೇದಭಾವ ಯಾವುದೇ ರೀತಿಯಲ್ಲಿ ಇರಬಾರದು ಎನ್ನುವುದನ್ನು ಎಲ್ಲರೂ ವ್ಯಕ್ತ ಮಾಡಿದ್ದೀರಿ. ಖಂಡಿತವಾಗಿಯೂ ನಾನು ಆ ದಿಸೆಯಲ್ಲಿ ಹಿಂದೆ ಪ್ರಯತ್ನ ಮಾಡಿದ್ದೇನೆ, ಮುಂದೆಯೂ ನಾನು ಪ್ರಯತ್ನ ಮಾಡುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಈ ಸದನದ ಘನತೆ, ಗಾಂಭೀರ್ಯವನ್ನು ಹೆಚ್ಚಿಸಬೇಕೆಂದು ಎಲ್ಲರೂ ಹೇಳಿದ್ದೇವೆ.

100 ವರ್ಷ ದಾಟಿರುವ ಈ ಸದನದ ಹಿರಿಮೆ-ಗರಿಮೆಯನ್ನು ಜಾಸ್ತಿ ಮಾಡಬೇಕು ಎಂದರೆ ಎಲ್ಲರ ಸಹಕಾರ ಬೇಕಾಗುತ್ತದೆ. ನನಗೆ ಸರ್ಕಾರದ ಸಹಕಾರ ಬೇಕಾಗುತ್ತದೆ, ವಿರೋಧ ಪಕ್ಷದ ಸದಸ್ಯರ ಮತ್ತು ಎಲ್ಲ ಸದಸ್ಯರ ಸಹಕಾರ ಬೇಕಾಗುತ್ತದೆ. ನನಗೂ ಕೆಲವು ಬಾರಿ, ಹೆಚ್ಚಿಗೆ ದಿನ ಸದನ ನಡೆಯಲಿಲ್ಲ ಎಂದು ಬೇಜಾರಾಗುತ್ತದೆ. ನಾನು ಈ ಸದನದಲ್ಲಿ ಮೊದಲು ಬಂದಾಗ, ಈಗ ಮಾನ್ಯ ಅಮರನಾಥ್ ಪಾಟೀಲ್‌ರವರು ಎಲ್ಲಿ ಕುಳಿತಿದ್ದಾರೋ

ಅದೇ ಜಾಗದಲ್ಲಿ ಕುಳಿತುಕೊಳ್ಳುತ್ತಿದ್ದೆ. ಅಲ್ಲಿಂದ ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತು, ಅಲ್ಲಿಂದ ಈಕಡೆ ಸಭಾನಾಯಕನ ಸ್ಥಳದಲ್ಲಿ ಕುಳಿತು ಇವತ್ತು ಇಲ್ಲಿಗೆ ಬಂದು ಕುಳಿತಿದ್ದೇನೆ. ಹಿಂದಿನ ಎಲ್ಲ ದಿನಗಳನ್ನು ನೆನಪು ಮಾಡಿಕೊಂಡಾಗ ನನ್ನ ಮನಸ್ಸಿನಲ್ಲಿ ಒಂದು ಸಣ್ಣ ಕೊರತೆ ಕಾಡುತ್ತದೆ. ಸದನದಲ್ಲಿ ಮಾತನಾಡುವುದಕ್ಕೆ ಅವಕಾಶ ಸಿಗಲಿಲ್ಲ ಎಂದು ಹೇಳುವುದು ಬಹಳ ಸುಲಭ. ಆದರೆ ಅವಕಾಶಗಳನ್ನು ಕಲ್ಪಿಸಿಕೊಳ್ಳುವುದು ಸ್ವಲ್ಪ ಪರಿಶ್ರಮದ ಕೆಲಸ ಎಂದೆನಿಸುತ್ತದೆ. ಕೆಲವು ಬಾರಿ, ನಾನು ಪ್ರಯತ್ನಪಟ್ಟಿದ್ದೆ, ನಾನು ತಯಾರಾಗಿ ಬಂದಿದ್ದೆ ನನಗೆ ಮಾತನಾಡಲು ಅವಕಾಶ ಸಿಗಲಿಲ್ಲ ಎನ್ನುವ ಮಾತುಗಳನ್ನು ಮಾನ್ಯ ಸದಸ್ಯರಿಂದ ನಾನು ಕೇಳಿದ್ದೇನೆ. ಆದರೆ ಅವಕಾಶ ಸಿಗುವುದು–ಬಿಡುವುದು ನಮ್ಮ ಪ್ರಯತ್ನವನ್ನು ಅವಲಂಬಿಸಿರುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ ಜುಲೈ 16 ರಿಂದ ಅಧಿವೇಶನ ನಡೆಸಲಾಗುತ್ತದೆ ಎಂಬ ಮಾತನ್ನು ಹೇಳಿದರು. ಬಜೆಟ್ ಅಧಿವೇಶನ ಹೆಚ್ಚು ದಿನಗಳ ಕಾಲ ನಡೆಯಬೇಕು ಎನ್ನುವ ಆಸೆ ಇದೆ. ಆದರೆ ಅದಕ್ಕೆ ಎಲ್ಲರ ಸಹಕಾರ ಬೇಕಾಗುತ್ತದೆ. ದಯವಿಟ್ಟು ಯಾರೂ ತಪ್ಪು ತಿಳಿಯಬಾರದು. ಹಿಂದಿನ ನನ್ನ ಸಭಾಪತಿ ಅವಧಿಯಲ್ಲಿ, ನನ್ನೆದುರಿಗೆ ನಾಳೆಯ ಕಾರ್ಯಕಲಾಪದ ಪಟ್ಟಿಯನ್ನು ಮಾಡುವುದಕ್ಕೆ ಎಷ್ಟು ನೋಟಿಸ್‌ಗಳು ಬಂದಿವೆ ಎಂದು ನೋಡಿದಾಗ ಅದರಲ್ಲಿ ಕೆಲವರು ಹಿರಿಯರ ನೋಟಿಸ್‌ಗಳು ಬಿಟ್ಟರೆ ಬೇರೆ ಸದಸ್ಯರ ನೋಟಿಸ್‌ಗಳನ್ನು ನಾನು ಹುಡುಕಬೇಕಾದ ಪರಿಸ್ಥಿತಿ ಇರುತ್ತಿತ್ತು. ಬಹುಶ: ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಸಭಾಪತಿ ಗಳಾಗಿದ್ದಾಗಲೂ ಇದೇ ಪರಿಸ್ಥಿತಿ ಇತ್ತು ಎಂದು ನಾನು ಭಾವಿಸುತ್ತೇನೆ. ಇದಕ್ಕೆ ಕಾರಣ, ನಾನು ನೋಟಿಸ್ ಕೊಟ್ಟರೆ ಅದು ಚರ್ಚೆಗೆ ಬರುತ್ತದೆಯೋ ಇಲ್ಲವೋ ಎನ್ನುವ ಅನುಮಾನ ಇರಬಹುದು ಅಥವಾ ಇದೆಲ್ಲ ನನಗ್ಯಾಕೆ ಬೇಕು ಎನ್ನುವ ಮನೋಭಾವ ಇರಬಹುದು. ದಯಮಾಡಿ ಹಾಗೆ ಮಾಡಬೇಡಿ. ಎಲ್ಲರೂ ನೋಟಿಸ್ ಕೊಡಲಿ. ಆ ಎಲ್ಲಾ ನೋಟಿಸ್‌ಗಳ ಬಗ್ಗೆ ಚರ್ಚೆಯಾದರೆ ಬಹಳ ಒಳ್ಳೆಯದು. ನಾನು ನೋಟಿಸ್ ಕೊಟ್ಟರೆ ಅದು ಚರ್ಚೆಗೆ ಬರುತ್ತದೆಯೋ ಇಲ್ಲವೋ ಎನ್ನುವ ಭಾವನೆ ಇಲ್ಲದೆಯೇ

ನೋಟಿಸ್‌ಗಳನ್ನು ಕೊಡುವಂಥದ್ದರ ಕಡೆ ಮಾನ್ಯ ಸದಸ್ಯರುಗಳು ಗಮನ ಕೊಡಬೇಕು. ಕಾರ್ಯಕಲಾಪಗಳಲ್ಲಿ ಜಾಸ್ತಿ ಭಾಗವಹಿಸಬೇಕು ಎಂದಾಗ ಸದನದಲ್ಲಿ ಕುಳಿತುಕೊಳ್ಳುವಂತಹ ಸೌಜನ್ಯ ಮತ್ತು ಸಹನೆ ಇರಬೇಕಾಗುತ್ತದೆ. ಇವತ್ತು 11.00 ಗಂಟೆಗೆ ಸದನ ಪ್ರಾರಂಭವಾಗಿದೆ. ಈಗ 1.45 ಗಂಟೆ. ಎರಡು ಮುಕ್ಕಾಲು ಗಂಟೆ ಅವಧಿ ಕೂಡ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ ಎನ್ನುವಂಥದಾದರೆ ಆಗ ನಾನು ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಸದನದ ಹಿರಿಯರೆಲ್ಲರೂ ಕುಳಿತುಕೊಳ್ಳುತ್ತೇವೆ, ಆದರೆ ಕೆಲವರಿಗೆ ಅದು ಕಷ್ಟವಾಗಬಹುದೇನೋ ಎಂದೆನಿಸುತ್ತದೆ. ಅದರ ಕಡೆ ಕೂಡ ನಾವು ಗಮನಿಸಬೇಕು. ಅದಕ್ಕಾಗಿ ನಾನು ಹೊಸ ಸದಸ್ಯರ ಹೆಸರುಗಳನ್ನು ಹೇಳಿದಾಗ ಕೊನೆಯಲ್ಲಿ ಒಂದು ಮಾತನ್ನು ಹೇಳಿದೆ. ಟ್ರೈನಿಂಗ್ ಕ್ಯಾಂಪ್ ಅಥವಾ ರಿಫ್ರೆಶಿಂಗ್ ಕೋರ್ಸ್‌ಗಳನ್ನು ನನ್ನ ಕಚೇರಿಯ ಕಡೆಯಿಂದ ನಡೆಸುವುದಕ್ಕೆ ಸಂಬಂದಪಟ್ಟಂತೆ ಖಂಡಿತ ವ್ಯವಸ್ಥೆ ಮಾಡುತ್ತೇನೆ. ಅದರ ಮೂಲಕ ಲಾಭ ಪಡೆದು ನಮ್ಮ ಸದನದ ಚಟುವಟಿಕೆಯನ್ನು ಜಾಸ್ತಿ ಮಾಡೋಣ. ಪ್ರಜಾಪ್ರಭುತ್ವದಲ್ಲಿ ಸಮಸ್ಯೆಗಳ ಪರಿಹಾರಕ್ಕೆ ಚರ್ಚೆಯಲ್ಲದೇ ಬೇರೆ ಯಾವುದೇ ದಾರಿಯಿಲ್ಲ. ಸ್ವಲ್ಪ ಸಹನೆಯೂ ಬೇಕಾಗುತ್ತದೆ. ಆಕಡೆಯಿಂದ ಟೀಕೆಗಳು ಬಂದಾಗ ಈಕಡೆಯವರು ಸಹಿಸಬೇಕಾಗುತ್ತದೆ, ಈಕಡೆಯಿಂದ ಟೀಕೆಗಳು ಬಂದಾಗ ಆಕಡೆಯವರೂ ಸಹಿಸಬೇಕಾಗುತ್ತದೆ. ಕೇಳುವವರು ಸಮಾಧಾನವನ್ನು ರೂಢಿಸಿಕೊಂಡರೆ ಈ ಸದನದ ಘನತೆ ಮೇಲಕ್ಕೆ ಹೋಗುತ್ತದೆ ಎಂಬುದನ್ನೇನು ಹಿರಿಯರು ಹೇಳುತ್ತಿದ್ದಾರೋ ಅದನ್ನು ನಾನು ಪುನರ್ಮನನ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ.

ಇವತ್ತೊಂದು ಚಾರಿತ್ರಿಕ ದಿನ ಎನ್ನುವ ಮಾತನ್ನು ಹೇಳಿದೆವು. ಖಂಡಿತವಾಗಿಯೂ ಇದು ಕರ್ನಾಟಕದ ವಿಧಾನಮಂಡಲದ ಚಾರಿತ್ರಿಕವಾದ ದಿನ. ಕಾನೂನನ್ನು ಪೂರ್ಣ ಪರಿಶೀಲನೆ ಮಾಡಿ ಸರ್ಕಾರ ಸ್ಪಂದಿಸಿದೆ. ಅದರಂತೆ ಇವತ್ತು ಒಂದು ದಿನದ ಅಧಿವೇಶನ ಮಾಡಬೇಕೆಂದು ಸರ್ಕಾರ ತೀರ್ಮಾನ ಮಾಡಿ ಈ ಅಧಿವೇಶನವನ್ನು ನಡೆಸಿದೆ. ಇದು ಅದ್ಭುತ. ಕರ್ನಾಟಕ ವಿಧಾನ ಮಂಡಲದ ಇತಿಹಾಸದಲ್ಲಿ ಈ ರೀತಿಯ ಘಟನೆ

ನಡೆದದ್ದು ಅಪರೂಪ. ಈ ರೀತಿ ಹಿಂದೆ ನಡೆದಿದೆ ಎಂದು ನನಗನ್ನಿಸುತ್ತಿಲ್ಲ. ಹಾಗಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಇವತ್ತು ವಿರೋಧ ಪಕ್ಷದ ನಾಯಕನ ಸ್ಥಾನದಲ್ಲಿ ಒಬ್ಬ ಸುಸಂಸ್ಕೃತ, ಸಜ್ಜನ ಆದರೆ ಛಲವಾದಿ ರಾಜಕಾರಣಿಯನ್ನು ನೇಮಕ ಮಾಡಿದ್ದಾರೆ. ಆದ್ದರಿಂದ ಅವರನ್ನೂ ಸಹ ನಾನು ಅಭಿನಂದಿಸಲಿಚ್ಛಿಸುತ್ತೇನೆ. ಜೂನ್ 21ನೇ ತಾರೀಖಿನಂದು ನನ್ನ ಸದಸ್ಯತ್ವದ ಅವಧಿ ಮುಗಿದಿತ್ತು. ನನ್ನನ್ನು ನನ್ನ ಪಕ್ಷ ಪುನ: ಚುನಾವಣೆಗೆ ನಿಲ್ಲಿಸಿತು, ಪಕ್ಷದ ಕಾರ್ಯಕರ್ತರು ದುಡಿದರು, ಕೆಲಸ ಮಾಡಿದರು, ಅಭಿಮಾನಿಗಳು ಮತ ಕೊಟ್ಟರು ಮತ್ತು ಆಶೀರ್ವಾದ ಮಾಡಿದರು. ಹಾಗಾಗಿ ಅವರಿಗೂ ನಾನು ಅಭಿನಂದನೆ ಸಲ್ಲಿಸುತ್ತೇನೆ. ನನ್ನ ಪಕ್ಷ ಮತ್ತು ಸರ್ಕಾರ ಇವತ್ತು ಮತ್ತೆ ನನ್ನನ್ನು ಈ ಸ್ಥಾನದಲ್ಲಿ ಕೂರಿಸಿದೆ. ಅವರ ಈ ತೀರ್ಮಾನಕ್ಕೆ ನಾನು ಧನ್ಯವಾದಗಳನ್ನರ್ಪಿಸುತ್ತೇನೆ. ಹಿಂದೆ ನಾನು ವಿಧಾನಪರಿಷತ್ತಿನ ಸಭಾಪತಿಯಾಗಿದ್ದಾಗ ಹೇಳಿದ ಮಾತನ್ನು ಈಗೊಂದು ಸಲ ಹೇಳಬೇಕು ಎನಿಸುತ್ತಿದೆ. ನಾನು ಭಾರತೀಯ ಜನತಾ ಪಾರ್ಟಿಯ ಒಬ್ಬ ಸದಸ್ಯ. ಈ ಕುರ್ಚಿಯಲ್ಲಿ ಕುಳಿತಿರುವ ಕಾರಣಕ್ಕಾಗಿ ಆ ಸಾಮಾನ್ಯ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಿಲ್ಲ, ಕೊಡುವುದಿಲ್ಲ ಎಂದು ಹೇಳಿದ್ದೆ. ನಾನು ಅದನ್ನು ಹಾಗೆಯೇ ಮುಂದುವರೆಸುತ್ತೇನೆ. ಈ ಕುರ್ಚಿಯಲ್ಲಿ ಕುಳಿತಿರುವಷ್ಟು ಕಾಲ ಈ ಸದನದ ಘನತೆ-ಗಾಂಭೀರ್ಯವನ್ನು ಕಾಪಾಡುವ ದೃಷ್ಟಿಯಿಂದ ನಿಷ್ಪಕ್ಷಪಾತವಾಗಿ ನಡೆದುಕೊಂಡು ಹೋಗುತ್ತೇನೆ. ಈ ಸದನದ ಮೂಲಕ ನಮ್ಮ ರಾಜ್ಯದ ಜನತೆಯ ಸೇವೆ ಮಾಡುವುದಕ್ಕೆ, ಎಲ್ಲರ ಹಿತ ಕಾಪಾಡುವುದಕ್ಕೆ ನಿಮ್ಮೆಲ್ಲರ ಸಹಕಾರ ಸಿಗುತ್ತದೆ ಎನ್ನುವ ನಂಬಿಕೆಯಿಂದ ಸದನ ನಡೆಸಿಕೊಂಡು ಹೋಗುತ್ತೇನೆ ಎನ್ನುವ ಮಾತನ್ನು ಆವತ್ತು ಹೇಳಿದ್ದೆ. ಆ ಮಾತನ್ನು ಪುನರುಚ್ಚಾರ ಮಾಡುತ್ತಾ ಮುಂದುವರೆಯೋಣ. ಪ್ರಜಾಪ್ರಭುತ್ವದಲ್ಲಿ ಸಮಸ್ಯೆಗಳನ್ನು ಬಗೆಹರಿಸಲು ಚರ್ಚೆಯೊಂದು ಬಿಟ್ಟು ಬೇರೆ ಯಾವುದೇ ದಾರಿಯಿಲ್ಲ. ನಾವು ಚರ್ಚೆ ಮಾಡಬೇಕಾಗುತ್ತದೆ, ಸರಿ-ತಪ್ಪುಗಳನ್ನು ಹೇಳಬೇಕಾಗುತ್ತದೆ. ನಾವೆಲ್ಲರೂ ಒಟ್ಟಾಗಿ ಮುಂದಕ್ಕೆ ಹೋಗೋಣ. ರಾಜ್ಯದ ಸರ್ವತೋಮುಖ ಪ್ರಗತಿಗಾಗಿ ಶ್ರಮಿಸೋಣ. ಮಾನ್ಯ ನಾಣಯ್ಯನವರು

ಮಾತನಾಡುತ್ತಾ ಮಾರ್ಮಿಕವಾಗಿ ಕೆಲವು ಮಾತುಗಳನ್ನು ಹೇಳಿದರು. ಇದರಿಂದ ಕೆಲವರಿಗೆ ಸ್ವಲ್ಪ ಕಷ್ಟವಾಯಿತು. ರಾಜ್ಯದಲ್ಲಿ ಬರಗಾಲ ಇದೆ, ಜೂನ್ ತಿಂಗಳು ಮುಗಿಯುತ್ತಿದ್ದರೂ ನಿರೀಕ್ಷಿಸಿದಷ್ಟು ಮಳೆ ಬರಲಿಲ್ಲ, ರಾಜ್ಯದ ಜನತೆಯ ಗತಿ ಏನು ಎಂಬ ಮಾತುಗಳನ್ನು ಹೇಳಿದರು. ಇದರ ಬಗ್ಗೆ ಕೇವಲ ಹೇಳದೆ ಕಾರ್ಯೋನ್ಮುಖರಾಗಬೇಕು. ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ, ರಾಜ್ಯ ಸರ್ಕಾರ ಬರ ಪರಿಸ್ಥಿತಿಯ ನಿರ್ವಹಣೆಯನ್ನು ತುಂಬ ಚೆನ್ನಾಗಿ ಮಾಡುತ್ತಿದೆ ಎಂದು ಕೇಂದ್ರ ಸಚಿವರು ಷಹಬಾಸ್‌ಗಿರಿಯನ್ನು ಕೊಟ್ಟಿದ್ದಾರೆ ಎಂಬ ಮಾತನ್ನು ಹೇಳಿದರು. ಬರ ಇರುವುದು ನಿಜ. ನಾವೆಲ್ಲರೂ ಸೇರಿ, ನಿರ್ವಹಣೆ ಮಾಡಿ ರಾಜ್ಯದ ಜನತೆಯ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸೋಣ ಎಂಬ ಮಾತನ್ನು ಹೇಳುತ್ತಾ, ಮತ್ತೊಮ್ಮೆ ತಮ್ಮೆಲ್ಲರಿಗೂ ಶುಭ ಕಾಮನೆಗಳನ್ನು ಕೋರುತ್ತಾ, ನೀವು ನನಗೆ ವ್ಯಕ್ತ ಮಾಡಿದ ಹೃದಯಪೂರ್ವಕ ಭಾವನೆಗಳಿಗೆ ನಾನು ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):- ನಾನು ಆಗಲೇ ಮಾತನಾಡುತ್ತಾ ಒಂದು ಮಾತು ಹೇಳುವುದನ್ನು ಮರೆತೆ. ಪ್ರತಿ ಪಕ್ಷ ಮತ್ತು ಆಡಳಿತ ಪಕ್ಷದವರ ಜೊತೆ ಕಾರ್ಯಾಂಗದ ಸಹಕಾರ ಹಾಗೂ ಅದರ ಜೊತೆ ಪ್ರಜಾಪ್ರಭುತ್ವದ ನಾಲ್ಕನೆ ಅಂಗವಾದ ಮಾಧ್ಯಮದವರ ಸಹಕಾರವನ್ನು ಕೂಡ ನಾನು ಅಪೇಕ್ಷೆ ಮಾಡುತ್ತೇನೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಸಭಾಪತಿಯವರು:- ಧನ್ಯವಾದಗಳು. ನಾವು ಮತ್ತೆ ಆದಷ್ಟು ಬೇಗ ಸೇರೋಣ. ಸಭೆಯನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಗುತ್ತದೆ. ಎಂದಿನಂತೆ ಅಂತ್ಯದಲ್ಲಿ ರಾಷ್ಟ್ರಗೀತೆಗೆ ಗೌರವ ಸಲ್ಲಿಸಿ ಮುಂದುವರೆಯೋಣ.

(ರಾಷ್ಟ್ರ ಗೀತೆಯೊಂದಿಗೆ ಸದನವು
ಮಧ್ಯಾಹ್ನ 1 ಗಂಟೆ 48 ನಿಮಿಷದಲ್ಲಿ
ಅನಿರ್ದಿಷ್ಟ ಕಾಲದವರೆಗೆ
ಮುಂದೂಡಲ್ಪಟ್ಟಿತು)